01 October 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.vartharnan@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅಹಂಕಾರದ ಗುಣ ಜೀವನಕ್ಕೆ ನೆಮ್ಮದಿ ತರುವುದಿಲ್ಲ , ಮನಸ್ಸನ್ನು ಸದಾ ವಿಚಲಿತಗೊಳಿಸುತ್ತದೆ!

ಸ್ನೇಹಾ ಆನಂದ್


ಸಣ್ಣಪುಟ್ಟ ವ್ಯಾಜ್ಯಗಳಗೂ ನ್ಯಾಯಾಲಯಕ್ಕೆ ಬರುವುದನ್ನು ತಪ್ಪಿಸಲು ಕೇಂದ್ರ — ಪುಟ ಸಂ. 2

ಅ.13 ರಿಂದ 'ದಸರಾ ಕವಿಗೋಷ್ಠಿ: ಡಾ.ಎಂ. ದಾಸೇಗೌಡ — ಪುಟ ಸಂ. 3



ಶೀಘ್ರದಲ್ಲಿ ಸಿಎಂಯಿಂದ ಲ್ಯಾನ್ಸ್‌ಡೌನ್, ಮಾರುಕಟ್ಟೆ ವೀಕ್ಷಣೆ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 285 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಚಾಮುಂಡಿ ಬೆಟ್ಟಕ್ಕೆ ರಜನಿಕಾಂತ್ ಭೇಟಿ



**ಮೈಸೂರು:** ದಕ್ಷಿಣ ಭಾರತದ ಖ್ಯಾತ ನಟ, ಸೂಪರ್‌ಸ್ಟಾರ್ ರಜನಿಕಾಂತ್ ಅವರು ಬುಧವಾರ ಮೈಸೂರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು.

ಮೈಸೂರಿನಲ್ಲಿ ಚಿತ್ರೀಕರಣಕ್ಕಾಗಿ ತಂಗಿರುವ ಅವರು ಚಾಮುಂಡಿ ಬೆಟ್ಟಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ದೇವಸ್ಥಾನದ ಆಡಳಿತ ಮಂಡಳಿ ನಟ ರಜನಿಕಾಂತ್ ಅವರಿಗೆ ಹೂವಿನ ಹಾರ ಹಾಕಿ ಸನ್ಮಾನಿಸಿದರು. ರಜನಿಕಾಂತ್ ಅವರನ್ನು ನೋಡಲು ಅಭಿಮಾನಿಗಳು ಜಮಾಯಿಸಿದ್ದರು.

## ಸಿದ್ದು–ವೇಣು ಭೇಟಿ: ರಾಜಕೀಯ ಚರ್ಚೆ



**ಬೆಂಗಳೂರು:** ನವದೆಹಲಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ನಿಗಮ ಮಂಡಳಿ ನೇಮಕ, ವಿಧಾನ ಪರಿಷತ್ ಚುನಾವಣೆಗೆ ಹೆಸರು ಅಂತಿಮಗೊಳಿಸುವ ಬಗ್ಗೆ ಚರ್ಚೆ ನಡೆಸಿದ್ದಾರೆ. ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆಯೂ ಚರ್ಚೆ ನಡೆದಿದೆ ಎಂದರು.

## ಪಂಚಾಯಿತಿ ಚುನಾವಣೆಗೆ ಸಿದ್ಧತೆ: ಲಕ್ಷ್ಮಣ ಸವದಿ



**ಹಾಸನ:** ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾಪಂಚಾಯಿತಿ ಚುನಾವಣೆಗಳನ್ನು ಆದಷ್ಟು ಬೇಗ ನಡೆಸಲು ಸರ್ಕಾರ ತೀರ್ಮಾನಿಸಿದೆ. ಶೀಘ್ರವೇ ಚುನಾವಣಾ ಅಧಿಸೂಚನೆ ಹೊರ ಬೀಳುವ ನಿರೀಕ್ಷೆಯಿದೆ ಎಂದು ಸಹಕಾರ ಸಚಿವ ಲಕ್ಷ್ಮಣ ಸವದಿ ತಿಳಿಸಿದರು.

ಹಾಸನದಲ್ಲಿ ಮಾತನಾಡಿದ ಅವರು, ಚುನಾವಣೆ ಎದುರಿಸಲು ಸರ್ಕಾರ ಸಿದ್ಧವಾಗಿದೆ. ಮೀಸಲಾತಿ ಅಂತಿಮ ಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಲಿದ್ದು, ಬಳಿಕ ಮೀಸಲಾತಿ ಅಂತಿಮ ಗೊಂಡು ಚುನಾವಣೆ ಪ್ರಕ್ರಿಯೆ ಮುಂದುವರಿಯಲಿದೆ.

ರಾಜ್ಯದಲ್ಲಿ ಈ ಬಾರಿ 50 ವರ್ಷಗಳ ಅವಧಿಯಲ್ಲೇ ಅತ್ಯಂತ ಕಡಿಮೆ ಮಳೆಯಾಗಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಬರ ಘೋಷಣೆ ಪ್ರಕ್ರಿಯೆ ಆರಂಭವಾಗಿದೆ. ಬೆಳೆ ಹಾನಿ, ಜಾನುವಾರು ರಕ್ಷಣೆ, ಕುಡಿಯುವ ನೀರು ಸೇರಿದಂತೆ ವಿವಿಧ ವಿಚಾರಗಳ ಕುರಿತು ಈಗಾಗಲೇ ಸಮೀಕ್ಷೆ ನಡೆಯುತ್ತಿದೆ. ಈ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾಗಿ ಬರ ಪರಿಸ್ಥಿತಿ ಎದುರಿಸಬೇಕಿದೆ. ರೈತರಿಗೆ ಆಗಿರುವ ನಷ್ಟವನ್ನು ಹಂತ ಹಂತವಾಗಿ ತುಂಬಿಸುವ ಜವಾಬ್ದಾರಿ ಎರಡೂ ಸರ್ಕಾರಗಳ ಮೇಲಿದೆ ಎಂದು ಹೇಳಿದರು.

# 2028ಕ್ಕೂ 'ಗ್ಯಾರಂಟಿ' ಪಕ್ಕಾ

## ಮುಂದಿನ ಚುನಾವಣೆಯಲ್ಲೂ ಕಾಂಗ್ರೆಸ್ ಗೆಲುವು: ಸಿಎಂ ಡಿ.ಕೆ.ಶಿವಕುಮಾರ್

**ಪ್ರಕಾಶ್ ಬೆಲ್ಲದ್/ಎಂ.ಆರ್.ಪ್ರಕಾಶ್**



**ಚಾಮರಾಜನಗರ/ಕೊಳ್ಳೇಗಾಲ:** ಮುಂದಿನ ಚುನಾವಣೆಯಲ್ಲಿಯೂ ನಿಮ್ಮ ಸ್ಫೂರ್ತಿಯಿಂದ ನಮ್ಮದೇ ಸರ್ಕಾರ ಬರಲಿದೆ. 2028ಕ್ಕೂ ನಮ್ಮ ಗ್ಯಾರಂಟಿಗಳು ಮುಂದುವರಿಯುತ್ತವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದರು.

ಕೊಳ್ಳೇಗಾಲ ಮತ್ತು ಹನೂರು ತಾಲ್ಲೂಕಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜಿಲ್ಲೆಯ ಆಕ್ಸಿಜನ್ ದುರಂತ ಸಂತ್ರಸ್ತರಿಗೆ ಸರ್ಕಾರಿ ನೌಕರಿ ಕೊಡಲಾಗಿದೆ. ಇದು ಐತಿಹಾಸಿಕ ಕಾರ್ಯ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದಿದೆ ಎಂದು ಹೇಳಿದರು.

ದೇವರು ನಮಗೆ ಎರಡು ಆಯ್ಕೆ ಕೊಟ್ಟಿದ್ದಾನೆ. ಒಂದು ಕೊಟ್ಟು ಹೋಗೋದು ಇನ್ನೊಂದು ಬಿಟ್ಟು ಹೋಗುವುದು. ಮಲೆ ಮಹದೇಶ್ವರ ಬೆಟ್ಟದಲ್ಲಿ ಸಂಪುಟ ಸಭೆ ನಡೆಸಿ ಮೂರು ಸಾವಿರಕ್ಕೂ ಹೆಚ್ಚು ಕೋಟಿ ಅಭಿವೃದ್ಧಿ ಕೆಲಸಕ್ಕೆ ತೀರ್ಮಾನ ಮಾಡಿದ್ದೇವೆ. ರಾಜ್ಯ ಸರ್ಕಾರ ನಿಮ್ಮ ಜೊತೆ ಇದೆ ಎಂಬ ಸಂದೇಶ ರವಾನಿಸಲು ನಾವು ಬಂದಿದ್ದೇವೆ ಎಂದು ತಿಳಿಸಿದರು.

ಟೀಕೆ ಎದುರಿಸಿ ಗೆದ್ದರೆ ನಾಯಕನಾಗುತ್ತಾನೆ, ಸೋತರೆ ಮಾರ್ಗದರ್ಶಕನಾಗುತ್ತಾನೆ. ಪುಟ 2ಕ್ಕೆ

### ವಂದೇಮಾತರಂ ಮೊಟಕು

ಕೊಳ್ಳೇಗಾಲ ಎಂಜಿಎಸ್ವಿ ಕಾಲೇಜು ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಂದೇ ಮಾತರಂ ಗೀತೆಯನ್ನು ಅರ್ಧಕ್ಕೆ ಮೊಟಕು ಮಾಡಲಾಯಿತು. ಗಾಯಕರು ವಂದೇ ಮಾತರಂ ಗೀತೆಯ ಎರಡು ಚರಣದ ಬಳಿಕ ಮೂರನೇ ಚರಣವನ್ನು ಆರಂಭಿಸಿದರು. ಮೂರನೇ ಚರಣದ ಸಾಲುಗಳನ್ನು ಹಾಡುಗಾರರು ಆರಂಭಿಸಿದಾಗ ತಕ್ಷಣವೇ ಪೂರ್ತಿ ಹಾಡು ಹಾಡದಂತೆ ಸಿಎಂ ಡಿಕೆಶಿ ಸೂಚನೆ ನೀಡಿದರು. ಶಾಸಕ ಪುಟ 2ಕ್ಕೆ

### ನುಡಿದಂತೆ ನಡೆದ ಸರ್ಕಾರ

ಚಾಮರಾಜನಗರ: ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಜಿಲ್ಲೆಯ ಜನರಿಗೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಶಕ್ತಿ ತುಂಬುವ ಮೂಲಕ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಸಂಕಲ್ಪ ತೊಟ್ಟಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೊಳ್ಳೇಗಾಲ–ಹನೂರು ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿ ಶಿವಕುಮಾರ್ ಮಾತನಾಡಿದರು. ಈ ಹಿಂದೆ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ನಡೆಸಿ, ಈ ಜಿಲ್ಲೆಗೆ 3 ಸಾವಿರ ಕೋಟಿ ರೂ.ಗಳ ಕಾಮಗಾರಿ ನೀಡಿ, ಜಿಲ್ಲೆಯ ಜನರನ್ನು ಅಭಿವೃದ್ಧಿಯ ಪಥಕ್ಕೆ ಕರೆದೊಯ್ಯಲಾಗಿತ್ತು. ಜನರಿಂದ ಅಧಿಕಾರಕ್ಕೆ ಬಂದ ನಮ್ಮ ಗ್ಯಾರಂಟಿ ಸರ್ಕಾರ, ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಶಂಕುಸ್ಥಾಪನೆ ನೆರವೇರಿಸಿದೆ ಎಂದು ಹೇಳಿದರು.

ಶಿವನು ಗಂಗೆಗೆ ತನ್ನ ತಲೆಯ ಮೇಲೆ ಸ್ಥಾನ ನೀಡಿದ್ದರೆ, ಕಾಂಗ್ರೆಸ್ ಪುಟ 2ಕ್ಕೆ

## ಬಸ್ ಟಿಕೆಟ್ ದರ ಹೆಚ್ಚಳ: ಸಚಿವ ಬೈರತಿ ಸುರೇಶ್



**ಬೆಂಗಳೂರು:** ಕೇಂದ್ರ ಸರ್ಕಾರ ನಾಲ್ಕು ಬಾರಿ ಡಿಸೇಲ್ ದರ ಏರಿಕೆ ಮಾಡಿದೆ. ಹೀಗಾಗಿ ಬಸ್ ಟಿಕೆಟ್ ದರ ಏರಿಸುವುದು ಅನಿವಾರ್ಯ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಬಸ್ ಟಿಕೆಟ್ ದರ ಏರಿಕೆ ವಿಚಾರ ಸಂಬಂಧ ನಿವೃತ್ತ ಐಎಎಸ್ ಅಧಿಕಾರಿ ಅತುಲ್ ತಿವಾರಿ ನೇತೃತ್ವದಲ್ಲಿ ವರದಿ ಸಿದ್ದಪಡಿಸಲು ಸಮಿತಿ ರಚಿಸಲಾಗಿತ್ತು. ಗುರುವಾರ, ಶುಕ್ರವಾರ ವರದಿ ಸಲ್ಲಿಕೆಯಾಗಲಿದೆ. ವರದಿ ನೋಡುತ್ತೇನೆ. ವರದಿ ನೋಡಿ ಸಿಎಂ ಜೊತೆ ಚರ್ಚಿಸಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ದಸರಾದ ಒಳಗೆ ಬಸ್ ಟಿಕೆಟ್ ದರ ಹೆಚ್ಚಳ ಆಗುತ್ತಾ ಅನ್ನೋದು ಗೊತ್ತಿಲ್ಲ. ಮೊದಲು ವರದಿ ಸಲ್ಲಿಕೆಯಾಗಲಿ. ಆನಂತರ ಸಿಎಂ ಜೊತೆ ಚರ್ಚಿಸಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡುತ್ತೇವೆ ಎಂದರು.

## ಹಣ ಇಲ್ಲದಿದ್ದರೂ ಬಿಎಸ್‌ವೈ ಯೋಜನೆ ಘೋಷಣೆ: ಸಿಎಂ ಟೀಕೆ



**ಕೊಳ್ಳೇಗಾಲ:** ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಸರ್ಕಾರದ ಬಳಿ ಹಣ ಇಲ್ಲದಿದ್ದರೂ ಬಹಳ ಯೋಜನೆಗಳನ್ನು ಘೋಷಣೆ ಮಾಡಿದ್ದರು. ಈಗ ಈ ಎಲ್ಲ ಕಾಮಗಾರಿಗಳು ಮುಕ್ತಾಯ ಹಂತಕ್ಕೆ ಬಂದಿರುವುದರಿಂದ ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೊಳ್ಳೇಗಾಲ ಹಾಗೂ ಹನೂರು ತಾಲ್ಲೂಕಿನಲ್ಲಿ ಬುಧವಾರ ಹಲವು ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಗೆ ಆಗಮಿಸಿದ್ದ ಸಂದರ್ಭ ಹೆಲಿಪ್ಯಾಡ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಅವರು ಮಾತನಾಡಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಆಗಿರುವ ಅನಾಹುತಗಳ ಪರಿಣಾಮ ಆರ್ಥಿಕ ಸಂಪನ್ಮೂಲ ಕೊರತೆಯಾಗಿರುವ ಬಗ್ಗೆ ಆರ್ಥಿಕ



ಇಲಾಖೆ ಸರ್ಕಾರಕ್ಕೆ ಪತ್ರ ಬರೆದಿದೆ. ಆದರೂ ಗುತ್ತಿಗೆದಾರರ ಹಿತದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸರ್ಕಾರದ ವಿರುದ್ಧ ಗುತ್ತಿಗೆದಾರರ ಸಂಘ ಕಮಿಷನ್ ಆರೋಪ ಮಾಡಿರುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ ಆರೋಪ ಸಂಬಂಧ ತನಿಖೆ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಎಸ್‌ಐಆರ್ ವಿರುದ್ಧ ಕಾಂಗ್ರೆಸ್ ಮಾತ್ರವಲ್ಲ. ಪ್ರಧಾನಿ ನರೇಂದ್ರ ಮೋದಿ ನೇಮಕ ಮಾಡಿದವರೇ ವಿರೋಧಿಸುತ್ತಿದ್ದಾರೆ. ಎಸ್‌ಐಆರ್ ಹೆಸರಿನಲ್ಲಿ ಬಡವರು, ಅಲ್ಪಸಂಖ್ಯಾತರ ಮತದಾನದ ಹಕ್ಕುಗಳನ್ನು ಕಸಿಯುವ ಷಡ್ಯಂತ್ರ ನಡೆದಿದೆ. ಕಾಂಗ್ರೆಸ್ ಹೋರಾಟ ಮುಂದುವರಿಯಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸಚಿವರಾದ ಪುಟ್ಟರಂಗಶೆಟ್ಟಿ, ಯು.ಟಿ.ಖಾದರ್, ಕೆ.ಎಚ್.ಮುನಿಯಪ್ಪ, ಅಜಯ್ ಸಿಂಗ್, ಚೆಲುವರಾಯಸ್ವಾಮಿ ಇದ್ದರು.



## ಎಂಆರ್‌ಪಿಎಲ್‌ನಲ್ಲಿ ಸ್ಫೋಟ: ಒಬ್ಬ ಸಾವು, 8 ಮಂದಿಗೆ ಗಾಯ

**ಮಂಗಳೂರು:** ಜೋಕಟ್ಟೆ ಬಳಿ ಇರುವ ಮಂಗಳೂರು ರಿಫೈನರಿ ಆಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್‌ನಲ್ಲಿ ಬಾಯ್ಲರ್ ಸ್ಫೋಟಗೊಂಡಿದೆ. ಘಟನೆಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ. 8 ಮಂದಿಗೆ ಗಾಯಗೊಂಡಿದ್ದಾರೆ.

ಸದ್ಯ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ. ಸ್ಫೋಟದ ಬಳಿಕ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಟ್ಟ ಹೊಗೆ ಆವರಿಸಿತ್ತು.

ಸ್ಫೋಟ ಸಂಭವಿಸಿದ ಸ್ಥಳದ ಸಮೀಪದಲ್ಲಿದ್ದ ಮಂಗಳೂರು ಹೊರವಲಯದ ಹಳೆಯಂಗಡಿ ನಿವಾಸಿಯಾದ ಮನೀಶ್ (30) ಮೃತಪಟ್ಟಿದ್ದಾರೆ. ಗಾಯಗೊಂಡರುವ ರಾಜೇಶ್ ಬ್ಯಾಪ್ಟಿಸ್ಟ್ ಅವರೊಂದಿಗೆ ಮನೀಶ್ ಕೂಡ ಸ್ಥಳದಲ್ಲಿದ್ದರು ಎಂದು ತಿಳಿದುಬಂದಿದೆ.

## ವಾರ್ತಾ ಇಲಾಖೆಯ ನಿವೃತ್ತಿ ವೇತನ ಸಮಿತಿಗೆ ದಯಾಶಂಕರ ಮೈಲಿ ನೇಮಕ



ಮೈಸೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪತ್ರಕರ್ತರ ನಿವೃತ್ತಿ ವೇತನ ಸಮಿತಿಗೆ ನೂತನ ಸದಸ್ಯರಾಗಿ ಮೈಸೂರಿನ ಹಿರಿಯ ಪತ್ರಕರ್ತ ದಯಾಶಂಕರ ಮೈಲಿ ಅವರನ್ನು ರಾಜ್ಯ ಸರ್ಕಾರ ನೇಮಿಸಿದೆ.

ಈ ಕುರಿತು ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ, ತಕ್ಷಣದಿಂದಲೇ ಜಾರಿಗೆ ಬರುವಂತೆ ಜವಾಬ್ದಾರಿ ವಹಿಸಲಾಗಿದೆ. ಮೂರು ದಶಕಕ್ಕೂಹೆಚ್ಚು ಕಾಲ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿರುವ ದಯಾಶಂಕರ ಮೈಲಿ ಅವರ ಈ ನೇಮಕಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರ ವಲಯ ಹಾಗೂ ಗಣ್ಯರು ಹರ್ಷರು ವ್ಯಕ್ತಪಡಿಸಿದ್ದಾರೆ.

## ಬಸವನ ಬಾಗೇವಾಡಿಯಲ್ಲಿ 3.5 ತೀವ್ರತೆ ಭೂಕಂಪನ

**ವಿಜಯಪುರ:** ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನಲ್ಲಿ ಭೂಕಂಪನ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ 3.5 ತೀವ್ರತೆ ದಾಖಲಾಗಿದೆ.

ರಾಷ್ಟ್ರೀಯ ಭೂಕಂಪನ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ ಈ ಬಗ್ಗೆ ಮಾಹಿತಿ ನೀಡಿದೆ. ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲೂಕಿನ ಸುತ್ತಮುತ್ತ ಕಂಪನದ ಅನುಭವವಾಗಿದೆ. ತಡರಾತ್ರಿ 2:04ಕ್ಕೆ ಭೂಕಂಪನ ಸಂಭವಿಸಿದೆ. ಮುನ್ನಚ್ಚರಿಕೆ ವಹಿಸಲು ಜಿಲ್ಲಾಡಳಿತಕ್ಕೆ ರಾಜ್ಯ ವಿಪತ್ತು ನಿರ್ವಹಣಾ ಸಂಸ್ಥೆ ಸೂಚನೆ ನೀಡಿದೆ.



## ಕೈನಲ್ಲಿ ಮತ್ತೆ ಅಸಮಾಧಾನ: ರಾಗಾಗೆ ಬಿ.ಆರ್.ಪಾಟೀಲ್ ಪತ್ರ

**ಬೆಂಗಳೂರು:** ಕಾಂಗ್ರೆಸ್ ನಲ್ಲಿ ಮತ್ತೆ ಅಸಮಾಧಾನ ಸ್ಫೋಟಗೊಂಡಿದೆ. ಆಳಂದ ಶಾಸಕ ಬಿ.ಆರ್.ಪಾಟೀಲ್ ಅವರು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

2020ರಲ್ಲಿ ಹಿಂದಿನ ಬಿಜೆಪಿ ಸರ್ಕಾರ ರದ್ದುಪಡಿಸಿದ್ದ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಸೆಕ್ಷನ್ 79ಎ, 79ಬಿ ಮತ್ತು 79ಸಿ ಅನ್ನು ಮರುಸ್ಥಾಪಿಸುವಂತೆ ಆಗ್ರಹಿಸಿದ್ದಾರೆ.

ರಾಹುಲ್ ಗಾಂಧಿ ಅವರಿಗೆ ಇ–ಮೇಲ್ ಮತ್ತು ನೋಂದಾಯಿತ ಅಂಚೆ ಮೂಲಕ ಶಾಸಕ ಬಿ.ಆರ್.ಪಾಟೀಲ್ ಕಳುಹಿಸಿದ ಪತ್ರದಲ್ಲಿ, ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ರೈತ ವಿರೋಧಿ ಕಾನೂನುಗಳನ್ನು ರದ್ದುಪಡಿಸಿ, ಭೂ ಸುಧಾರಣಾ ಕಾಯ್ದೆಯಡಿ ಇದ್ದ ರಕ್ಷಣಾತ್ಮಕ ಕ್ರಮಗಳನ್ನು ಮರುಸ್ಥಾಪಿಸುವುದಾಗಿ ಕಾಂಗ್ರೆಸ್ 2023ರ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು. ಆದರೆ ಇನ್ನೂ ಈಡೇರಿಲ್ಲ ಎಂದು ಪಾಟೀಲ್ ಟೀಕಿಸಿದ್ದಾರೆ.

ಆ ಮೂರು ನಿಬಂಧನೆಗಳನ್ನು ಮರುಸ್ಥಾಪಿಸುವ ಯಾವುದೇ ಪ್ರಸ್ತಾವನೆ ಸದ್ಯ ಸರ್ಕಾರದ ಮುಂದಿಲ್ಲ ಎಂದು ರಾಜ್ಯ ಕಂದಾಯ ಇಲಾಖೆ ಇತ್ತೀಚೆಗೆ ವಿಧಾನಸಭೆಯಲ್ಲಿ ಅಧಿಕೃತವಾಗಿ ತಿಳಿಸಿದೆ ಎಂದು ಪಾಟೀಲ್ ತಿಳಿಸಿದ್ದಾರೆ.

ನಿರ್ಬಂಧಗಳನ್ನು ತೆಗೆದುಹಾಕಿದ ನಂತರ ಕೃಷಿ ಭೂಮಿ ವರ್ಗಾವಣೆ ಆಗುತ್ತಿರುವ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ. 2021 ಮತ್ತು ಆಗಸ್ಟ್ 2026ರ ನಡುವೆ ಕರ್ನಾಟಕದಲ್ಲಿ ಸುಮಾರು 19.92 ಲಕ್ಷ ಎಕರೆ ಕೃಷಿ ಭೂಮಿ ಮಾರಾಟ ಮತ್ತು ವರ್ಗಾವಣೆಯಾಗಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ರೈತ ಸಮುದಾಯವನ್ನು ರಕ್ಷಿಸಲು ಪುಟ 2ಕ್ಕೆ



## ಅಸಹ್ಯ ರೀ, ಬ್ಲ್ಯಾಕ್ ಮೇಲ್ ತಂತ್ರ ಅಷ್ಟೇ...

### ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಸಚಿವ ಎಚ್.ಸಿ.ಬಾಲಕೃಷ್ಣ ವಾಗ್ದಾಳಿ

**ಬೆಂಗಳೂರು:** ಅಸಹ್ಯ ರೀ, ಬರೀ ಬ್ಲ್ಯಾಕ್ ಮೇಲ್ ತಂತ್ರ ಅಷ್ಟೇ... ಕಾಸು ಇಸ್ಕೊಳ್ಳೋದು ಸುಮ್ಮನಾಗೋದು. ಕುಮಾರಸ್ವಾಮಿ ಹಫ್ತಾ ವಸೂಲಿ ಗಿರಾಕಿ. ಅವರ ಹಾಗೆ ಬ್ಲ್ಯಾಕ್ ಮೇಲ್ ಮಾಡಿ ಹಫ್ತಾ ವಸೂಲಿ ಮಾಡುವ ಅವಶ್ಯಕತೆ ನಮಗಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ವಾಗ್ದಾಳಿ ನಡೆಸಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪಗಳಿಗೆ ಪ್ರತಿಕ್ರಿಯೆ ನೀಡಿದ ಸಚಿವ ಬಾಲಕೃಷ್ಣ ನಮ್ಮದೂ ಕೆಜಿಎಫ್ 2 ಬರುತ್ತದೆ. ಸಮಯ ಬಂದಾಗ ಬಿಡುಗಡೆ ಮಾಡ್ತೀವಿ ಎಂದು ತಿರುಗೇಟು ನೀಡಿದರು.

ರಾಜ್ಯದಲ್ಲಿ ಜ್ವಲಂತ ಸಮಸ್ಯೆಗಳಿವೆ. ನಾವು ಅದರ ಬಗ್ಗೆ ಗಮನ ಹರಿಸಬೇಕಾಗಿದೆ. ನಮಗೆ ಬೇರೆ ಕೆಲಸ ಇಲ್ವಾ. ಅವರ ರೀತಿ ದಾಖಲೆ ಕೊಟ್ಟು ಬ್ಲ್ಯಾಕ್ ಮೇಲ್ ಮಾಡಿ ಹಪ್ತಾ ವಸೂಲಿ ಮಾಡಬೇಕಾ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಸಹೋದರ ಬಾಲಕೃಷ್ಣಗೌಡ ಅವರ ಆಸ್ತಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಒಂದೇ ವರ್ಷದಲ್ಲಿ ಏಕಾಏಕಿ 1000 ಕೋಟಿಗೆ ಏರಿತು. ಅದರ ಬಗ್ಗೆ ತನಿಖೆ ನಡೆಸಲಿ. ಆಮೇಲೆ ನಮ್ಮ ವಿರುದ್ಧ ತನಿಖೆ ನಡೆಸಲಿ. ಆಲೂಗೆಡ್ಡೆ ಬೆಳೆದು ಸಂಪಾದಿಸಿದ್ರಾ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ತಾಯಿ ಚನ್ನಮ್ಮ ಅವರಿಗೂ ಐಟಿ ನೊಟೀಸ್ ಕೊಟ್ಟಿದ್ದರು. ಯಾಕೆ ಅಂತಾ ಗೊತ್ತಾ? ಏನಾಯ್ತು ನೊಟೀಸ್, ನರೇಂದ್ರ ಮೋದಿ, ಮತ್ತು ಅಮಿತ್ ಶಾ ಕೈ ಕಾಲು ಹಿಡಕೊಂಡಿದ್ದರು. ಐಟಿ ಮತ್ತು ಇಡಿ ಸುಮ್ಮನೆ ನೋಟೀಸ್ ಕೊಡುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.



### ದೇವೇಗೌಡ ಅವಧಿಯಲ್ಲಿ ನೈಸ್ ಯೋಜನೆ ಆರಂಭ

ನೈಸ್ ವಿಷಯ ಆರಂಭವಾಗಿದ್ದು ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ 1994ರಲ್ಲಿ ಆರಂಭವಾಗಿತ್ತು. ಆಮೇಲೆ ಕುಮಾರಸ್ವಾಮಿ ಸಿಎಂ ಆಗಿದ್ದಾಗ ಸರಿ ಮಾಡಬಹುದಿತ್ತು. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಮಾತನಾಡಬಹುದಿತ್ತು. ಈಗ ಅನಾವಶ್ಯಕವಾಗಿ ಕ್ಯಾಸೆಟ್ ಬಿಡ್ತಿನಿ, ಅದೂ ಇದು ಅಂತಾ ಹೇಳಿಕೊಂಡು ತಿರುಗಾಡ್ತಿದ್ದಾರೆ. ಈ ಬ್ಲ್ಯಾಕ್ ಮೇಲರ್ ಗಳಿಗೆ ನೀವು ಮಾಧ್ಯಮದವರು ಯಾಕೆ ಮಣೆ ಹಾಕ್ತೀರಾ ಎಂದು ಸಚಿವ ಬಾಲಕೃಷ್ಣ ಪ್ರಶ್ನಿಸಿದರು.

2018ರಲ್ಲಿ ಕುಮಾರಸ್ವಾಮಿ ಸಿಎಂ ಆಗಿದ್ರಲ್ವಾ? ಅವಾಗ ಎಲ್ಲವನ್ನೂ ಸರಿಮಾಡಬಹುದಿತ್ತಲ್ಲಾ? 2 ಸಲ ಸಿಎಂ ಆಗಿದ್ದಾಗ ಕುಮಾರಸ್ವಾಮಿ ಗೆಣಸು ಕೀಳ್ತಿದ್ರಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬರೀ ಬ್ಲ್ಯಾಕ್ ಮೇಲ್ ಮಾಡೋದೆ ನಿನ್ನ ಜೀವನ ಆಗಿಹೋಗಿದೆ. ಅಸಹ್ಯ ಆಗುತ್ತದೆ. ಕತ್ತೆ ಮೇಯಿಸೋಕೆ ಸಿಎಂ ಆಗಿದ್ರಂತಾ, ನನಗೆ ಡಿಕೆ ಶಿವಕುಮಾರ್ ಸಹಕಾರ ನೀಡಿಲ್ಲ ಎಂದು ಆವಾಗಲೇ ರಾಜಿನಾಮೆ ಕೊಟ್ಟು ಬರುಬೇಕಿತ್ತು ಎಂದು ಕಿಡಿಕಾರಿದರು.

ದರಿದ್ರ ಸರ್ಕಾರ ಅಂತಾರೆ, ನೀವು ಕೇಂದ್ರ ಮಂತ್ರಿಯಾಗಿದ್ದೀರಿ, ತಾಕತ್ ಇದ್ದರೆ ಎಕರೆಗೆ 50 ಸಾವಿರ ಪುಟ 2ಕ್ಕೆ

## ನಕಲಿ ಜಿಪಿಎಸ್: ತನಿಖೆಗೆ ಸಚಿವ ಖಂಡ್ರೆ ಸೂಚನೆ



**ಬೆಂಗಳೂರು:** ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕೂಲಿ ಕಾರ್ಮಿಕರ ನಕಲಿ ಜಿಪಿಎಸ್ ಫೋಟೋ ತೆಗೆದು ವಂಚಿಸಲಾಗುತ್ತಿದೆ ಎಂಬ ವರದಿ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತನಿಖೆಗೆ ಆದೇಶ ನೀಡಿದ್ದಾರೆ.

ಇಲಾಖೆ ಕಾರ್ಯದರ್ಶಿಗಳಿಗೆ ಈ ಸಂಬಂಧ ಲಿಖಿತ ಸೂಚನೆ ನೀಡಿರುವ ಅವರು, ವೀಡಿಯೋ ಚಿತ್ರೀಕರಣ ಮಾಡಿಸಿ ವೀಡಿಯೋ ಪ್ಲೇ ಆಗುತ್ತಿರುವಾಗ ಮತ್ತೊಂದು ಮೊಬೈಲ್‌ನಲ್ಲಿ ಜಿಪಿಎಸ್ ಫೋಟೋ ತೆಗೆಸಿ ವಂಚಿಸುತ್ತಿದ್ದಾರೆ. ಈ ಬಗ್ಗೆ ಜಂಟಿ ನಿರ್ದೇಶಕರ ದರ್ಜೆಯ ಅಧಿಕಾರಿಯಿಂದ ತನಿಖೆ ನಡೆಸಿ 4 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸೂಚಿಸಿದ್ದಾರೆ.

# ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸಿಲ್ಲ, ಬದುಕಿದ್ದು ಸತ್ತಂತೆ ಬಾಳುತ್ತಿದ್ದೇವೆ



ರಾಮನಗರ: ಇಂದಲ್ಲಾ ನಾಳೆ ಸರ್ಕಾರ ನಮ್ಮನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುತ್ತಾರೆ ಅನ್ನೋ ಆಶಾಭಾವನೆಯಿಂದ ಇಲ್ಲಿಯವರೆಗೂ ಬಂದಿದ್ದೇವೆ ನಾವು ಬದುಕಿದ್ದು ಸತ್ತಂತೆ ಬಾಳುತ್ತಿದ್ದೇವೆ. ತಾವು ಸರ್ಕಾರದ ಮೇಲೆ ಒತ್ತಡ ತಂದು ಕೇಂದ್ರ ಸರ್ಕಾರದಿಂದಲೂ ನಮಗೆ ಸಹಾಯ ಮಾಡಿಸಲು ಕ್ರಮ ಕೈಗೊಳ್ಳಬೇಕು ಎಂಬ ಧರಣಿ ನಿರತ ವಿಕಲಚೇತನರು ಸಂಸದ ಡಾ.ಸಿ.ಎನ್. ಮಂಜುನಾಥ್ ಬಳಿ ಮನವಿ ಮಾಡಿಕೊಂಡರು.

**▶▶ ಒಂಬತ್ತು ದಿನಗಳಿಂದ ಧರಣಿ ಪ್ರತಿಭಟನೆ**
**▶▶ ಪ್ರತಿಭಟನಾ ಸ್ಥಳಕ್ಕೆ ಸಂಸದ ಡಾ.ಸಿ.ಎನ್. ಮಂಜುನಾಥ್ ಭೇಟಿ**

ನಗರದ ಜಿಲ್ಲಾಧಿಕಾರಿ ಕಛೇರಿ ಬಳಿ, ಕಳೆದ ಒಂಬತ್ತು ದಿನಗಳಿಂದ ನವ ಕರ್ನಾಟಕ ಎಂ.ಆರ್. ಡಬ್ಲ್ಯೂ, ವಿ.ಆರ್.ಡಬ್ಲ್ಯೂ, ಯು.ಆರ್.ಡಬ್ಲ್ಯೂ ವಿಕಲ ಚೇತನರ ಗೌರವಧನ ಕಾರ್ಯಕರ್ತರ ಸಂಘದ ವತಿಯಿಂದ ವಿಕಲಚೇತನರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಮಂಗಳವಾರ ಸಂಜೆ ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಭೇಟಿ ನೀಡಿ ಸಮಸ್ಯೆ ಆಲಿಸಿದರು.

**ಬಹಳ ವರ್ಷಗಳ ಬೇಡಿಕೆ ಈಡೇರಿಲ್ಲ**

ಸಂಸದರ ಬಳಿ ವಿಕಲಚೇತನರ ಸಂಘದ ಮುಖಂಡರು ತಾವು ಎದುರಿಸುತ್ತಿರುವ ಸಮಸ್ಯೆ ನೋವು ತೋಡಿ ಕೊಂಡರು. ನಮ್ಮ ಬೇಡಿಕೆ ಇಂದು ನಿನ್ನೆಯದಲ್ಲ ಬಹಳಷ್ಟು ವರ್ಷಗಳ ಬೇಡಿಕೆಯಾಗಿದೆ. ಎಂ.ಆರ್.ಡಬ್ಲ್ಯೂ, ವಿ.ಆರ್.ಡಬ್ಲ್ಯೂ, ಯು.ಆರ್.ಡಬ್ಲ್ಯೂ ವಿಕಲಚೇತನ ಕಾರ್ಯಕರ್ತರ ಸುಮಾರು 19 ವರ್ಷಗಳ ಸೇವೆಯನ್ನು ಪರಿಗಣಿಸಿ, ಉನ್ನತ ಮಟ್ಟದ ಸಮಿತಿ ರಚಿಸಿ, ವಿಶೇಷ ಪ್ರಕರಣವೆಂದು ಪರಿಗಣಿಸಿ ಸೇವೆಯನ್ನು ಖಾಯಂ ಗೊಳಿಸುವ ಕುರಿತು ಸೂಕ್ತ ಕ್ರಮ ಕೈಗೊಂಡು ಅಧಿಕೃತ ಆದೇಶ ಪತ್ರ ಹೊರಡಿಸಬೇಕು ನಿಂತಿರುವ ಅಂಗವಿಕಲರ ಮಾಸಾಸನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ರಾಜ್ಯದ 30 ಜಿಲ್ಲೆಯಿಂದ ಬಂದ ನಾವುಗಳು ಪ್ರತಿಭಟನೆ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದೇವೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿಲ್ಲ. ನಾವು ನಡೆಸುತ್ತಿರುವ ಧರಣಿ ವಿಚಾರದಲ್ಲಿ ಉಸ್ತುವಾರಿ ಸಚಿವ ಎಚ್.ಸಿ.ಬಾಲಕೃಷ್ಣ, ಶಾಸಕ ಇಕ್ಬಾಲ್ ಹುಸೇನ್ ಪ್ರತಿಭಟನೆಯ ಸ್ಥಳಕ್ಕೆ ಬಂದು ನಮ್ಮ ಮನವಿಯನ್ನು ಆಲಿಸಿದ್ದಾರೆ. ಎಲ್ಲರಿಗೂ ನಮ್ಮ ಬೇಡಿಕೆ ಈಡೇರಿಸುವಂತೆ ಪರಿಪರಿಯಾಗಿ ಬೇಡಿದ್ದೇವೆ. ಇಂದಲ್ಲಾ ನಾಳೆ ಸರ್ಕಾರ ನಮ್ಮನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುತ್ತಾರೆ ಅನ್ನೋ ಒಂದು ಆಶಾಭಾವನೆಯಿಂದ ಇಲ್ಲಿಯವರೆಗೂ ಬಂದಿದ್ದೇವೆ ಎಂದರು.

**ನಮ್ಮ ಪ್ರತಿಭಟನಾ ಸ್ಥಳಕ್ಕೆ ಹಾವು, ಚೇಳು ಬರುತ್ತಿವೆ!**

ಧರಣಿ ಸ್ಥಳದಲ್ಲಿ ಹಾವು ಚೇಳು ಬರುತ್ತಿವೆ ಉತ್ತಮ ವಾತಾವರಣ ನಮಗೆ ಜಿಲ್ಲಾಡಳಿತ ಕಲ್ಪಿಸಿಲ್ಲ. ನಾವು ವಿಕಲಚೇತನರು ರಾತ್ರಿ ವೇಳೆ ನಮಗೆ ಮುತ್ತ ನಡೆಸಲು ಸಮಸ್ಯೆ ಆಗುತ್ತಿದೆ. ನಗರಸಭೆಯವರು ಶುಚಿತ್ವಕ್ಕೆ ಒತ್ತು ನೀಡುತ್ತಿಲ್ಲ ಎಂದು ವಿಕಲಚೇತನರು ಸಂಸದರ ಬಳಿ ತಮ್ಮ ಅಳಲು ತೋಡಿಕೊಂಡರು.

**ಮುಖ್ಯ ಕಾರ್ಯದರ್ಶಿಗಳ ಬಳಿ ಮಾತನಾಡುವೆ – ಸಂಸದರ ಭರವಸೆ**

ಸಂಸದ ಡಾ. ಸಿ.ಎನ್. ಮಂಜುನಾಥ್ ಪ್ರತಿಕ್ರಿಯಿಸಿದ, ತಾವೇ ಖುದ್ದಾಗಿ ಸರ್ಕಾರದ ಮುಖ್ಯಕಾರ್ಯದರ್ಶಿಗಳಿಗೆ, ಸಾರಿಗೆ ಸಚಿವರಲ್ಲಿ, ಮಹಿಳಾ ಮಕ್ಕಳ ಕಲ್ಯಾಣ ಸಚಿವರಲ್ಲಿ ಮಾತನಾಡುವುದಾಗಿ ಭರವಸೆ ನೀಡಿದರು. ಮುಖ್ಯಮಂತ್ರಿಗಳಿಗೂ ಪತ್ರ ಬರೆಯುವುದಾಗಿ ತಿಳಿಸಿದರು. ನಿಮಗೆ ಕೇಂದ್ರ ಸರ್ಕಾರದಿಂದಲೂ ಯಾವ ರೀತಿಯಾಗಿ ಸಮಸ್ಯೆ ಬಗೆಹರಿಸಬಹುದು ಎಂಬುದನ್ನು ಪ್ರಾಮಾಣಿಕವಾಗಿ ಮಾಡಲು ಪ್ರಯತ್ನಿಸುತ್ತೇನೆ ವಿಕಲಚೇತನರಿಗೆ ನಾವು ವಿಶೇಷವಾದಂತಹ ಸೌಲಭ್ಯಗಳನ್ನು ಅದನ್ನ ಕಾಲಕಾಲಕ್ಕೆ ತಲುಪಬೇಕು. ಈ ರೀತಿ ಸಮಸ್ಯೆಗಳಿಗೆ ಒಂದು ಪರಿಹಾರವನ್ನು ಕಂಡು ಹಿಡಿದುಕೊಳ್ಳೋಣ. ಸೋ ನಾವು ಅಂತಹ ಪ್ರಾಮಾಣಿಕವಾಗಿ ನಿಮ್ಮ ಜೊತೆ ಇರುತ್ತೇವೆ. ಇದು ನಮ್ಮ ಧರ್ಮ ಎಂದು ತಿಳಿಸಿದರು. ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಕಾಳಯ್ಯ, ನಗರ ಅಧ್ಯಕ್ಷ ಚಂದನ್ ಮೋರೆ, ಮುಖಂಡರಾದ ಹೋಟೆಲ್ ಉಮೇಶ್, ದರ್ಶನರೆಡ್ಡಿ, ರಾಮಕೃಷ್ಣಯ್ಯ, ಚನ್ನಪ್ಪ, ಪ್ರಶಾಂತ್, ಮೋಹನ್ ಸಂಘಟನೆಯ ಮಂಜುನಾಥ್, ಕೆ. ಅನಿಲ್, ಅಭಿ, ರಾಮನಗರ ಜಿಲ್ಲಾಧ್ಯಕ್ಷ ಶಬರೀಶ್, ಯಶೋಧ, ಬೋರೇಗೌಡ, ನಾಗರಾಜ್ ಮುಂತಾದವರಿದ್ದರು.

## ಹನೂರು ಭಾಗದಲ್ಲಿ 20 ವರ್ಷದ ಪ್ರವಾಹ ಸಮಸ್ಯೆಗೆ ಶಾಶ್ವತ ಪರಿಹಾರ

### 3 ಮೀಟರ್ ತಡೆಗೋಡೆ ನಿರ್ಮಾಣಕ್ಕೆ ಶಾಸಕ ಎಂ. ಆರ್.ಮಂಜುನಾಥ್ ಸೂಚನೆ

ಹನೂರು:ಮಳೆಗಾಲದ ಸಂದರ್ಭದಲ್ಲಿ ಹನೂರು ಪಟ್ಟಣ ವ್ಯಾಪ್ತಿಯಲ್ಲಿ ಹಾದುಹೋಗಿರುವ ತಟ್ಟೆಹಳ್ಳದಿಂದ ಉಂಟಾಗುವ ಹಾನಿ ತಪ್ಪಿಸಲು ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಲಾಗುತ್ತಿದೆ ಎಂದು ಶಾಸಕ ಎಂ ಆರ್ ಮಂಜುನಾಥ ತಿಳಿಸಿದರು.

ಹನೂರು ಪಟ್ಟಣ ವ್ಯಾಪ್ತಿಯಲ್ಲಿ ಹಾದುಹೋಗಿರುವ ತಟ್ಟೆಹಳ್ಳದಿಂದ



ಹಾನಿಗೊಳಗಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಅವರು ಮಾತನಾಡಿದರು. ಕಳೆದ ಮೂರು ದಿನಗಳಿಂದ ನಿರಂತರವಾಗಿ ಉತ್ತಮ ಮಳೆಯಾಗಿದ್ದು, ಹುಬ್ಬೆ-ಹುಣಸೆ ಜಲಾಶಯ ಭರ್ತಿಯಾಗಿ ಕೋಡಿ ಬಿದ್ದಿದೆ. ಮಳೆಯಿಂದಾಗಿ ಜಲಾವೃತಗೊಂಡಿರುವ ಪಟ್ಟಣ ವ್ಯಾಪ್ತಿಯ ಮನೆಗಳಿಗೆ ಭೇಟಿ ನೀಡಿ, ಪರಿಸ್ಥಿತಿಯನ್ನು ಪರಿಶೀಲಿಸಿ ಸಂತ್ರಸ್ತರ ಅಹವಾಲು ಆಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹಳ್ಳದ ಎರಡೂ ಬದಿಯಲ್ಲಿ 3 ಮೀಟರ್ ಎತ್ತರದ ತಡೆಗೋಡೆ ನಿರ್ಮಾಣ ಮಾಡಲಾಗುವುದು ಹಾಗೂ ಅವೈಜ್ಞಾನಿಕವಾಗಿ ನಿರ್ಮಿಸಿರುವ ಚರಂಡಿಗಳನ್ನು ತೆರವುಗೊಳಿಸಿ, ಅಗತ್ಯವಿರುವ ಕಡೆಗಳಲ್ಲಿ ಹೊಸ ಸೇತುವೆಗಳನ್ನು ನಿರ್ಮಿಸಲಾಗುವುದು "ಈ ಹಿಂದೆ ತಟ್ಟೆಹಳ್ಳ ಸಾಕಷ್ಟು ಅಗಲವಿತ್ತು. ಆದರೆ ಪಟ್ಟಣ ಬೆಳೆದಂತೆ ಒತ್ತುವರಿ ಹೆಚ್ಚಾಗಿ ಹಳ್ಳ ಕಿರಿದಾಗಿದೆ. ಇದೇ ಪ್ರವಾಹಕ್ಕೆ ಮೂಲ ಕಾರಣ. ಕಳೆದ 20 ವರ್ಷಗಳಿಂದಲೂ ಮನೆಗಳಿಗೆ ನೀರು ನುಗ್ಗುತ್ತಿರುವ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಿದ್ದಾರೆ.

ಈ ಕುರಿತು ನೀರಾವರಿ ಇಲಾಖೆಯ ಇಂಜಿನಿಯರ್‌ಗಳ ಜೊತೆ ಚರ್ಚಿಸಲಾಗಿದೆ. ತಜ್ಞರ ಅಭಿಪ್ರಾಯ ಪಡೆದು ಶೀಘ್ರದಲ್ಲೇ ಸರ್ಕಾರಕ್ಕೆ ವರದಿ ಸಲ್ಲಿಸಿ, ಆಕ್ಷನ್ ಪ್ಲಾನ್ ರೂಪಿಸಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಕೆಲವೆಡೆ ಅವೈಜ್ಞಾನಿಕವಾಗಿ ನಿರ್ಮಿಸಿರುವ ಚರಂಡಿಗಳನ್ನು ಮಳೆ ಕಡಿಮೆಯಾದ ಕೂಡಲೇ ತೆರವುಗೊಳಿಸಲು ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಳೆ ಬರುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಅತ್ಯಂತ ಜಾಗೃತರಾಗಿರಬೇಕು, ಜೀವಹಾನಿಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು" ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಕಾಡಾ ಅಧೀಕ್ಷಕ ಇಂಜಿನಿಯರ್ ಮಹೇಶ್, ನೀರಾವರಿ ನಿಗಮದ ಎಸ್ ಇ. ಕೆ ಕೆ ರಘುಪತಿ ಉಮೇಶ್ ಎಇಇ ರಾಮಕೃಷ್ಣ ಸೇರಿದಂತೆ ಇನ್ನಿತರರು ಹಾಜರಿದ್ದರು.

## ಅ.4ರಂದು ಹೃದ್ರೋಗ ಜಾಗೃತಿ

ಮೈಸೂರು: ಭಾರತೀಯ ಹೃದ್ರೋಗ ತಜ್ಞರ ಮೈಸೂರು ಶಾಖೆ ವತಿಯಿಂದ ಜನತೆ ಹೃದ್ರೋಗಳಿಂದ ರಕ್ಷಿಸಿಕೊಳ್ಳಲು ಬೇಕಾದ ಮುನ್ನೆಚ್ಚರಿಕೆ ಹಾಗೂ ಅರಿವು ಕುರಿತ ವಾಕಥಾನ್ ಅ. 4 ರಂದು ನಗರದಲ್ಲಿ ಆಯೋಜಿಸಲಾಗಿದೆ ಎಂಧು ಶಾಖೆ ಅಧ್ಯಕ್ಷ ಡಾ.ಎಸ್.ಹೇಮಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ 7.30ಕ್ಕೆ ಜೆ.ಕೆ. ಮೈದಾನದ ಬಳಿಯಿಂದ ವಾಕಥಾನ್ ಹೊರಡಲಿದ್ದು,



ವೈದ್ಯರು, ಆರೋಗ್ಯ ಕ್ಷೇತ್ರದ ವೃತ್ತಿಪರರು, ವಿದ್ಯಾರ್ಥಿಗಳು, ಅವರ ಕುಟುಂಬದವರು, ಸಂಘ ಸಂಸ್ಥೆ, ಸಂಘಟನೆಗಳವರು ಪಾಲ್ಗೊಳ್ಳಲಿದ್ದಾರೆ. ದೈನಂದಿನ ಜೀವನದಲ್ಲಿ ನಿಯಮಿತ ದೈಹಿಕ ಚಟುವಟಿಕೆ, ಸಕ್ರಿಯ ಜೀವನಶೈಲಿ ಮಹತ್ವ ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ ಎಂದರು. ಕಾರ್ಯದರ್ಶಿ ಡಾ. ಆನಂದ್ ಲಿಂಗನ್ ಮಾತನಾಡಿ, ಇದಲ್ಲದೆ ವರ್ಷ ಪೂರ್ತಿ ಹೃದ ಯಾರೋಗ್ಯ ಅರಿವು ಮೂಡಿಸುವ ನಿಟ್ಟಿನಲ್ಲಿ ಮೈಸೂರು ಆಕಾಶವಾಣಿ ಯಲ್ಲಿ ತಿಂಗಳಿಗೆ ಎರಡು ದಿನ ಸಲಹಾ ಲೈವ್ ಕಾರ್ಯಕ್ರಮ, ಮೈಸೂರು ವಿಭಾಗದ ಎಲ್ಲ ಜಿಲ್ಲೆಗಳಲ್ಲಿಯೂ ಉಚಿತ ವೈದ್ಯಕೀಯ ತಪಾಸಣೆ, ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೆಂ ದರು. ಖಜಾಂಚಿ ಡಾ.ಟಿ.ಎನ್. ರವಿಕುಮಾರ್ ಇದ್ದರು.

ಮೊದಲ ಪುಟದಿಂದ

## 2028ಕ್ಕೂ ಗ್ಯಾರಂಟಿ ಖಚಿತ

ತಲೆ ಮೇಲೆ ಗಂಗೆಗೆ ಸ್ಥಳ ನೀಡಿದ್ದಾನೆ. ಆದರೆ ಕಾಂಗ್ರೆಸ್‌ಗೆ ನಿಮ್ಮ ಹೃದಯದಲ್ಲಿ ಸ್ಥಾನ ಕೊಟ್ಟಿದ್ದಿರಿ ಎಂದು ಹೇಳಿದರು.

ಕೈಮಗ್ಗಗಳಿಗೆ ಕೈಗಾರಿಕಾ ಸ್ಥಾನಮಾನ ಕೊಡಲು ತೀರ್ಮಾನಿಸಿದ್ದೇವೆ. ನಮಗೆ ರೇಷ್ಮೆ ಪರಿಚಯಿಸಿದವರು ಟಿಪ್ಪು ಸುಲ್ತಾನ್. ಈಗ ರೇಷ್ಮೆಯನ್ನು ರಾಮನಗರ, ಮಂಡ್ಯ, ಬಳ್ಳಾರಿ, ಹಾವೇರಿ ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಇದನ್ನು ಶಾಶ್ವತವಾಗಿ ಉಳಿಸಬೇಕೆಂಬುದು ಸರ್ಕಾರದ ಉದ್ದೇಶ ಎಂದರು. ಅಭಿವೃದ್ಧಿ ಎಂಬುದು ಪವಾಡದಿಂದ ಸಾಧ್ಯವಿಲ್ಲ. ಎಲ್ಲರೂ ಶ್ರಮಪಟ್ಟರೆ ಮಾತ್ರ ಸಾಧ್ಯ. ಭಾರತ್ ಜೋಡೋ ಯಾತ್ರೆ ಈ ಜಿಲ್ಲೆಯಿಂದ ಆರಂಭವಾಯಿತು. ಎಲ್ಲರೂ ಕೂಡ ನಮ್ಮ ಜೊತೆಗೆ ಕೈಜೋಡಿಸಿದ್ದೀರಿ. ಪಾದಯಾತ್ರೆ ಮಾಡಿದ ಕಡೆಯೆಲ್ಲಾ ಕಾಂಗ್ರೆಸ್ ಶಾಸಕರು ಗೆದ್ದಿದ್ದಾರೆ. ಕಮಲ ಕೆಸರಿನಲ್ಲಿದ್ದರೆ ಚೆನ್ನ, ತೆನೆ ಹೊಲದಲ್ಲಿದ್ದರೆ ಚೆನ್ನ ದಾನ ಧರ್ಮ ಮಾಡುವ ಕೈ ಅಧಿಕಾರಿದಲ್ಲಿದ್ದರೆ ಚೆನ್ನ ಎಂದು ಒತ್ತಿ ಹೇಳಿದರು. ನಮ್ಮ ಸರ್ಕಾರದ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಗೆ ಒಂದು ಸಾವಿರಕ್ಕೂ ಹೆಚ್ಚು ಕೋಟಿ ನೀರಾವರಿಗೆ ಕೊಟ್ಟಿದ್ದೇವೆ. ನಿಮ್ಮ ಆಶೀರ್ವಾದ ನಮ್ಮ ಮೇಲಿರಲಿ. ಗಿರಿಜನರಿಗೆ ಪೌಷ್ಠಿಕ ಆಹಾರ ಕಿಟ್ ಕೊಡುವ ಬಗ್ಗೆ ಗಮನ ಹರಿಸುತ್ತೇನೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

## ನೈಸ್ ಯೋಜನೆ ಆರಂಭ

ರೂಪಾಯಿ ಕೊಡಿಸಲಿ. ಕೇಂದ್ರ ಸರ್ಕಾರದಲ್ಲಿ ನೀನು ಮಂತ್ರಿ ಆಗಿದ್ದೀಯಲ್ಲಪ್ಪಾ, ಏನು ಕಿತ್ತು ಗುಡ್ಡೆ ಹಾಕ್ತಿದ್ದಿಯಾ, ನಿನ್ನ ಯೋಗ್ಯತೆಗೆ 50 ಸಾವಿರ ಕೊಡಿಸಪ್ಪಾ ನೋಡೋಣಾ. ಆಮೇಲೆ ನೀನು ರೈತ ನಾಯಕ ಎಂದು ಒಪ್ಪಿಕೊಳ್ಳುತ್ತೇವೆ. ಕೇಂದ್ರದಲ್ಲಿ ಮಂತ್ರಿ ಆಗಿದ್ದೀಯಾ ಅಲ್ಲಿ ಕೆಲಸ ಮಾಡಪ್ಪಾ. ಬೆಳಗ್ಗೆನೆ ಇಲ್ಲಿ ಬಂದು ಮುಖ್ಯಮಂತ್ರಿಗಳನ್ನು ಹಿಡಿಕೊಂಡು ಅಲ್ಲಾಡಿಸೋಕೆ ರ್ತಿಯಾ ಎಂದು ವಾಗ್ದಾಳಿ ನಡೆಸಿದರು.

# ಮನೆ ಬಾಗಿಲಲ್ಲೇ ಕಾನೂನು ನೆರವು

### ಸಣ್ಣಪುಟ್ಟ ವ್ಯಾಜ್ಯಗಳಿಗೂ ನ್ಯಾಯಾಲಯಕ್ಕೆ ಬರುವುದನ್ನು ತಪ್ಪಿಸಲು ಕೇಂದ್ರ । ನ್ಯಾ.ಅಣ್ಣಯ್ಯನವರ

ರಾಮನಗರ: ಸಾರ್ವಜನಿಕರು ಸಣ್ಣಪುಟ್ಟ ವ್ಯಾಜ್ಯಗಳಿಗಾಗಿ ನ್ಯಾಯಾಲಯಕ್ಕೆ ಅಲೆದಾಡುವುದನ್ನು ತಪ್ಪಿಸಿ ಅವರ ಮನೆ ಬಾಗಿಲಿಗೆ ನ್ಯಾಯವನ್ನು ತಲುಪಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಚ್. ಅಣ್ಣಯ್ಯನವರ ಅವರು ಹೇಳಿದರು.

ಅವರು ಸೆ.30ರ ಬುಧವಾರ ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ದಕ್ಷಿಣ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಪಂಚಾಯತ್

**ಕಾನೂನು ಅರಿವು ಮೂಡಿಸುವ ಉದ್ದೇಶವೂ ಹೌದು**

**ಗ್ರಾಮೀಣ ಪ್ರದೇಶದ ಬಡವರು ಹಾಗೂ ಸಮಸ್ಯೆಗೊಳಗಾದ ಜನರಿಗೆ ಸ್ಥಳೀಯ ಮಟ್ಟದಲ್ಲೇ ಕಾನೂನು ನೆರವು ದೊರೆಯಬೇಕು ಎಂಬ ಉದ್ದೇಶದಿಂದ ಗ್ರಾಮ ಕಾನೂನು ನೆರವು ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ ಎಂದ ಅವರು, ನೊಂದ ಕುಟುಂಬಗಳಿಗೆ ಕಾನೂನು ಅರಿವು ಮೂಡಿಸಿ, ಅವರಿಗೆ ಧೈರ್ಯ ತುಂಬುವುದು ಅತ್ಯಂತ ಮುಖ್ಯವಾಗಿದೆ. ಗ್ರಾಮೀಣ ಪ್ರದೇಶದ ಜನರಲ್ಲಿ ಕಾನೂನಿನ ಅರಿವು ಮೂಡಿದ್ದಲ್ಲೀ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ನ್ಯಾಯಾಲಯಕ್ಕೆ ಬರುವ ಅವಶ್ಯಕತೆಯೇ ಇರುವುದಿಲ್ಲ, ಗ್ರಾಮಸ್ಥರ ಸಮಸ್ಯೆಗಳ ಬಗ್ಗೆ ಗ್ರಾಮ ಕಾನೂನು ನೆರವು ಕೇಂದ್ರಕ್ಕೆ ಬಂದು ತಮ್ಮ ಸಮಸ್ಯೆಗಳನ್ನು ತಿಳಿಸಿದರೆ ಇಲ್ಲಿಯೇ ಪರಿಹಾರ ದೊರೆಯಲಿದೆ ಎಂದು ಹೇಳಿದರು.**



**ತಿಳುವಳಿಕೆ ಇದ್ದರೆ ಅನಗತ್ಯ ಪ್ರಕರಣಗಳು ಕಡಿಮೆ**

**▶▶ ಕೆ.ಕೆಂಪಯ್ಯ ಅಭಿಮತ**

**ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕೆ.ಕೆಂಪಯ್ಯ ಮಾತನಾಡಿ, ಸಮಾಜದಲ್ಲಿ ಮೋಸ, ವಂಚನೆ ಸೇರಿದಂತೆ ಹಲವು ಸಮಸ್ಯೆಗಳು ನಡೆಯುತ್ತಿವೆ. ಇವುಗಳನ್ನು ಕಡಿಮೆ ಮಾಡಲು ಜನರಲ್ಲಿ ಕಾನೂನು ಅರಿವು ಮೂಡಿಸುವುದು ಅತ್ಯಗತ್ಯ. ಜನರಲ್ಲಿ ಕಾನೂನಿನ ಕುರಿತು ತಿಳುವಳಿಕೆ ಹೆಚ್ಚಾದರೆ ಅನಗತ್ಯ ಪ್ರಕರಣಗಳು ಕಡಿಮೆಯಾಗುತ್ತವೆ. ಜನರ ಮನೆ ಬಾಗಿಲಿಗೆ ತೆರಳಿ ಕಾನೂನು ನೆರವು ಒದಗಿಸುವ ಉದ್ದೇಶದಿಂದ ಗ್ರಾಮ ಕಾನೂನು ನೆರವು ಕೇಂದ್ರಗಳನ್ನು ಆರಂಭಿಸಿರುವುದು ಉತ್ತಮ ಕಾರ್ಯವಾಗಿದೆ. ಕಾನೂನು ಸೇವೆಗಳ ಪ್ರಾಧಿಕಾರದಿಂದ ದೊರೆಯುತ್ತಿರುವ ಸೇವೆಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.**

ಮತ್ತು ಲಕ್ಷ್ಮೀಪುರ ಗ್ರಾಮ ಪಂಚಾಯಿತಿಯ ಸಹಯೋಗದೊಂದಿಗೆ ಗ್ರಾಮ ಕಾನೂನು ನೆರವು ಕೇಂದ್ರವನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

**ಎಲ್ಲರಿಗೂ ಕಾನೂನು ಸೇವೆ ಸುಲುಭವಾಗಿ ದೊರೆಯಬೇಕು – ನ್ಯಾ. ಸವಿತ.ಪಿ.ಆರ್.**

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸವಿತ ಪಿ.ಆರ್. ಮಾತನಾಡಿ ಬಡವರು, ದುರ್ಬಲ ವರ್ಗದವರು, ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು ಹಾಗೂ ದೂರದ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕಾನೂನು ನೆರವು ಸುಲಭವಾಗಿ ದೊರೆಯಬೇಕು ಎಂಬುದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಉದ್ದೇಶವಾಗಿದೆ ಎಂದು ತಿಳಿಸಿದರು.

ಯತೋ ಧರ್ಮಃ ತತೋ ಜಯಃ ಸಂಸ್ಕೃತ ಶ್ಲೋಕ ಉಲ್ಲೇಖಿಸಿ ಎಲ್ಲಿ ಧರ್ಮವಿದೆಯೋ, ಅಲ್ಲಿ ಜಯವಿದೆ. ಹಾಗೆಯೇ ಬಡವ ಶ್ರೀಮಂತ ಎಂಬ ಭೇದಭಾವ ಇಲ್ಲದೇ ಕಾನೂನು ಸೇವೆ ಪ್ರಾಧಿಕಾರ ಕೆಲಸ ಮಾಡಲಿದೆ. ಅನ್ಯಾಯಕ್ಕೆ ಒಳಗಾದವರು ಯಾರೇ ಆಗಿರಲಿ, ಅವರಿಗೆ ಕಾನೂನು ನೆರವು ನೀಡಲು ನಾವು ಸದಾ ಸಿದ್ಧರಿದ್ದೇವೆ. ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಮೂಡಿಸುವುದು ನಮ್ಮ ಜವಾಬ್ದಾರಿ ಹಾಗೂ ಕರ್ತವ್ಯವಾಗಿದೆ. ಗ್ರಾಮ ಕಾನೂನು ನೆರವು ಕೇಂದ್ರವು ಕೇವಲ ಕಚೇರಿ ಅಥವಾ ಕೊಠಡಿಯ ಉದ್ಘಾಟನೆಯಲ್ಲ. ನ್ಯಾಯವನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಮಹತ್ವದ ಕಾರ್ಯದ ಆರಂಭವಿದು ಎಂದರು.

ಕಾರ್ಯಕ್ರಮವನ್ನು ಸಿಆರ್‌ಪಿ ಶಿಕ್ಷಕ ಸತೀಶ್ ಕುಮಾರ್ ನಿರೂಪಣೆ ಮಾಡಿದರು. ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ವಿ.ಎನ್.ಜಯರಾಮ್, ಕಾರ್ಯದರ್ಶಿ ಟಿ.ಎಂ. ಚಂದ್ರಶೇಖರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಕಾಂತರಾಜು, ಗ್ರಾಮಾಂತರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮುರುಳಿ, ಸಬ್‌ಇನ್ಸ್‌ಪೆಕ್ಟರ್ ನರಸಿಂಹಯ್ಯ, ಟಿಪಿಒ ಶಿವಕುಮಾರ್, ಲಕ್ಷ್ಮೀಪುರ ಗ್ರಾ.ಪಂ. ಪಿಡಿಒ ಜೈಶಂಕರ್, ವೈದ್ಯಾಧಿಕಾರಿ ರೇಣುಕಾಪ್ರಸಾದ್ ಮತ್ತಿತರರು ವೇದಿಕೆಯಲ್ಲಿದ್ದರು.

ಮೊದಲ ಪುಟದಿಂದ

## ನುಡಿದಂತೆ ನಡೆದ ಸರ್ಕಾರ

ಸರಕಾರ ಜನರ ಹೃದಯಗಳಲ್ಲಿ ಸ್ಥಾನ ಪಡೆದಿದೆ. ಈ ಜಿಲ್ಲೆಯಲ್ಲಿ 7 ಜನ ಸಂಸದರನ್ನು ಗೆಲ್ಲಿಸಿ ನಮಗೆ ಶಕ್ತಿ ತುಂಬಿದ್ದಾರೆ. ಕೊಳ್ಳೆಗಾಲಕ್ಕೆ ಒಳ್ಳೆಯ ಕಾಲ ಬಂದಿದೆ. ಕೊಳ್ಳೇಗಾಲಕ್ಕೆ ಅಭಿವೃದ್ಧಿ ಕಾಲಿಟ್ಟಿದೆ. ಹನೂರಿಗೆ ಅಭಿವೃದ್ಧಿ ಹರಿಯುತ್ತಿದೆ ಎಂದು ಸಿಎಂ ತಿಳಿಸಿದರು.

## ವಂದೇಮಾತರಂ ಮೊಟಕು

ಎ.ಆರ್.ಕೃಷ್ಣಮೂರ್ತಿ ಹಾಡುಗಾರರ ಬಳಿ ತೆರಳಿ ಗೀತೆಯನ್ನು ಹಾಡಬೇಡಿ ಎಂದು ಹೇಳಿದಾಗ ಹಾಡುಗಾರರು ಸಮಾಪ್ತಿ ಮಾಡಿದರು. ರಾಜ್ಯ ಸರ್ಕಾರದ ಕಾರ್ಯಕ್ರಮದಲ್ಲಿ ಎರಡು ಚರಣ ಮಾತ್ರ ಹಾಡುವಂತೆ ಇತ್ತೀಚಿಗೆ ಸುತ್ತೋಲೆ ಹೊರಡಿಸಲಾಗಿದೆ.

## ಬಿ.ಆರ್.ಪಾಟೀಲ್ ಪತ್ರ

ಕಾಂಗ್ರೆಸ್ ಬದ್ಧವಾಗಿರಬೇಕು ಮತ್ತು 2023ರ ಚುನಾವಣಾ ಭರವಸೆಯನ್ನು ಈಡೇರಿಸಬೇಕು ಎಂದು ಪಾಟೀಲ್ ಪ್ರತಿಪಾದಿಸಿದ್ದಾರೆ. ಈ ವಿಷಯದ ಬಗ್ಗೆ ವೈಯಕ್ತಿಕ ಗಮನಹರಿಸುವಂತೆ ರಾಹುಲ್ ಗಾಂಧಿ ಅವರನ್ನು ಕೋರಿದ್ದಾರೆ.

# ದಸರಾ ಖಾಸಗಿ ಸಹಭಾಗಿತ್ವದಲ್ಲೇ ನಡೆಸಬಹುದು

ಮೈಸೂರು: ಸರ್ಕಾರ ಹಾಗೂ ಅಧಿಕಾರಿಗಳು ಮನಸ್ಸು ಮಾಡಿದರೆ ದಸರಾ ಮಹೋತ್ಸವವನ್ನು ಖಾಸಗಿ ಪ್ರಾಯೋಜಕತ್ವ ಹಾಗೂ ಸಹಭಾಗಿತ್ವದಲ್ಲೇ ನಡೆಸಬಹುದು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ಸಾಹಿತಿ ಬನ್ನೂರು ಕೆ.ರಾಜು ಅವರ ನಿವಾಸಕ್ಕೆ ತೆರಳಿ ಅವರ ಆರೋಗ್ಯಕ್ಕೆ ನೆರವು ನೀಡಿ ಮಾತನಾಡಿದ ಅವರು, ಎಸ್.ಎಂ.ಕೃಷ್ಣ ಸರ್ಕಾರವಿದ್ದಾಗ ದಸರಾ ಮಹೋತ್ಸವಕ್ಕೆ ಹೊಸ ರೂಪುರೇಷೆ ಕೊಟ್ಟಿದ್ದೆವು. ಯುವ ಸಂಭ್ರಮದ ಮೂಲಕ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಲಾಗಿತ್ತು. ಹಿಂದೆಲ್ಲಾ ಯುವ ದಸರಾ ಎಷ್ಟೊಂದು ಚೆನ್ನಾಗಿತ್ತು. ಈಗೆಲ್ಲಾ ಅಧಿಕಾರಿಗಳ ಮಾತುಗಳನ್ನು ಕೇಳಿಕೊಂಡು ಫಜೀತಿ ಮಾಡಿದ್ದಾರೆ. ಹಿಂದೆ ಒಂದು ಗೋಲ್ಡ್ ಕಾರ್ಡ್ ಮೂಲಕ ಒಂದು ಕುಟುಂಬ ದಸರಾ ನೋಡಬಹುದಿತ್ತು. ಆದರೆ ಈಗ ಒಂದು ಕಾರ್ಡ್‌ಗೆ ಒಬ್ಬರಿಗೆ ಮಾತ್ರವೇ ಪ್ರವೇಶ ಕಲ್ಪಿಸಲಾಗಿದೆ. ಹಿಂದೆ ವಿದೇಶಿಗರಿಗಾಗೇ ಡೈನ್ ವಿತ್ ಮಹಾರಾಜ ಎಂಬ ಕಾರ್ಯಕ್ರಮ ಇತ್ತು. ಅದರ ವಿಶೇಷತೆ ಏನೆಂದರೆ ವಿದೇಶಿಗರು ನಿರ್ದಿಷ್ಟ ಶುಲ್ಕವನ್ನು ನೀಡಿ ಮಹಾರಾಜರೊಂದಿಗೆ ಭೋಜನ ಸವಿಯಬಹುದಿತ್ತು.



ಆ ಹಣವನ್ನು ಅರಮನೆಗೆ ನೀಡು ತ್ತಿದ್ದೆವು ಎಂದು ಹಿಂದಿನ ದಸರಾ ವೈಭವವನ್ನು ನೆನೆದರು.

ದಸರಾ ಮೋಜಿಗಾಗಿ ಮಾಡುವುದಲ್ಲ, ಅದಕ್ಕೊಂದು ಸಂಪ್ರದಾಯವಿದೆ, ಮನಸ್ಸು ಮಾಡಿದರೆ ಖಾಸಗಿ ಸಹಭಾಗಿತ್ವ, ಪ್ರಾಯೋಜಕತ್ವದಲ್ಲೇ ದಸರಾವನ್ನು ನಡೆಸಬಹುದು. ಹೀಗೆ ಹೊಸದಾಗಿ ಮಾಡುವುದನ್ನು ಬಿಟ್ಟು ದುಡ್ಡು ತಗೊಂಡು ಬಂದು ಖರ್ಚು ಮಾಡಲು ನೀವೇ ಆಗಬೇಕಾ.

**ದಸರಾಗೆ 22 ಸಚಿವರ ಉಸ್ತುವಾರಿ**

ಇದೇ ಮೊದಲ ಬಾರಿಗೆ ದಸರಾಗೆ 22 ಸಚಿವರನ್ನು ನೇಮಕ ಮಾಡಿರುವುದು. ಯತೀಂದ್ರಗೆ ಬ್ರೇಕ್ ಹಾಕಲು ಏನಿದೆ ರೀ? ಅವರು ಯಾವ ಸ್ಪೀಡ್ನಲ್ಲಿ ಓಡಿಸ್ತಿದ್ದಾರೆ ಬ್ರೇಕ್ ಹಾಕೋಕೆ? ಆ ಗಾಡಿ ಸುಮ್ಮನೆ ನಿಂತಿದೆ ಅಷ್ಟೇ. ಅದನ್ನು ತಳ್ಳೋಕೆ 22 ಜನರನ್ನು ಕೊಟ್ಟಿದ್ದಾರೆ ಎಂದು ದಸರಾ ಉಸ್ತುವಾರಿಗೆ 22 ಸಚಿವರನ್ನು ನೇಮಿಸಿರುವುದಕ್ಕೆ ಅವರು ವ್ಯಂಗ್ಯವಾಡಿದರು. ಮತದಾರರ ಪಟ್ಟಿಯಲ್ಲಿ ಹೆಸರುಗಳು ಹೆಚ್ಚಾಗಲು ರಾಜಕಾರಣಿಗಳೇ ಕಾರಣ. ಕೆ.ಆರ್. ನಗರದಲ್ಲೇ 7 ಸಾವಿರ ವೋಟ್ ಜಾಸ್ತಿ ಇವೆ ಎಂದು ರಿಪೋರ್ಟ್ ಬಂದಿದೆ. ಈಗ ಅದನ್ನು ತೆಗೀತಾ ಇದ್ದಾರೆ. ಸತ್ತವರ ಹೆಸರನ್ನು ತೆಗೆಯೋಲ್ಲ, ಅದು ಹಾಗೆ ಇರುತ್ತೆ. ಅವತ್ತು ಇನ್ಯಾರನ್ನೋ ಇನ್ಕ್ಲೂಡ್ ಮಾಡ್ತಾ ಹೋಗ್ತಿರ್ತಾರೆ. ಯಾವ ಯಾವ ಊರಿನವರೋ ವೋಟರ್ಸ್ ಇರ್ತಾರೆ. ಬಂದು ವೋಟ್ ಮಾಡ್ಬಿಟ್ಟು ಹೋಗ್ತಾರೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇದನ್ನು ಸೀರಿಯಸ್ಸಾಗಿ ಮಾಡ್ತಿದೆ. ಆದರೆ ಅದಕ್ಕೆಲ್ಲ ಅಷ್ಟೆಲ್ಲ ದಾಖಲಾತಿಗಳು ಬೇಕಿರಲಿಲ್ಲ ಎಂದು ಹೇಳಿದರು.

**ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಹೇಳಿಕೆ**

# ಜನರ ಅಭಿವೃದ್ಧಿಯಲ್ಲಿ ರಾಜರ ಸದಾ ಸ್ಮರಿಸೋಣ

**ಮೈಸೂರು:** ಜನರ ಅಭಿವೃದ್ಧಿಗಾಗಿ ಇಲ್ಲಿನ ರಾಜರು ತಮ್ಮ ಒಡವೆ, ಆಸ್ತಿ ಮಾರಿದ್ದಾರೆ. ಅಂತಹ ರಾಜರನ್ನು ಸದಾ ಸ್ಮರಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ. ಆರ್.ಸುದರ್ಶನ್ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಬಹದ್ದೂರ್ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ಬುಧವಾರ ನಡೆದ ಸಂಸ್ಥೆಯ ಉದ್ಘಾಟನೆ ಮತ್ತು ಸಾಧಕರುಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜನರ ಬದುಕಿಗಾಗಿ ಆಡಳಿತದಲ್ಲಿ ಬಹುದೊಡ್ಡ ಬದಲಾವಣೆಗಳನ್ನು ಕರ್ನಾಟಕದ ಪ್ರಗತಿಗೆ ಹಾಗೂ ಸಾಮಾನ್ಯ ಜನರ ಬದುಕಿಗೆ ವಿಶೇಷವಾದಂತಹ ಕಾನೂನುಗಳನ್ನು ಮತ್ತು ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಇತಿಹಾಸವನ್ನು



ಸೃಷ್ಟಿಸುವ ಮೂಲಕ ಎಲ್ಲಾ ಕಾಲಕ್ಕೂ ಸ್ಫೂರ್ತಿಯಾಗಿ ನಿಂತರು. ಬಂಗಾರದ ಮನುಷ್ಯ ಚಿತ್ರದಲ್ಲಿ ಬರುವ ಹಾಡಿನ ಸಾಲಿನಲ್ಲಿ ವಿಶ್ವೇಶ್ವರಯ್ಯನವರು ಕನ್ನಂಬಾಡಿ ಕಟ್ಟದಿದ್ದರೆ ಎಂಬ ಸಾಲಿದೆ. ಆ ಸಾಲನ್ನು ಬರೆದವರು ಮೈಸೂರು ರಾಜರನ್ನೂ ಸಹ ಸ್ಮರಿಸಿಕೊಳ್ಳಬೇಕಿತ್ತು. ಮೈಸೂರು ರಾಜರು ತಮ್ಮ ವಡವೆ, ಆಸ್ತಿಗಳನ್ನು ಮಾರಿದ್ದಾರೆ. ಎಷ್ಟೋ ಜನರಿಗೆ ಇಂತಹ ಇತಿಹಾಸವನ್ನು ತಿಳಿಸಬೇಕಿದೆ ಎಂದರು. ಇತಿಹಾಸವನ್ನು ಯಾರೂ ಸಹ ತಮ್ಮ ತಮ್ಮ ಅನುಕೂಲಗಳಿಗೆ ಬರೆಯಬೇಕಾದರೆ ಅದು ಇತಿಹಾಸಕ್ಕೆ ಮತ್ತು ಪರಂಪರೆಗೆ ಮಾಡುವ ಅವಮಾನ ಹಾಗೂ ಅಪಚಾರಗಳು. ಇಂದು ಚುನಾವಣೆಗಳಲ್ಲಿ ಊರುಗಳಲ್ಲಿ ಅಥವಾ ಹಳ್ಳಿಗಳಲ್ಲಿ ಯಾವ ಸಮುದಾಯಗಳಲ್ಲಿ ಹೆಚ್ಚು ಇದ್ದಾರೆ ಎಂದು ಲೆಕ್ಕ ಹಾಕುತ್ತಾರೆ. ಆದರೆ ಅಲ್ಲಿನ ಅಲ್ಪ ಸಂಖ್ಯಾತರನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ ಅಂದರೆ ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಗೆ ಯಾವ ಅರ್ಥವೂ ಇರುವುದಿಲ್ಲ ಎಂದರು. ಇದೇ ಸಂದರ್ಭದಲ್ಲಿ ಡಾ.ಪಿ.ವಿ. ನಂಜರಾಜೇ ಅರಸ್, ಬಹದ್ದೂರ್ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಶ್ರೀನಿವಾಸ ಬಹದ್ದೂರ್ ಹಾಗೂ ಡಾ.ಅಂಬ ಎಂ.ಜಿ.ಆರ್ ಅರಸ್ ಅವರನ್ನು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಂ.ಶಿವಣ್ಣ, ಅನ್ವೇಷಣಾ ಸೇವಾ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥರಾಜೇ ಅರಸ್ ಹಾಗೂ ಇತರರು ಉಪಸ್ಥಿತರಿದ್ದರು.

# 3ರಂದು ಸಿಎಂ ನೇತೃತ್ವದಲ್ಲಿ ಪ್ರಜಾಸೇವೆ ಅಭಿಯಾನ

## ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ಮಾಹಿತಿ | ಪೂರ್ವಭಾವಿ ಸಿದ್ಧತಾ ಸಭೆ



**ಮೈಸೂರು:** ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಜಾಸೇವಾ ಅಭಿಯಾನ ಅ.3ರಂದು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ದರು. ಈ ಬಾರಿಯ ಪ್ರಜಾಸೇವೆ ಅಭಿಯಾನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಖುದ್ದು ಭಾಗವಹಿಸಿ ಸಾರ್ವಜನಿಕರ ಕುಂದುಕೊರತೆ ಮತ್ತು ಅಹವಾಲು ಗಳನ್ನು ಸ್ವೀಕರಿಸಲಿದ್ದಾರೆ. ಇಲಾಖೆ ಅಧಿಕಾರಿಗಳು ತಮ್ಮ ಅಧೀನ ಸಿಬ್ಬಂದಿಗಳನ್ನು ನಿಯೋಜಿಸದೇ ಖುದ್ದು ಹಾಜರಾಗಬೇಕು. ಮುಖ್ಯಮಂತ್ರಿಗಳು ಅಭಿಯಾನದಲ್ಲಿ ಭಾಗವಹಿಸುವುದರಿಂದ ಬಹಳಷ್ಟು ಸಾರ್ವಜನಿಕರು ಕುಂದುಕೊರತೆ ಅರ್ಜಿ ಸಲ್ಲಿಸುವ ಸಂಭವವಿದೆ. ಸಾರ್ವಜನಿಕರನ್ನು ಸರದಿ ಸಾಲಿನಲ್ಲಿ ಆಗಮಿಸಿ ಮುಖ್ಯಮಂತ್ರಿಗಳಿಗೆ ಅರ್ಜಿ ಸಲ್ಲಿಸಬೇಕು ಇದಕ್ಕೆ ಟೋಕನ್ ವ್ಯವಸ್ಥೆ ಮಾಡಬೇಕು ಎಂದರು.

ಹೆಚ್ಚಿನ ಸಾರ್ವಜನಿಕರು ಭಾಗವಹಿಸುವ ಹಿನ್ನೆಲೆಯಲ್ಲಿ ಇಲಾಖೆವಾರು ಮಳಿಗೆಗಳನ್ನು ತೆರೆದು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು. ಇಲಾಖೆ ಅಧಿಕಾರಿಗಳು ಮಳಿಗೆಯಲ್ಲಿ ಅರ್ಜಿ ಸ್ವೀಕರಿಸಲು ಬೇಕಿರುವ ಕಂಪ್ಯೂಟರ್ ಪ್ರಿಂಟರ್ ಸೇರಿದಂತೆ ಇನ್ನಿತರೆ ಸಲಕರಣೆಗಳ ವ್ಯವಸ್ಥೆ ಮಾಡಿಕೊಳ್ಳಬೇಕು. ಸಾರ್ವಜನಿಕರಿಂದ ಬೆಳಿಗ್ಗೆ 8 ಗಂಟೆಯಿಂದಲೇ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸುವ ಕೆಲಸವಾಗಬೇಕು ಎಂದರು.

ಜಿಲ್ಲೆಯಲ್ಲಿ ಪ್ರಜಾಸೇವೆ ಅಭಿಯಾನದಲ್ಲಿ ಐ.ಪಿ.ಜಿ.ಆರ್.ಎಸ್ ನಲ್ಲಿ ಸ್ವೀಕೃತವಾಗಿರುವ ಅರ್ಜಿಗಳು ಹಾಗೂ ವಿಲೇವಾರಿಯಾಗಿರುವ ವಿವರವನ್ನು ಸಲ್ಲಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಪಿರಿಯಾಪಟ್ಟಣ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಅಕ್ಟೋಬರ್ 3 ರಂದು ನಡೆಯಲಿರುವ ಪ್ರಜಾಸೇವಾ ಅಭಿಯಾನದ ಬಗ್ಗೆ ಹೆಚ್ಚಿನ ಪ್ರಚಾರ ನೀಡುವಂತೆ ಪಿರಿಯಾಪಟ್ಟಣ ತಾಲ್ಲೂಕು ಅಧಿಕಾರಿಗಳಿಗೆ ತಿಳಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಮಹಾನಗರ ಪಾಲಿಕೆ ಆಯುಕ್ತೆ ಎಂ.ಕೆ.ಸವಿತಾ, ಮೈಸೂರು ಉಪವಿಭಾಗಾಧಿಕಾರಿ ಆಶಪ್ಪ, ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ಸೇರಿ ಇನ್ನಿತರರು ಉಪಸ್ಥಿತರಿದ್ದರು.

# ಕಸ ಎಸೆಯುವವರಿಗೆ ಕನ್ನಡಿ




ಗುಂಡ್ಲುಪೇಟೆ: ಪಟ್ಟಣದ ಸಾರ್ವಜನಿಕ ಸ್ಥಳಗಳಲ್ಲಿ ಪದೇಪದೇ ಕಸ ಸುರಿಯುವ ಪ್ರವೃತ್ತಿಗೆ ಕಡಿವಾಣ ಹಾಕುವ ಉದ್ದೇಶದಿಂದ ಗುಂಡ್ಲುಪೇಟೆ ಪುರಸಭೆ ವಿನೂತನ ಜಾಗೃತಿ ಕಾರ್ಯಕ್ರಮಕ್ಕೆ ಮುಂದಾಗಿದೆ.

'ಸ್ವಚ್ಛತೆಯೇ ಸೇವೆ?2026' ಅಭಿಯಾನದ ಅಂಗವಾಗಿ, ಸಾರ್ವಜನಿಕರು ನಿರಂತರವಾಗಿ ಕಸ ಎಸೆಯುತ್ತಿದ್ದ ಸ್ಥಳದಲ್ಲಿ ಬೃಹತ್ ಕನ್ನಡಿಯನ್ನು ಅಳವಡಿಸಿ, ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಲಾಯಿತು. ಕಸ ಎಸೆಯಲು ಬರುವವರು ಕನ್ನಡಿಯಲ್ಲಿ ತಮ್ಮದೇ ಮುಖವನ್ನು ನೋಡಿಕೊಳ್ಳುವ ಮೂಲಕ, ಸಾರ್ವಜನಿಕ ಸ್ಥಳದಲ್ಲಿ ಕಸ ಎಸೆಯುತ್ತಿರುವ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂಬ ಸಂದೇಶವನ್ನು ಈ ಮೂಲಕ ನೀಡಲಾಗಿದೆ.

**▸▸ 'ಸ್ವಚ್ಛತೆಯೇ ಸೇವೆ-2026' ಅಭಿಯಾನದಲ್ಲಿ ವಿನೂತನ ಜಾಗೃತಿ**

ಈ ಕುರಿತು ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಎಸ್.ಶರವಣ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕದಂತೆ ಹಲವು ಬಾರಿ ಜಾಗೃತಿ ಮೂಡಿಸಿದ್ದರೂ ಕೆಲವರು ಮತ್ತೆ ಅದೇ ಸ್ಥಳಗಳಲ್ಲಿ ಕಸ ಸುರಿಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರು ಮಾದರಿಯನ್ನು ಅನುಸರಿಸಿ ಬೃಹತ್ ಕನ್ನಡಿ ಅಳವಡಿಸಲಾಗಿದೆ ಎಂದು ತಿಳಿಸಿದರು.

ಮನೆಗಳ ಕಸವನ್ನು ಎಲ್ಲೆಂದರಲ್ಲಿ ಎಸೆಯದೆ, ಪುರಸಭೆಯ ಕಸ ಸಂಗ್ರಹಣಾ ವಾಹನಗಳಿಗೆ ನೀಡುವ ಮೂಲಕ ಪಟ್ಟಣವನ್ನು ಸ್ವಚ್ಛ ಹಾಗೂ ಸುಂದರವಾಗಿಡಲು ಸಾರ್ವಜನಿಕರು ಸಹಕರಿಸ ಬೇಕು ಎಂದು ಮನವಿ ಮಾಡಿದರು. ಕಾರ್ಯ ಕ್ರಮದಲ್ಲಿ ಪರಿಸರ ಅಭಿಯಂತರ ಮಹೇಶ್, ಹಿರಿಯ ಆರೋಗ್ಯ ನಿರೀಕ್ಷಕಿ ಸುಷ್ಮಾ, ಕಿರಿಯ ಆರೋಗ್ಯ ನಿರೀಕ್ಷಕ ಪರಮೇಶ್, ಮೇಲ್ವಿಚಾರಕರಾದ ಸಿದ್ದು, ಮೂರ್ತಿ, ಸಮುದಾಯ ಸಂಘಟಕರು ಹಾಗೂ ಪುರಸಭೆ ಸಿಬ್ಬಂದಿ ಉಪಸ್ಥಿತರಿದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ!

**ಏನು ಬೇಡಲಿ ಕೃಷ್ಣಾ**
**ಬಯಕೆಯು ಮುತ್ತಿರುವಾಗ,**
**ಇರುವೆಯು ಸಕ್ಕರೆಯ ಮುತ್ತಿದಂತೆ!**

**ಅರ್ಥವಿಲ್ಲದ ಬಯಕೆ**
**ಸುತ್ತಿ ಸುಳಿದಿದೆ ಮನವ,**
**ಚಿತ್ತದೊಲ್ಲಭ ನೀನು ಚಿತ್ತಕೆ ಬಾರದೆ!**
**ಚಿಕ್ಕ , ಚಿಕ್ಕ ಆಸೆಗಳು ದಕ್ಕುವವು ಎನಗಿಂದು,**
**ಭಕ್ತವತ್ಸಲ ನಿನ್ನ ಕಾಣದೆ ಇರೆನು!**

**ಹಣದಾಸೆ, ಋಣದಾಸೆ**
**ಮಲೀನಗೊಳಿಸಿದೆ ಮನವ!**
**ಸಂಸಾರದಾಸೆ, ಮಕ್ಕಳಾಸೆ,**
**ಮೋಹವನು ಮುತ್ತಿದ ಅಂತರಂಗವನರಿತು,**
**ಕರುಣದಿ ನೀ ಎನ್ನ ಅಜ್ಞಾನವನವರಿತು!**

**ಕೆಟ್ಟ ಸ್ವಾರ್ಥದ ಮನವ, ಮೆಟ್ಟಿದ ಮತ್ಸರವ,**
**ದಿಟ್ಟತನದಲಿ ಮಾಡೋ ಕೆಟ್ಟತನವ!**
**ಸರಿಸಿಬಿಡು ಇದನು ಕೊಡು ಸುಜ್ಞಾನವನು,**
**ಭರದಿ ಭಕುತಿಯ ನೀಡು ಹೇಮಗಿರೀಶನೇ !**

## ಕಾಂಚಳ್ಳಿ ಹಾಗೂ ದಾಸನದೊಡ್ಡಿಯಲ್ಲಿ ಜಲಾವೃತಗೊಂಡ ಮನೆಗಳು

# ಹನೂರು ತಾಲ್ಲೂಕಿನಲ್ಲಿ ಮಳೆ ಅಬ್ಬರ

## 50ಕ್ಕೂ ಹೆಚ್ಚು ಮನೆ ಜಲವೃತ, ಸಚಿವರಿಂದ ಪರಿಹಾರದ ಭರವಸೆ



ಹನೂರು: ಕಳೆದ ಎರಡು ದಿನಗಳಿಂದ ಹನೂರು ತಾಲ್ಲೂಕಿನಾದ್ಯಂತ ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ತಾಲೂಕಿನ ಕಾಂಚಳ್ಳಿ ಮತ್ತು ದಾಸನದೊಡ್ಡಿ ಗ್ರಾಮದಲ್ಲಿ 50ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಅಪಾರ ಹಾನಿ, ಸ್ಥಳಕ್ಕೆ ಜಿಲ್ಲೆ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಮಂಗಳವಾರ ಮುಂಜಾನೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಶಾಸಕ ಎಂ.ಆರ್. ಮಂಜುನಾಥ್ ಹಾಗೂ ಮಾಜಿ ಶಾಸಕ ನರೇಂದ್ರ ಅವರು ಸಚಿವರ ಜೊತೆಗಿದ್ದು, ಮನೆ-ಮನೆಗೆ ತೆರಳಿ ಸಂತ್ರಸ್ತರಿಗೆ ಧೈರ್ಯ ತುಂಬಿದರು. ಸೋಮವಾರ ಮತ್ತು ಮಂಗಳವಾರ ತಡರಾತ್ರಿ ಸುರಿದ ಭಾರೀ ಮಳೆಗೆ ಸುಮಾರು ಗ್ರಾಮಗಳಲ್ಲಿ ಉತ್ತಮ ಮಳೆಯಾಗಿ ರೈತರ ಮೊಗದಲ್ಲಿ ಮಂದಹಾಸ ಮೂಡಿದರೂ, ಕೆಲವೆಡೆ ಈ ಅತಿವೃಷ್ಟಿಯಿಂದ ತೀವ್ರ ಸಂಕಷ್ಟ ಎದುರಾಗಿದೆ.

### ಹೆಚ್ಚಿನ ರೂ. ನಷ್ಟ ಹಾಗೂ ಹಾನಿಗೀಡಾದವರ ವಿವರ

ಮಂಗಳವಾರ ತಡರಾತ್ರಿ ಕಾಂಚಳ್ಳಿ ಗ್ರಾಮದಲ್ಲಿ ಮಂಡಿ ಹಳ್ಳ ತುಂಬಿ ಹರಿದ ಪರಿಣಾಮ ಭಾರೀ ಅನಾಹುತ ಸಂಭವಿಸಿದೆ. ಗ್ರಾಮದ ಇರಸೇಗೌಡ ಎಂಬುವವರು ಜಾನುವಾರುಗಳಿಗಾಗಿ ಸಂಗ್ರಹಿಸಿದ ನಾಲ್ಕು ಟ್ರ್ಯಾಕ್ಟರ್ ಜೋಳದ ನೀರು ಸಂಪೂರ್ಣಪಾಲಾಗಿ ಸುಮಾರು 30 ಸಾವಿರ ರೂ.ಗೂ ಹೆಚ್ಚು ನಷ್ಟ ಉಂಟಾಗಿದೆ. ಅದೇ ರೀತಿ ಗ್ರಾಮದ ತುಳಸಮ್ಮ, ಮನ್ನಾ, ದೇಗೌಡ, ಕಾಳೇಗೌಡ, ಪ್ರದೀಪ್, ನಾಗರಾಜು, ಶಿವಲಿಂಗಚಾರಿ, ಶ್ರೀನಿವಾಸ್, ವೆಂಕಟರಾಜೇಗೌಡ, ಕಾಂತಮ್ಮ, ರವಿ ಸೇರಿದಂತೆ 50ಕ್ಕೂ ಹೆಚ್ಚು ಮನೆಗಳಿಗೆ ಮೊಣಕಾಲುದ್ದ ನೀರು ನುಗ್ಗಿದೆ. ಮನೆಯಲ್ಲಿದ್ದ ದವಸ-ಧಾನ್ಯ, ಅಕ್ಕಿ, ಬೇಳೆ, ಆಹಾರ ಪದಾರ್ಥಗಳು, ಆಹಾರ ಪದಾರ್ಥಗಳು ಮತ್ತು ಕೋಳಿ ಮೇವು ಸಂಪೂರ್ಣವಾಗಿ ನೀರುಪಾಲು, ರೂಪಾಯಿ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

### ಪರಿಹಾರದ ಭರವಸೆ, ಸೇತುವೆ ನಿರ್ಮಾಣಕ್ಕೆ ಸೂಚನೆ

ಸ್ಥಳ ಪರಿಶೀಲನೆ ನಡೆಸಿದ ನಂತರ ಮಾತನಾಡಿದ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು, ಮಳೆ ನುಗ್ಗಿ ಹಾನಿಗೊಳಗಾದ ಎಲ್ಲ ಮನೆಗಳ ನೀರು ಸಮೀಕ್ಷೆ ನಡೆಸಿ ತಹಸೀಲ್ದಾರ್ ಅವರಿಗೆ ಸೂಚನೆ ನೀಡುತ್ತೇನೆ. ಅಂತಿಮ ಪಟ್ಟಿ ಬಂದ ಕೂಡಲೇ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲಾಗುವುದು. ಜೊತೆಗೆ, ಗ್ರಾಮದಲ್ಲಿ ಮತ್ತೆ ಇಂತಹ ಅನಾಹುತ ತಡೆ ಎರಡು ಸೇತುವೆ ನಿರ್ಮಾಣಕ್ಕೆ ಕ್ರಿಯಾಯೋಜನೆ ಸಲ್ಲಿಸುವಂತೆ ನೀರಾವರಿ ಇಲಾಖೆ ಅಭಿಯಂತರಿಗೆ ಸೂಚನೆ ನೀಡಿದ್ದೇನೆ ಎಂದು ಅವರು ತಿಳಿಸಿದ್ದಾರೆ.

### ಸ್ಮಶಾನದ ಕಾಂಪೌಂಡ್ ಪರಿಶೀಲನೆ

ಇದೇ ವೇಳೆ ಕುರುಬರದೊಡ್ಡಿ ಗ್ರಾಮದ ಮುಸ್ಲಿಂ ಸಮುದಾಯದ ಸ್ಮಶಾನದ ಕಾಂಪೌಂಡ್ ಗೋಡೆ ಮಳೆ ನೀರಿಗೆ ಕುಸಿದು ಬಿದ್ದಿರುವುದನ್ನು ಪರಿಶೀಲಿಸಲಾಗಿದೆ ಸಚಿವರು, ಎಷ್ಟು ಮೀಟರ್ ಕಾಂಪೌಂಡ್ ಹಾನಿ ಎಂಬ ಮಾಹಿತಿ ನೀಡಿದರೆ, ಅಲ್ಪಸಂಖ್ಯಾತ ಇಲಾಖೆಯಿಂದ ಅನುದಾನ ಕೊಡಿಸಲಾಗಿದೆ ನೂತನ ಕಾಂಪೌಂಡ್ ನಿರ್ಮಿಸಿಕೊಡಲಾಗುವುದು ಎಂದು ಭರವಸೆ. ನಂತರ ಅಜ್ಜೀಪುರ ಗ್ರಾಮ ವ್ಯಾಪ್ತಿಯ ವ್ಯಾಪ್ತಿಯ ದಾಸನದೊಡ್ಡಿ ಗ್ರಾಮಕ್ಕೂ ಭೇಟಿ ನೀಡಿ, ನೀರು ನುಗ್ಗಿ ಗೋಡೆ ಕುಸಿದ ಮನೆಗಳನ್ನು ಪರಿಶೀಲಿಸಿ, ಅತಿ ಶೀಘ್ರದಲ್ಲಿ ಪರಿಹಾರ ಒದಗಿಸಲಾಗಿದೆ. ಇದೇ ಸಂದರ್ಭದಲ್ಲಿ ಅತಿ ಹೆಚ್ಚು ನಷ್ಟಕ್ಕೊಳಗಾದ ತುಳಸಮ್ಮ ಮತ್ತು ಜಾನುವಾರುಗಳಿಗೆ ಮೇವಿಲ್ಲ ಎಂದು ಅಳಲು ತೊಡಿಕೊಂಡ ಈರಸೇಗೌಡ ರವರಿಗೆ ಸಚಿವರು ತಮ್ಮ ವೈಯಕ್ತಿಕವಾಗಿ ಧನಸಹಾಯ ಆಯ್ಕೆ. ಈ ಭೇಟಿ ವೇಳೆ ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಮಧುನಹಳ್ಳಿ ಶಿವಕುಮಾರ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ನಟರಾಜು, ಮುಖಂಡರಾದ ನಾರಾಯಣ ಸೇರಿದಂತೆ ಮತ್ತಿತರ ಕಾರ್ಯಗಳ ಪರಿಶೀಲನೆ ಮಾಡಿದರು.

## ಪರಿಸರ ಸಂರಕ್ಷಣೆ: ಜೀವನದಲ್ಲಿ ಅನುಸರಿಸುವ ಅಭ್ಯಾಸವಾಗಲಿ

**▸▸ ಸಚಿವ ರಾಮಲಿಂಗಾರೆಡ್ಡಿ**

**"ಎಲ್ಲರ ಪ್ರಗತಿಗೆ ಶಕ್ತಿ' ಆಶಯದೊಂದಿಗೆ ಟಿಕೆಎಂನ ಸುಸ್ಥಿರತೆ ವರದಿ 2026 ಬಿಡುಗಡೆ**




ರಾಮನಗರ: ಪರಿಸರ ಸಂರಕ್ಷಣೆ ಕೇವಲ ನೀತಿಗಳಿಗೆ ಸೀಮಿತವಾಗದೆ ಪ್ರತಿನಿತ್ಯದ ಜೀವನದಲ್ಲಿ ಅನುಸರಿಸುವ ಅಭ್ಯಾಸವಾಗಬೇಕು ಎಂದು ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬಿಡದಿಯ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಸಂಸ್ಥೆಯು 'ಎಲ್ಲರ ಪ್ರಗತಿಗೆ ಶಕ್ತಿ' ಎಂಬ ಆಶಯದೊಂದಿಗೆ ರೂಪಿಸಿರುವ ಸುಸ್ಥಿರತೆ ವರದಿ 2026 ಅನ್ನು ಬಿಡುಗಡೆ ಮಾಡಿದ ವೇಳೆ ಅವರು ಮಾತನಾಡಿದರು. ನೀರಿನ ಸಂರಕ್ಷಣೆ, ತ್ಯಾಜ್ಯ ಕಡಿತ, ಸ್ವಚ್ಛ ಇಂಧನ ಬಳಕೆ ಹಾಗೂ ಜೀವವೈವಿಧ್ಯ ಸಂರಕ್ಷಣೆ ಸೇರಿದಂತೆ ಪ್ರತಿಯೊಂದು ಪ್ರಯತ್ನವೂ ಮಹತ್ವದ್ದಾಗಿದೆ. ಕೈಗಾರಿಕೆಗಳು ಈ ಪರಿವರ್ತನೆಗೆ ಪ್ರಮುಖ ನಾಯಕತ್ವ ನೀಡುವ ಸಾಮರ್ಥ್ಯ ಹೊಂದಿದ್ದು, ಅವುಗಳ ಕ್ರಮಗಳು ಜನರು, ಸಮುದಾಯಗಳು ಮತ್ತು ಮುಂದಿನ ಪೀಳಿಗೆಗಳ ಮೇಲೆ ಪರಿಣಾಮ ಬೀರುತ್ತವೆ ಎಂದರು.

**ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ 104.7 ಕೋಟಿ ರೂ ವೆಚ್ಚ – ಬಿ.ಪದ್ಮನಾಭ**

ಟೊಯೊಟಾ ಕಿರ್ಲೋಸ್ಕರ್ ಮೋಟಾರ್‌ನ ಉತ್ಪಾದನಾ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಬಿ. ಪದ್ಮನಾಭ ಮಾತನಾಡಿ, ಟೊಯೊಟಾದ ತತ್ವಗಳು, ಮೌಲ್ಯಗಳು ಹಾಗೂ 'ಎಲ್ಲರಿಗೂ ಸಂತೋಷವನ್ನು ಸೃಷ್ಟಿಸುವುದು' ಎಂಬ ಧ್ಯೇಯವನ್ನು ಆಧರಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ. 2025-26ನೇ ಹಣಕಾಸು ವರ್ಷದಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ. 104.7 ಕೋಟಿ ಹಣವನ್ನು ಹೂಡಿಕೆ ಮಾಡಲಾಗಿದೆ. ಸಂಸ್ಥೆಯ ಸಾಮಾಜಿಕ ಉಪಕ್ರಮಗಳ ಮೂಲಕ ಆರಂಭದಿಂದಲೂ 74 ಲಕ್ಷಕ್ಕೂ ಅಧಿಕ ಜನರಿಗೆ ಪ್ರಯೋಜನವಾಗಿದ್ದು, ಅವರಲ್ಲಿ 6 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸೇರಿದ್ದಾರೆ ಎಂದರು. ಸುಸ್ಥಿರ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಗುರುತಿಸಿರುವ ಸಂಸ್ಥೆ, ಭವಿಷ್ಯಕ್ಕೆ ಸಿದ್ಧವಾಗಿರುವ ಕೌಶಲ್ಯ, ಉದ್ಯೋಗ ಸ್ಥಳದಲ್ಲಿ ಒಳಗೊಳ್ಳುವಿಕೆ ಹಾಗೂ ಸಿಬ್ಬಂದಿ ಕ್ಷೇಮಾಭಿವೃದ್ಧಿಗೆ ಒತ್ತು ನೀಡುತ್ತಿದೆ. ಟೊಯೊಟಾ ತಾಂತ್ರಿಕ ತರಬೇತಿ ಸಂಸ್ಥೆ ಹಾಗೂ 120ಕ್ಕೂ ಅಧಿಕ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು 30ಕ್ಕೂ ಅಧಿಕ ಸರ್ಕಾರಿ ತಾಂತ್ರಿಕ ತರಬೇತಿ ಕೇಂದ್ರಗಳ ಸಹಭಾಗಿತ್ವದ ಮೂಲಕ 1.40 ಲಕ್ಷಕ್ಕೂ ಅಧಿಕ ಯುವಕರಿಗೆ ತರಬೇತಿ ನೀಡಲಾಗಿದೆ ಎಂದು ವಿವರಿಸಿದರು. ಇದರ ಜೊತೆಗೆ ಸುರಕ್ಷತೆ, ವೈವಿಧ್ಯತೆ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸಲಾಗುತ್ತಿದೆ. ಸಮುದಾಯ ಅಭಿವೃದ್ಧಿಯ ಭಾಗವಾಗಿ ಶಿಕ್ಷಣ, ಆರೋಗ್ಯ, ನೈರ್ಮಲ್ಯ, ನೀರಿನ ಸಂರಕ್ಷಣೆ, ರಸ್ತೆ ಸುರಕ್ಷತೆ, ಜೀವನೋಪಾಯ ಹಾಗೂ ಪರಿಸರ ಪುನಶ್ಚೇತನ ಕ್ಷೇತ್ರಗಳಲ್ಲಿ ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಈ ವೇಳೆ ಟೊಯೋಟಾ ಕಂಪನಿಯ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

# ದಸರಾ ಭದ್ರತೆಗೆ 6 ಸಾವಿರಕ್ಕೂ ಹೆಚ್ಚು ಪೊಲೀಸರು

## ಮೈಸೂರಲ್ಲಿ ಪೊಲೀಸರ ಸಭೆ ನಡೆಸಿ, ದಸರಾ ಸ್ಥಳಗಳ ಪರಿಶೀಲಿಸಿದ ಡಿಜಿಪಿ ಡಾ.ಸಲೀಂ



**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ದಿನಗಣನೆ ಇರುವ ಹಿನ್ನೆಲೆಯಲ್ಲಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಸಲೀಂ ಅಧ್ಯಕ್ಷತೆಯಲ್ಲಿ ಮಹತ್ವದ ಸಭೆ ಹಾಗೂ ಸ್ಥಳ ಮಹಜರು ನಡೆಸಿದರು.

ಮೈಸೂರಿನ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ದಸರಾ ಮಹೋತ್ಸವದ ವೇಳೆ ಕೈಗೊಳ್ಳಬೇಕಾದ ಭದ್ರತಾ ಕ್ರಮಗಳ ಕುರಿತು ಹಿರಿಯ ಪೊಲೀಸ್ ಅಧಿಕಾರಿಗಳಿಂದ ಡಾ.ಸಲೀಂ ಮಾಹಿತಿ ಪಡೆದುಕೊಂಡರು. ದಸರಾ ಸಂದರ್ಭದಲ್ಲಿ ಅರಮನೆ, ಜಂಬೂಸವಾರಿ ಮಾರ್ಗ, ಪ್ರಮುಖ ಪ್ರವಾಸಿ ತಾಣಗಳು, ಜನದಟ್ಟಣೆ ಪ್ರದೇಶಗಳು ಹಾಗೂ ವಿವಿಧ ದಸರಾ ಕಾರ್ಯಕ್ರಮಗಳ ವೇಳೆ ಕೈಗೊಳ್ಳಬೇಕಾದ ಭದ್ರತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಯಿತು. ಸಭೆಯ ಬಳಿಕ ಸ್ವತಃ ಅರಮನೆ, ಬನ್ನಿಮಂಟಪ, ಜಂಬೂ ಸವಾರಿ ಸಾಗುವ ರಾಜಪಥ ರಸ್ತೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಮಾತನಾಡಿದ ಡಾ.ಸಲೀಂ, ದಸರಾ ಬಂದೋಬಸ್ತ್ ಕುರಿತು ಸಭೆ ನಡೆಸಲಾಗಿದ್ದು, ಭದ್ರತಾ ವ್ಯವಸ್ಥೆಯ ಸಂಪೂರ್ಣ ರೂಪುರೇಷೆ ಬಗ್ಗೆ ಚರ್ಚಿಸಲಾಗುತ್ತಿದೆ ಎಂದು ತಿಳಿಸಿದರು.

ಕಳೆದ ವರ್ಷ ಮೈಸೂರು ದಸರಾ ಮಹೋತ್ಸವದ ಭದ್ರತೆಗಾಗಿ ಸುಮಾರು 6 ಸಾವಿರ ಪೊಲೀಸರನ್ನು ನಿಯೋಜಿಸಲಾಗಿತ್ತು. ಈ ಬಾರಿ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪೊಲೀಸ್ ಬಂದೋಬಸ್ತ್ ಅಗತ್ಯವಿದ್ದು, ಅದಕ್ಕೆ ಸಂಬಂಧಿಸಿದ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ದಸರಾ ಮಹೋತ್ಸವಕ್ಕೆ ಆಗಮಿಸುವ ಲಕ್ಷಾಂತರ ಪ್ರವಾಸಿಗರು ಹಾಗೂ ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಲಾಗುವುದು. ಜನದಟ್ಟಣೆ ನಿರ್ವಹಣೆ, ಸಂಚಾರ ನಿಯಂತ್ರಣ, ಪ್ರಮುಖ ಸ್ಥಳಗಳ ಭದ್ರತೆ ಸೇರಿ ವಿವಿಧ ಆಯಾಮಗಳಲ್ಲಿ ಪೊಲೀಸ್ ವ್ಯವಸ್ಥೆ ರೂಪಿಸಲಾಗುತ್ತಿದೆ. ಈ ಬಾರಿ ಎಷ್ಟು ಸಿಬ್ಬಂದಿಯನ್ನು ನಿಯೋಜಿಸಬೇಕು, ಯಾವೆಲ್ಲೆಡೆ ಹೆಚ್ಚುವರಿ ಭದ್ರತೆ ಕಲ್ಪಿಸಬೇಕು ಹಾಗೂ ಬಂದೋಬಸ್ತ್‌ನ ಅಂತಿಮ ರೂಪುರೇಷೆ ಹೇಗಿರಬೇಕು ಎಂಬುದರ ಕುರಿತು ಮುಂದಿನ ಹಂತದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು. ಸಭೆಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾಲಾಟ್ಕರ್, ನಗರ ಪೊಲೀಸ್ ಉಪ ಆಯುಕ್ತ ಸುಂದರ್ ರಾಜ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

# 3ರಂದು ಸಂಗೀತ ಕಾರ್ಯಕ್ರಮ

ಮೈಸೂರು: ಕನ್ನಡ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ನೆನಪಿನಲ್ಲಿ ಕೆಎಂಪಿಕೆ. ಟ್ರಸ್ಟ್ ವತಿಯಿಂದ ಅ. 3 ರಂದು ಸಂಜೆ 5ಕ್ಕೆ ಹಾಡು ಹಳೆಯದಾದರೇನು ಶೀರ್ಷಿಕೆಯಲ್ಲಿ ಪುಟ್ಟಣ್ಣ ಕಣಗಾಲ್ ಅವರ ಎಲ್ಲ ಚಲನ ಚಿತ್ರಗಳ ಲೈವ್ ಸಂಗೀತ ಕಾರ್ಯಕ್ರಮವಿದೆ ಎಂದು ಹಿರಿಯ ವಿಪ್ರ ಮುಖಂಡ ಡಿ.ಟಿ. ಪ್ರಕಾಶ್ ತಿಳಿಸಿದರು.

ಈ ವೇಳೆ ಸುಮಾರು 35 ಗೀತೆ ಹಾಡಲಾಗುವುದು. ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದ್ದವು. ಕಾದಂಬರಿ ಆಧಾರಿತ ಮಹಿಳಾ ಪ್ರಾಧಾನ್ಯತೆಯ ಉತ್ತಮ ಸಂಗೀತವುಳ್ಳ ಚಿತ್ರಗಳು ಇವಾಗಿದ್ದವು. ಇವನ್ನು ನೆನಪಿಸು ಕಾರ್ಯಕ್ರಮ ಇದಾಗಿದೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು.ತಾವು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಕೆ.ಹರೀಶ್‌ಗೌಡ, ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಸಾ.ರಾ. ಮಹೇಶ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಇನ್ನಿತರರು ಅತಿಥಿಗಳಾಗಿರುವರೆಂದರು. ವಿಕ್ರಂ ಅಯ್ಯಂಗಾರ್, ವಿನಯ್ ಕಣಗಾಲ್, ಗುರುದತ್, ಅಜಯ್ ಶಾಸ್ತ್ರಿ ಹಾಜರಿದ್ದರು.



# ಅ.13 ರಿಂದ 'ದಸರಾ ಕವಿಗೋಷ್ಠಿ: ಡಾ.ಎಂ.ದಾಸೇಗೌಡ




ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವ-2026ರ ಸಾಂಸ್ಕೃತಿಕ ವೈಭವಕ್ಕೆ ಸಾಹಿತ್ಯದ ಮೆರಗು ನೀಡುವ ಉದ್ದೇಶದಿಂದ ದಸರಾ ಕವಿಗೋಷ್ಠಿ ಉಪಸಮಿತಿಯ ವತಿಯಿಂದ ಅ.13 ರಿಂದ 17 ರವರೆಗೆ 'ದಸರಾ ಕವಿಗೋಷ್ಠಿ'ಯನ್ನು ಆಯೋಜಿಸಲಾಗಿದೆ ಎಂದು ದಸರಾ ಕವಿಗೋಷ್ಠಿ ಉಪಸಮಿತಿಯ ಉಪ ವಿಶೇಷಾಧಿಕಾರಿ ಡಾ.ಎಂ. ದಾಸೇಗೌಡ ಹೇಳಿದರು.

ಮಹಾನಗರ ಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಬಾರಿಯ ದಸರಾ ಕವಿಗೋಷ್ಠಿಯು ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ನೆರವೇರಲಿದ್ದು, ಒಟ್ಟು ಐದು ವಿಭಿನ್ನ ಆಯಾಮಗಳಲ್ಲಿ (ಚುಟುಕು-ಹಾಸ್ಯ, ಯುವ, ಚಿಗುರು, ಜನಪದ ಹಾಗೂ ಪ್ರಧಾನ ಕವಿಗೋಷ್ಠಿ) ಮೂಡಿಬರಲಿದೆ ಎಂದು ಹೇಳಿದರು. ಅ.13ರಂದು ಚುಟುಕು ಮತ್ತು ಹಾಸ್ಯ ಕವಿಗೋಷ್ಠಿ ಹಿರಿಯ ಲೇಖಕಿ ವೈದೇಹಿ ಅವರಿಂದ ಕವಿಗೋಷ್ಠಿ ಉದ್ಘಾಟನೆಯಾಗಲಿದ್ದು, ಪ್ರಖ್ಯಾತ ಚಲನಚಿತ್ರ ನಟ ಡಾ. ಮುಖ್ಯಮಂತ್ರಿ ಚಂದ್ರು ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಸಿದ್ಧ ಲೇಖಕಿ ಡಾ. ಎಚ್.ಆರ್. ಸುಜಾತ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಅ.14 ರಂದು ಯುವ ಕವಿಗೋಷ್ಠಿ ಪ್ರಸಿದ್ಧ ಕವಯತ್ರಿ ಡಾ.ಕೆ.ಷರೀಫಾ ಉದ್ಘಾಟಿಸಲಿದ್ದು, ಹಿರಿಯ ಕವಿ ಎಚ್. ಗೋವಿಂದಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಸತ್ಯಾನಂದ ಪಾತ್ರೋಟ ಮುಖ್ಯ ಅತಿಥಿಯಾಗಿ ಹಾಗೂ ಚಲನಚಿತ್ರ ಗೀತಸಾಹಿತಿ ಹೃದಯ ಶಿವ ವಿಶೇಷ ಅತಿಥಿಯಾಗಿ ಪಾಲ್ಗೊಳ್ಳಲಿ ದ್ದಾರೆ. ಅ.15ರಂದು ಚಿಗುರು ಕವಿಗೋಷ್ಠಿ ಉದಯೋನ್ಮುಖ ಬರಹಗಾರರಿಗಾಗಿ ನಡೆಯುವ ಈ ಗೋಷ್ಠಿಯನ್ನು ಮಕ್ಕಳ ಸಾಹಿತಿ ಬಿಳಿಗಿರಿ ಕೃಷ್ಣಮೂರ್ತಿ ಉದ್ಘಾಟಿಸಲಿದ್ದು, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ. ಕವಿತಾ ಕುಸುಗಲ್ ಮುಖ್ಯ ಅತಿಥಿಯಾಗಿ ಹಾಗೂ ಚಿಗುರು ಕವಿ ತಾನಿಷ್ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದಾರೆಂದರು.

ಅ.16ರಂದು ಜನಪದ ಕಾವ್ಯಗೋಷ್ಠಿ ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ ಉದ್ಘಾಟಿಸಲಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಡಾ. ರಾಜಪ್ಪ ದಳವಾಯಿ ಮುಖ್ಯ ಅತಿಥಿಗಳಾಗಿರಲಿದ್ದಾರೆ. ಅ.17 ರಂದು ಪ್ರಧಾನ ಕವಿಗೋಷ್ಠಿ ಹಿರಿಯ ಕವಯತ್ರಿ ಪ್ರತಿಭಾ ನಂದಕುಮಾರ್ ಉದ್ಘಾಟಿಸಲಿದ್ದು, ಹಿರಿಯ ಕವಿ ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಕವಿ ಹಾಗೂ ಸಂಸ್ಕೃತಿ ಚಿಂತಕ ಸುಬ್ಬು ಹೊಲೆಯಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಈ ಬಾರಿ ಕಾರ್ಯಕ್ರಮದ ಮಹತ್ವವನ್ನು ಸಾರಲು ಕವಿಗೋಷ್ಠಿ ಪ್ರಚಾರ ತೇರಿಗೆ ಅಕ್ಟೋಬರ್ 5 ರಂದು ಬೆಳಿಗ್ಗೆ 11 ಗಂಟೆಗೆ ಚಾಲನೆ ನೀಡ ಲಾಗುವುದು. ಈ ವಾಹನವು ಮೈಸೂರಿನಾದ್ಯಂತ ಸಂಚರಿಸಲಿದೆ. ಸಮಾಜದ ವಿವಿಧ ವರ್ಗಗಳ ಕಾವ್ಯ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವುದರ ಜೊತೆಗೆ, ಬಹುರೂಪಿ ಕಾವ್ಯದೊಟ್ಟಿಗೆ ಪುಸ್ತಕ ಹಾಗೂ ಇತರ ಮಳಿಗೆಗಳಿಗೂ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಸರಾ ಕವಿಗೋಷ್ಠಿಯ ಕಾರ್ಯಾಧ್ಯಕ್ಷ ಪ್ರೊ.ಎಂ.ನಂಜಯ್ಯ ಹೊಂಗನೂರು, ಪ್ರೊ.ತ್ರಿವೇಣಿ, ಉಮೇಶ್, ಗಾಯಕರಾದ ದಿವ್ಯ, ಆನಂದ್ ಮತ್ತಿತರರು ಉಪಸ್ಥಿತರಿದ್ದರು.

# ಜೀವಜಲ ಸಂರಕ್ಷಣೆ ಎಲ್ಲರ ಸಹಕಾರ ಅಗತ್ಯ



**ಚಾಮರಾಜನಗರ:** ಜೀವಜಲ ಸಂರಕ್ಷಣೆ ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ ಎಂದು ರೋಟರಿ ಕ್ಲಬ್ ಆಫ್ ಮೈಸೂರು ಮಾಜಿ ಅಧ್ಯಕ್ಷರು,ದಕ್ಷಿಣ ಏಷ್ಯಾ ವಿಭಾಗದ ಪರಿಸರ ಸುಸ್ಥಿರತೆಗಾಗಿನ ರೋಟರಿ ಕ್ರಿಯಾ ಗುಂಪು) ವೆಸ್ಟ್ ಅಧ್ಯಕ್ಷ ರೋಟೇರಿಯನ್ ಸಿ.ಆರ್. ಹನುಮಂತು ಹೇಳಿದರು

ನಗರದ ರೋಟರಿ ಭವನದಲ್ಲಿ ನಡೆದ ರೋಟರಿ ಸಂಸ್ಥೆ ನೀರಿನ ಸುಸ್ಥಿರ ಬಳಕೆ ಕುರಿತ ವಿಚಾರ ಸಂಕೀರ್ಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನೀರು ಅತ್ಯಂತ ಅಮೂಲ್ಯವಾದದ್ದು.ನೀರು ಇಲ್ಲದೆ ಜೀವಸಂಕುಲದ ಉಳಿವಿಕೆಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಇಂದು ಜಾಗತಿಕ ತಾಪಮಾನ ಏರಿಕೆ, ನಗರೀಕರಣ ಮತ್ತು ನೀರಿನ ದುರುಪಯೋಗದಿಂದಾಗಿ ನೀರಿನ ಅಭಾವ ತೀವ್ರಗೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ಕೈಜೋಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದರು. ಜೀವಜಲವನ್ನು ಸಂರಕ್ಷಿಸಲು ಪ್ರತಿಯೊಂದು ಮನೆ, ಶಾಲೆ ಮತ್ತು ಕಚೇರಿಗಳಲ್ಲಿ ಮಳೆನೀರನ್ನು ಸಂಗ್ರಹಿಸಿ, ಭೂಗರ್ಭಕ್ಕೆ ಇಂಗಿಸುವ ವ್ಯವಸ್ಥೆ ಮಾಡಬೇಕು. ಇದು ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಅತ್ಯುತ್ತಮ ಮಾರ್ಗವಾಗಿದೆ. ದೈನಂದಿನ ಚಟುವಟಿಕೆಗಳಾದ ಹಲ್ಲುಜ್ಜುವುದು, ಪಾತ್ರೆ ತೊಳೆಯುವುದು ಹಾಗೂ ಸ್ನಾನ ಮಾಡುವಾಗ ನೀರನ್ನು ಅನಾವಶ್ಯಕವಾಗಿ ಹರಿಯಬಿಡಬಾರದು. ನಲ್ಲಿಗಳು ಸೋರುತ್ತಿದ್ದರೆ ತಕ್ಷಣ ದುರಸ್ತಿ ಮಾಡಿಸಬೇಕು ಎಂದರು. ಹೆಚ್ಚು ಹೆಚ್ಚು ಗಿಡಮರಗಳನ್ನು ನೆಡುವುದರಿಂದ ಮಳೆ ಪ್ರಮಾಣ ಹೆಚ್ಚುತ್ತದೆ ಮತ್ತು ಮಣ್ಣಿನ ತೇವಾಂಶ ಉಳಿಯುತ್ತದೆ. ರೈತರು ಸಾಂಪ್ರದಾಯಿಕ ನೀರಾವರಿ ಪದ್ಧತಿಯ ಬದಲು ಹನಿ ನೀರಾವರಿ, ತುಂತುರು ನೀರಾವರಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು. ಕಡಿಮೆ ನೀರಿನ ಬೆಳೆಗಳನ್ನು ಮಾಡುವಮೂಲಕ ನೀರಿನ ಅಪವ್ಯಯ ತಡೆಯಬಹುದು.

**ಜಲಮೂಲಗಳ ರಕ್ಷಣೆ**

ಕೆರೆ, ನದಿ, ಬಾವಿಗಳಿಗೆ ಕಸ-ಕಡ್ಡಿ ಮತ್ತು ರಾಸಾಯನಿಕ ತ್ಯಾಜ್ಯಗಳನ್ನು ಎಸೆಯದೆ ಅವುಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ನೀರಿನ ಸಂರಕ್ಷಣೆ ಕೇವಲ ಸರ್ಕಾರ ಅಥವಾ ಸಂಘ-ಸಂಸ್ಥೆಗಳ ಜವಾಬ್ದಾರಿಯಲ್ಲ, ಅದು ನಮ್ಮೆಲ್ಲರ ನೈತಿಕ ಹೊಣೆಗಾರಿಕೆಯಾಗಿದೆ. ಜೀವಜಲವನ್ನು ಮುಂದಿನ ಪೀಳಿಗೆಗೆ ಉಳಿಸುವ ಕೆಲಸ ಮಾಡೋಣ ಎಂದರು. ಅಧ್ಯಕ್ಷತೆ ವಹಿಸಿದ್ದ ರೋಟರಿ ಸಂಸ್ಥೆ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಮಾತನಾಡಿ, ಸಕಲ ಜೀವರಾಶಿಗಳು ನೀರಿನಿಂದಲೇ ಬದುಕುತ್ತವೆ. ಆ ಜೀವಜಲವೇ ಇಲ್ಲವಾದರೆ ಬದುಕು ದುಸ್ತರ. ಅಮೂಲ್ಯವಾದ ಜಲ ಸಂಪತ್ತನ್ನು ಹಿತ-ಮಿತವಾಗಿ ಉಪಯೋಗಿಸುವ ಕೆಲಸವನ್ನು ಎಲ್ಲರೂ ಮಾಡುವಂತಾಗಬೇಕು ಎಂದರು. ಸಭೆಯಲ್ಲಿ ರೋಟರಿ ಸಂಸ್ಥಾಪಕ ಸದಸ್ಯ ಶ್ರೀನಿವಾಸಶೆಟ್ಟಿ, ಕಾರ್ಯದರ್ಶಿ ಅಂಕಶೆಟ್ಟಿ, ಕಾಳನಹುಂಡಿ ಗುರುಸ್ವಾಮಿ, ಪಿಡಿಜಿ ಡಾ.ನಾಗಾರ್ಜುನ್, ಪದಾಧಿಕಾರಿಗಳು, ರೈತ ಮುಖಂಡರಾದ ಎ.ಎಂ.ಮಹೇಶ್ ಪ್ರಭು, ಹೊನ್ನೂರು ಪ್ರಕಾಶ್,ಸದಸ್ಯರು, ರೈತ ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದರು.

# ಜೆಡಿಎಸ್ ಮುಖಂಡರ ಬಂಧನ



ಚಾಮರಾಜನಗರ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕಪ್ಪುಭಾವುಟ ಪ್ರದರ್ಶನ ಮಾಡಲು ಹೊರಟಿದ್ದ ರಾಜ್ಯ ರೈತ ಹಿತರಕ್ಷಣಾ ಹೋರಾಟ ಸಮಿತಿ ಹಾಗೂ ಜೆಡಿಎಸ್ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.

ಕೊಳ್ಳೇಗಾಲದ ಎಂ.ಬಿ.ಎಸ್.ವಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ನಡೆದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಮತ್ತು ಹನೂರು ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ, ಹಾಗೂ ಸವಲತ್ತುಗಳ ವಿತರಣಾ ಸಮಾರಂಭಕ್ಕೆ ಆಗಮಿಸುತ್ತಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರೈತರ ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮುಖ್ಯಮಂತ್ರಿ ಗಮನ ಸೆಳೆಯಲು ಅವರಿಗೆ ಕಪ್ಪುಬಾವುಟ ಪ್ರದರ್ಶನ ಮಾಡಲು ನಗರದಿಂದ ಹೊರಟಿದ್ದ ರಾಜ್ಯ ರೈತ ಹಿತರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಕೆಲ್ಲಂಬಳ್ಳಿ ಸೋಮನಾಯಕ, ಜಿಲ್ಲಾಧ್ಯಕ್ಷ ಆಲೂರುಮಲ್ಲು, ಜಿಲ್ಲಾ ಉಪಾಧ್ಯಕ್ಷ ಜಿ.ಎಂ.ಶಂಕರ್, ಜೆಡಿಎಸ್ ರಾಜ್ಯ ಕಾರ್ಯದರ್ಶಿ ಹೊಂಗನೂರು ರಾಜು, ಹೆಗ್ಗೋಠಾರ ಮಂಜು, ಕಾಳನಹುಂಡಿ ಮಲ್ಲಿಕ್, ರಾಜಶೇಖರ, ಸುಬ್ಬಣ್ಣ ಅವರನ್ನು ನಗರದ ಭುವನೇಶ್ವರಿ ವೃತ್ತದಲ್ಲಿ ಪೊಲೀಸರು ವಶಕ್ಕೆ ಪಡೆದು ಮಹಿಳಾ ಪೊಲೀಸಠಾಣೆಗೆ ಕರೆದೊಯ್ದುರು. ಪ್ರತಿಭಟನಾನಿರತರು ಮುಖ್ಯಮಂತ್ರಿ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

# ಸಿಎಂಯಿಂದ ಲ್ಯಾನ್ಸ್‌ಡೌನ್, ಮಾರುಕಟ್ಟೆ ವೀಕ್ಷಣೆ

## ಶಾಸಕ ತನ್ವೀರ್ ಸೇಠ್ ಹೇಳಿಕೆ । ಮಾರುಕಟ್ಟೆಗಳ ವೀಕ್ಷಣೆ, ಹೊಸ ಮಾರುಕಟ್ಟೆಗಳ ನಿರ್ಮಾಣದ ಪ್ರಸ್ತಾವನೆ





ಮೈಸೂರು: ಶೀಘ್ರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರದ ಪ್ರಮುಖ ಲ್ಯಾನ್ಸ್ಡೌನ್ ಕಟ್ಟಡ ಹಾಗೂ ದೇವರಾಜ ಮಾರುಕಟ್ಟೆಯ ವೀಕ್ಷಣೆ ಮಾಡಿ, ಅಲ್ಲಿನ ಸಮಸ್ಯೆಗಳ ಇತ್ಯರ್ಥಕ್ಕೆ ಮುಂದಾಗಲಿದ್ದಾರೆ ಎಂದು ಶಾಸಕ ತನ್ವೀರ್ ಸೇಠ್ ಅವರು ತಿಳಿಸಿದ್ದಾರೆ. ಕರ್ನಾಟಕ ಪೊಲೀಸ್ ಅಕಾಡೆಮಿ ರಸ್ತೆಯ ಬೀದಿದೀಪ ಅಳವಡಿಕೆಗೆ ಚಾಲನೆ ನೀಡಿದರು. ಇತ್ತೀಚೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮೈಸೂರಿನ ಅಳಿಯನಾಗಿ ನಾಲ್ವಡಿ ಹಾಕಿಕೊಟ್ಟ ಅಭಿವೃದ್ಧಿ ಪಥದಲ್ಲಿ ಸಾಗಬೇಕೆಂಬ ಚಿಂತನೆ ಗೆ. ಈ ನಗರದ ಲ್ಯಾನ್ಸ್ಡೌನ್ ಕಟ್ಟಡ ಹಾಗೂ ದೇವರಾಜ ಮಾರುಕಟ್ಟೆಯನ್ನು ತಾವೇ ಖುದ್ದಾಗಿ ಬಂದು ಪರಿಶೀಲಿಸಲಾಗಿದೆ ಹೇಳಿದ್ದಾರೆ. ಈ ವೇಳೆ ನ್ಯಾಯಾಲಯದ ಆದೇಶ ಏನಿದೆ ಹಾಗೂ ಸರ್ಕಾರದಿಂದ ಯಾವ ರೀತಿಯ ಕೆಲಸ ಮಾಡಬೇಕೆಂದು ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ದಸರಾ ವೇಳೆ ಅಥವಾ ನಂತರವಾದರೂ ಮೈಸೂರು ಜನತೆಗೆ ಕೊಡುಗೆಯಾಗಿ ಈ ಕೆಲಸ ಮಾಡಬೇಕೆಂದು ಮನವಿ ಮಾಡಿದ್ದೇವೆ. ದೇವರಾಜ ಮತ್ತು ವಿನೋಬಾ ಮಾರುಕಟ್ಟೆ ನವೀಕರಣದ ವೇಳೆ ನಗರದ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತ್ಯೇಕ ಹೊಸ ಮಾರುಕಟ್ಟೆಗಳು ನಿರ್ಮಾಣಕ್ಕೂ ಸಹ ಬೇಡಿಕೆ ಇಟ್ಟಿದ್ದೇನೆ. ಇವು ಕಾರ್ಯರೂಪಕ್ಕೆ ಬಂದರೆ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಬೀದಿಬದಿ ವ್ಯಾಪಾರಿಗಳನ್ನು ಸ್ಥಳಾಂತರಿಸುವ ವ್ಯವಸ್ಥೆ ನಮಗೆ ಅನ್ವಯಿಸುವುದಿಲ್ಲ ಎಂದು ಅವರು ವಿವರಿಸಿದರು.

### ಅಭಿವೃದ್ಧಿ ಕಾರ್ಯಗಳು, ವಿವಾದಿತ ರಸ್ತೆಗೆ ಮುಕ್ತಿ

ಕೇಂದ್ರದ ಮಹಾತ್ಮ ಗಾಂಧಿ ನಗರ ಪುನಶ್ಚೇತನ ಯೋಜನೆ ಹಾಗೂ ರಾಷ್ಟ್ರೀಯ ಹಸಿರು ಯೋಜನೆಡಿ ಕಾರ್ಯಕ್ರಮದ ಕಾಮಗಾರಿ ಆರಂಭಿಸಿದೆ. ರಾಜ್ಯ ಸರ್ಕಾರದಿಂದ ಎಲ್ಲಾ ಭಾಗದಲ್ಲೂ ಅಭಿವೃದ್ಧಿ ಕೆಲಸ ಆಗುತ್ತಿದೆ, ರಾಜ್ಯ ಸರ್ಕಾರ ದಿವಾಳಿಯೆದ್ದಿದೆ ಎಂಬ ಪಕ್ಷದ ಮಾತಿನಲ್ಲಿ ಯಾವುದೇ ಸತ್ಯಾಂಶವಿಲ್ಲ. ಅವರ ಸರ್ಕಾರ ಇದ್ದಾಗ ಅವರ ಶಾಸಕರಿಗೆ ಕೊಟ್ಟಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿಲ್ಲ, ಯಾವುದೇ ಕ್ಷೇತ್ರದ ಶಾಸಕರಿಗೆ ಕೆಲಸ ಮಾಡಲಾಗಿದೆ ಅನುದಾನವನ್ನು ನಿಲ್ಲಿಸಿಲ್ಲ. ವಿಶೇಷವಾಗಿ ಮೈಸೂರು ಜಿಲ್ಲೆಯ ಮಗನಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಹಾರಾಣಿ ಕಾಲೇಜು, ವಿದ್ಯಾರ್ಥಿನಿಲಯ, ಹಳೆ ಕಾಲೇಜು ಕಟ್ಟಡಗಳು ನವೀಕರಣ ಮತ್ತು ಆರೋಗ್ಯ ಕ್ಷೇತ್ರದ ಕಟ್ಟಡಗಳಂತಹ ಅನೇಕ ಶಾಶ್ವತ ಕೆಲಸಗಳನ್ನು ಮಾಡಲಾಗಿದೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ಮೈಸೂರಿನ ಅಳಿಯನಾಗಿ ಡಿ.ಕೆ. ಶಿವಕುಮಾರ್ ಅವರು ಅದನ್ನು ಮುಂದುವರಿಸಿಕೊಂಡು ಹೋಗಲಿದ್ದಾರೆ. ನಗರದ ಅತಿ ಹೆಚ್ಚು ವಿವಾದಕ್ಕೆ ಈಡಾಗಿದ್ದ ಪೊಲೀಸ್ ಅಕಾಡೆಮಿಯ ರಸ್ತೆಯಲ್ಲಿ ಫೋರಂ ಮಾಲ್‌ನಿಂದ ಎಸ್ಪಿ ವೃತ್ತದವರೆಗೆ 40 ಮರಗಳು ಕತ್ತರಿಸಿದ ಕೂಗು ಬಹಳ ಜೋರಾಗಿ ಕೇಳಿಬಂದಿತ್ತು. ಆದರೆ ಅದಕ್ಕೆ ಪರ್ಯಾಯವಾಗಿ 126 ಸಸಿಗಳನ್ನು ನೆಡಿಸಿ, ರಸ್ತೆ ಅಗಲೀಕರಣ ಕಾಮಗಾರಿಯನ್ನು ಸಮಯಕ್ಕೆ ಸರಿಯಾಗಿ ವೇಗದಲ್ಲಿ ಪೂರ್ಣಗೊಳಿಸಿದ್ದೇವೆ. ಈ ರಸ್ತೆಗೆ ವಿದ್ಯುತ್ ದೀಪಗಳನ್ನು ಅಳವಡಿಸಿ ಲೋಕಾರ್ಪಣೆ ಮಾಡುವ ಕೆಲಸ ಮಾಡಿದ್ದೇವೆ. ಇದರೊಟ್ಟಿಗೆ ಏಳು ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದು, ಎಚ್.ಸಿ. ಮಹದೇವಪ್ಪ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂದರ್ಭದಲ್ಲಿ ವಿವಿಧ ರಸ್ತೆಗಳ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಅಂಬೇಡ್ಕರ್ ವೃತ್ತದಿಂದ ಫೌಂಟೇನ್ ವೃತ್ತದವರೆಗೂ ನೂರಡಿ ರಸ್ತೆ ಅಗಲೀಕರಣ ಆಗಬೇಕೆಂದು ಹೇಳಿ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಜಾಗ ಪಡೆಯಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮತ್ತೊಂದೆಡೆ ಚಾಮುಂಡಿ ವಿಹಾರ ಮೈದಾನದ ಬಳಿ 9 ರಿಂದ 12 ಮೀಟರ್ ರಸ್ತೆ ಅಗಲೀಕರಣಕ್ಕೆ ಬೇಕಾಗುವ ಜಂಟಿ ಸರ್ವೆ ಮುಗಿದಿದೆ, ವಾರದಲ್ಲೇ ಆದೇಶ ಬರುವ ನಿರೀಕ್ಷೆಯಿದೆ ಎಂದು ಮಾಹಿತಿ.

### ದಸರಾ ಉಸ್ತುವಾರಿ ಹಂಚಿಕೆ, ಅಧಿಕಾರ ಕುಂಠಿತವಿಲ್ಲ

ದಸರಾ ಮಹೋತ್ಸವದಲ್ಲಿ ಒಂದು ಇಲಾಖೆಯಿಂದ ಒಂದು ಕಾರ್ಯಕ್ರಮ ನಡೆಯಲಿದೆ, ಸಂಬಂಧಪಟ್ಟ ಇಲಾಖಾ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಆಯಾ ಇಲಾಖೆ ಸಚಿವರೇ ಮಾಡಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದೀಪಾಲಂಕಾರ ಹೀಗೆ ಎಲ್ಲಾ ಇಲಾಖೆಗಳ ಜವಾಬ್ದಾರಿಯನ್ನು ಆಯಾ ಸಚಿವರೇ ನಿಭಾಯಿಸಬೇಕೆಂದು ಸೂಚಿಸಲಾಗಿದೆ. ಬರುವ ರೋಗಿಗಳಿಗೆ ಹಾಗೂ ಸ್ಥಳೀಯರಿಗೆ ಯಾರೂ ಆಭಾಸವಾಗಬಾರದು ಮತ್ತು ಸಚಿವರೇ ಖುದ್ದಾಗಿ ಇದ್ದಾಗ ಅಧಿಕಾರಿಗಳು ಚುರುಕಾಗಿ ಕೆಲಸ ಮಾಡುತ್ತಾರೆ 22 ಮಂದಿ ಸಚಿವರನ್ನು ನೇಮಿಸಲಾಗಿದೆ. ನಾಡಹಬ್ಬದ ಅರ್ಥ ನಿಜವಾಗಿಯೂ ಜನರಿಗೆ ತಲುಪಬೇಕಿದೆ ಹಾಗೂ ದಸರಾ ಆಚರಣೆಗೆ ಮೆರುಗು ತಂದುಕೊಡಬೇಕು ಎಂಬ ಈ ನಿರ್ಧಾರ ಎಲ್ಲಿಯೂ ಕುಂಠಿತವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

### ಒತ್ತುವರಿ ತೆರವು: ದಾಖಲೆ ಸಮೇತ ಚರ್ಚೆಗೆ ಬರುವಂತೆ ಸವಾಲು

ನಜರಾಬಾದ್ ದೇವಾಲಯದ ಸಮೀಪದ ಮನೆಗಳ ತೆರವು ವಿಚಾರಕ್ಕೆ ಸಂಬಂಧಿಸಿದಂತೆ ಅವರು ಮಾತನಾಡಿದರು, 140 ಚದರ ಗಜ ಜಾಗವನ್ನು ದೇವಾಲಯಕ್ಕೆ ಮಂಜೂರು ಮಾಡಿದರು. ಅರಳಿಮರ ಹಾಗೂ ಪೂಜಾ ಗುಡಿಯನ್ನು ದೇವಾಲಯಕ್ಕೆ ಬಳಕೆ ಮಾಡಿಕೊಳ್ಳಬೇಕೆಂಬ ಷರತ್ತುಗಳನ್ನು ಹಾಕಲಾಗಿದೆ. ಆದರೆ, ಅನೇಕರು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದರು. ಈ ಬಗ್ಗೆ ಎಂಟು ವರ್ಷಗಳಿಂದ ತಕರಾರು ನಡೆಯುತ್ತಿದ್ದು, ಇಂದು ಪೊಲೀಸರ ಮೇಲೆ ಹಲ್ಲೆ ಹಾಗೂ ಕಲ್ಲು ತೂರಾಟ ಮಾಡಿದ್ದಾರೆ. ಆ ಭಾಗದ ಮರಾಠ ಸಮುದಾಯಕ್ಕೆ ಶಾಲೆಗೆ ಸಂಬಂಧಿಸಿದ ಹಾವು, ಚೇಳುಗಳ ಸಮಸ್ಯೆ ಎದುರಾಗಿತ್ತು. ಹೀಗಾಗಿ ನಾಲ್ಕು ಬಾರಿ ಟೆಂಡರ್ ಮಾಡಿ ಇದೊಂದೇ ಕಾರಣಕ್ಕೆ ಕಾಮಗಾರಿ ಸ್ಥಗಿತಗೊಂಡಿತ್ತು. ಐದನೇ ಬಾರಿ ಎಲ್ಲರನ್ನೂ ಒಪ್ಪಿಸಿ 'ಕೆ.ಎನ್. ಪುರ ರಸ್ತೆ'ಯಾಗಿ ಮರುನಾಮಕರಣ ಮಾಡಿ ಶಾಲೆಯ ಮುಂದಿನ ಅನುಕೂಲ ಹಾಗೂ ರಸ್ತೆ ಅಭಿವೃದ್ಧಿಗೆ ನಿಗದಿಪಡಿಸಿದ ಜಾಗವನ್ನಷ್ಟೇ ತೆರೆಯಲಾಗಿದೆ. ನಾನು ದೇವರ ಭಕ್ತನೇ ಆಗಿದ್ದು, ದೇವಾಲಯಕ್ಕೆ ಕೈ ಹಾಕುವುದಿಲ್ಲ. ನನ್ನ ಕ್ಷೇತ್ರದಲ್ಲಿ ಎಷ್ಟು ದೇವಾಲಯ ಹಾಗೂ ಗುಡಿಗಳನ್ನು ಉಳಿಸಿದ್ದೇನೆ ಎಂಬುದು ನನಗೆ ಗೊತ್ತು, ಅದನ್ನು ರಾಜಕೀಯ ಪ್ರಚಾರಕ್ಕೆ ಬಳಸಿಕೊಳ್ಳಲಾಗಿದೆ ಹೋಗುವುದಿಲ್ಲ. ನನಗೆ ಪ್ರತಿಸ್ಪರ್ಧಿಯಾದ ಸಂದೇಶ್ ಸ್ವಾಮಿ ಅವರೊಟ್ಟಿಗೆ ಮಾತನಾಡಿದಾಗಲೂ ಸದರಿ ಜಾಗ ಅಭಿವೃದ್ಧಿಯಾಗಬೇಕೆಂದು ಅವರೇ ಹೇಳಿದ್ದಾರೆ. ಹೀಗಿರುವಾಗ ಜನರನ್ನು ತಪ್ಪು ದಾರಿಗೆ ಎಳೆಯುವುದು ಬೇಡ, ಅಭಿವೃದ್ಧಿಯ ದೃಷ್ಟಿಕೋನದಿಂದ ಕೆಲಸ ಮಾಡಿದ್ದೇವೆ. ಜನರನ್ನು ಎತ್ತಿಕಟ್ಟುವ ಹಾಗೂ ದಾರಿ ತಪ್ಪಿಸುವ ಮಂದಿಗೆ ಏನಾದರೂ ಸಮಸ್ಯೆ ಇದ್ದರೆ ನನ್ನೊಟ್ಟಿಗೆ ಚರ್ಚೆ ಮಾಡಿ, ನಿಮಗೆ ದಾಖಲೆ ಸಮೇತ ಉತ್ತರ ಕೊಡುತ್ತೇನೆ ಎಂದು ಸವಾಲು ಹಾಕಿದರು. ಈ ಸಂದರ್ಭದಲ್ಲಿ ನರಸಿಂಹರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ಸಯ್ಯದ್ ಇಕ್ಬಾಲ್, ಸೈನ್ ಶಾ ಮಹಮ್ಮದ್, ಶಫ್ರಸ್ ಖಾನ್, ಘೋಷ್ ಬಾಬು ಸೇರಿದಂತೆ ಇತರರು ಸೇರಿವೆ.

# ಪ್ರಕಾಶ್ ರೈರಿಂದ ಒಕ್ಕಲಿಗ ಸಮುದಾಯಕ್ಕೆ ಅವಮಾನ:

▶▶ ಅರುಣಕುಮಾರ್ ಕಿಡಿ



ಮೈಸೂರು: ನಗರದಲ್ಲಿ ನಡೆದ ಎಸ್ಐಆರ್ ಕುರಿತ ಕಾರ್ಯಕ್ರಮವೊಂದರಲ್ಲಿ ಬಹುಭಾಷಾ ನಟ ಪ್ರಕಾಶ್ ರೈ ಎಸ್ಐಆರ್‌ನಲ್ಲಿ ಹಲವರ ಮತ ಡಿಲೀಟ್ ಮಾಡಲಾಗಿದೆ ಎಂದು ಹೇಳುವ ವೇಳೆ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಎಂಬ ಉರಿಗೌಡ, ನಂಜೇಗೌಡ ಎಂಬುವವರು 13 ಕೋಟಿ ಮತದಾರರ ಕಗ್ಗೊಲೆ ಮಾಡಿದ್ದಾರೆ ಎನ್ನುವ ಮೂಲಕ ಒಕ್ಕಲಿಗ ಸಮುದಾಯವನ್ನು ಅಪಮಾನಿಸಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘ- ರೈತ ಪರ್ವದ ರಾಜ್ಯಾಧ್ಯಕ್ಷ ಅರುಣ್‌ಕುಮಾರ್ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ರಕಾಶ್ ರೈ ಮಾತನಾಡುವಾಗ ಒಕ್ಕಲಿಗ ಸಮುದಾಯದ ಇಬ್ಬರು ವೀರರನ್ನು ಎಳೆದು ತಂದಿರುವುದು ಸರಿಯಲ್ಲ. ಹೀಗಾಗಿ ಅವರು ಸಮುದಾಯದ ಕ್ಷಮೆ ಯಾಚಿಸಬೇಕು. ಇಲ್ಲದಿದ್ದಲ್ಲಿ ಅವರು ಬಂದಲ್ಲೆಲ್ಲ ಕಪ್ಪು ಮಸಿ ಬಳಿಯಲಾಗುವುದು. ಜೊತೆಗೆ ಕೂಡಲೇ ಅವರನ್ನು ಬಂಧಿಸಬೇಕು. ಇನ್ನು, ಈ ಕುರಿತು ತಜ್ಞರ ಅಭಿಪ್ರಾಯ ಪಡೆದು ಕಾನೂನು ಹೋರಾಟ ನಡೆಸಲಾಗುವುದೆಂದರು. ರಘುಗೌಡ, ರವಿಕುಮಾರ್ ಗೌಡ, ಸುಶೀಲಮ್ಮ, ಪುಟ್ಟರಾಜು, ಶಂಕರ್ ಇದ್ದರು.

# ಅ.4ರಂದು ನುಲಿಯ ಚಂದಯ್ಯ ಜಯಂತಿ

ಮೈಸೂರು: ಶರಣ ನುಲಿಯ ಚಂದಯ್ಯ ಜಯಂತಿ ಆಚರಣಾ ಸಮಿತಿ ವತಿಯಿಂದ ಜಿಲ್ಲಾಡಳಿತ ಹಾಗೂ ಪಾಲಿಕೆ ಸಹಯೋಗದೊಡನೆ ಅ.4ರಂದು ಬೆಳಗ್ಗೆ 11ಕ್ಕೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಟಿ. ಶೇಷಾದ್ರಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು, ಮಾಜಿ ಸಿಎಂ ಸಿದ್ದರಾಮಯ್ಯ ಗೌರವ ಉಪಸ್ಥಿತಿ ಇರಲಿದೆ. ಸಿ. ಅನಿಲ್‌ಕುಮಾರ್, ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಇನ್ನಿತರರು ವೇದಿಕೆಯಲ್ಲಿರುವರು. ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರೆಂದರು.

ಈ ವೇಳೆ ಕಳೆದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದೆಂದರು. ನಳರಾಜ್, ಪ್ರೊ. ಜಯರಾಜ್, ನಾಗರಾಜ್ ಎಚ್.ಡಿ. ಕೋಟೆ, ಗೋಕುಲ್ ಮೊದಲಾದವರು ಇದ್ದರು.

# ಅ.12ರಿಂದ ಐದು ದಿನಗಳ ಉಚಿತ ಕಾರ್ಯಾಗಾರ

ಮೈಸೂರು: ಪರಮಹಂಸ ಗರ್ಭ ಸಂಸ್ಕಾರ, ಪರಮಹಂಸ ಓಗ ಮಹಾ ವಿದ್ಯಾಲಯ ಮೊದಲಾದವುಗಳ ಸಂಯುಕ್ತಾಶ್ರಯದಲ್ಲಿ ಅ. 12 ರಿಂದ 16 ರವರೆಗೆ ನಗರದ ರಾಮಕೃಷ್ಣ ನಗರದಲ್ಲಿನ ಯೋಗ ಮಹಾ ವಿದ್ಯಾಲಯದಲ್ಲಿ ಭಾರತೀಯ ಗರ್ಭ ಸಂಸ್ಕಾರ ಕುರಿತ ಐದು ದಿನಗಳ ಉಚಿತ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಶಿವಪ್ರಕಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಿತ್ಯ ಸಂಜೆ 5.30 ರಿಂದ 7.30 ರವರೆಗೆ ಕಾರ್ಯಾಗಾರ ನಡೆಯಲಿದೆ. ತಾಯಿ ಮತ್ತು ಮಗುವಿನ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಗರ್ಭಸಂಸ್ಕಾರ ನೆರವಾಗಲಿದೆ. ಗರ್ಭದಲ್ಲಿರುವಾಗಲೇ ಶಿಶುವಿನೊಂದಿಗೆ ಪೋಷಕರ ಬಾಂಧವ್ಯ ಬಲಗೊಳ್ಳುತ್ತದೆ. ಗರ್ಭಧಾರಣಾ ಆರೈಕೆ ಸುಗಮವಾಗಿರಲಿದೆ. ಹೀಗಾಗಿ ಆಸಕ್ತರು ಅ. 8 ರ ಮುನ್ನ ದೂ. 95382 05222 ಕ್ಕೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದೆಂದರು. ಗೀತಾ, ಡಾ. ಶ್ರುತಿ ಹೆಗಡೆ, ಸಿದ್ಧಲಿಂಗಸ್ವಾಮಿ, ಯೋಗ ಪ್ರಕಾಶ್, ಪಶುಪತಿ, ಲಕ್ಷ್ಮಿ ಇದ್ದರು.



# ರೈತರಿಂದ ಮನವಿ, ಅಹವಾಲು ಸ್ವೀಕಾರ

## ಬಿಡದಿ ಸಮಗ್ರ ನಗರ ಯೋಜನೆ ಪರಿಶೀಲನಾ ಸಮಿತಿ ಅಧ್ಯಕ್ಷರು



**ರಾಮನಗರ:** ಬಿಡದಿ ಹೋಬಳಿಯಲ್ಲಿ ಸರ್ಕಾರ ಉದ್ದೇಶಿಸಿರುವ ಸಮಗ್ರ ನಗರ ಯೋಜನೆ ವಿಚಾರದಲ್ಲಿ ಭೂಸ್ವಾಧೀನಕ್ಕೆ ಪರ ಮತ್ತು ವಿರೋಧ ವ್ಯಕ್ತವಾಗುತ್ತಿದೆ. ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸಿ ಬೈರಮಂಗಲ ಗ್ರಾಮದಲ್ಲಿ ನಿರಂತರ ಪ್ರತಿಭಟನೆ ನಡೆಯುತ್ತಿದೆ. ಸರ್ಕಾರ ಸಮಗ್ರ ನಗರ ಯೋಜನೆಯ ಪರಿಶೀಲನೆ ನಡೆಸಲು ಸರ್ಕಾರ ಸಮಿತಿಯನ್ನು ರಚಿಸಿದೆ. ಸಮಿತಿಯ ಅಧ್ಯಕ್ಷರಾಗಿ ಹೈಕೋರ್ಟ್‌ನ ವಿಶ್ರಾಂತ ನ್ಯಾಯಧೀಶರಾದ ನ್ಯಾ. ಗುಹನಾಥನ್ ನರೇಂದರ್ ನೇಮಕವಾಗಿದ್ದು. ಬುಧವಾರ ನಗರಕ್ಕೆ ಭೇಟಿ ಕೊಟ್ಟಿ ಭೂಮಾಲೀಕರಿಂದ ಅಹವಾಲು ಸ್ವೀಕರಿಸಿದರು.

ನಗರದಲ್ಲಿರುವ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಸಮಿತಿಯ ಅಧ್ಯಕ್ಷರಾದ ವಿಶ್ರಾಂತ ನ್ಯಾಯಮೂರ್ತಿಗಳು ಭೂಮಾಲೀಕರು ಹಾಗೂ ರೈತರ ಮನವಿ ಮತ್ತು ಅಹವಾಲುಗಳನ್ನು ಸ್ವೀಕರಿಸಿದರು.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನಾ ಪರಿಶೀಲನಾ ಸಮಿತಿಯ ಸದಸ್ಯರಾದ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್, ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಹಾಗೂ ಸದಸ್ಯ ಕಾರ್ಯದರ್ಶಿ ಹಿರಿಯ ಐ.ಎಸ್.ಎಸ್ ಅಧಿಕಾರಿ ಪ್ರಸನ್ನ ಕುಮಾರ್ ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವ ಭೂಮಾಲೀಕರು ಹಾಗೂ ರೈತರು ಮನವಿ ಸಲ್ಲಿಸಿದರು.

**ಕೊಚ್ಚಿಹೋದ ರಸ್ತೆಗಳು, ಸಂಚಾರ ಅಸ್ತವ್ಯಸ್ತ**

# ಚಾಮರಾಜನಗರದ ಹಲವೆಡೆ ಜೋರು ಮಳೆ



ಚಾಮರಾಜನಗರ: ಜಿಲ್ಲೆಯ ಬಹುತೇಕ ಕಡೆ ಮಂಗಳವಾರ ಇಡೀ ರಾತ್ರಿ ಜೋರು ಮಳೆಯಾಗಿದೆ. ಜಿಲ್ಲಾಕೇಂದ್ರ, ಹನೂರು ಮತ್ತು ಗುಂಡ್ಲುಪೇಟೆ ತಾಲೂಕು ಸೇರಿದಂತೆ ಹಲವೆಡೆ ಮಳೆಯಾಗಿದೆ.

ಹನೂರು ತಾಲೂಕಿನಾದ್ಯಂತ ಸುರಿದ ಜೋರು ಮಳೆಗೆ ಒಡೆಯರಪಾಳ್ಯ ಮತ್ತು ಲೊಕ್ಕನಹಳ್ಳಿ ರಸ್ತೆ ಕೊಚ್ಚಿಹೋಗಿ ಹಳ್ಳವುಂಟಾಗಿದ್ದು ಸಂಚಾರ ಸಂಪೂರ್ಣ ಬಂದ್ದಾಗಿದೆ. ಕೌದಳ್ಳಿ ಬಳಿ ಸೇತುವೆ ಹಾನಿಗೀಡಾಗಿ ಭಾರೀ ವಾಹನಗಳ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿದೆ. ವೈಶಂಪಾಳ್ಯ, ಕಾಂಚಳ್ಳಿ, ಅಜ್ಜೀಪುರ ಗ್ರಾಮಗಳಲ್ಲಿ ಮನೆಗಳಿಗೆ ನೀರು ನುಗ್ಗಿ ಆಹಾರ ಪದಾರ್ಥಗಳು, ಎಲೆಕ್ಟ್ರಾನಿಕ್ ವಸ್ತುಗಳು ಹಾನಿಗೀಡಾಗಿದೆ.

ಲೊಕ್ಕನಹಳ್ಳಿ ಮತ್ತು ಒಡೆಯರಪಾಳ್ಯದ ನಡುವಿನ ರಸ್ತೆ ಜೋರು ಮಳೆಗೆ ಕೊಚ್ಚಿಹೋಗಿದೆ. ರಸ್ತೆ ಮಧ್ಯೆ ಹಳ್ಳ ಉಂಟಾಗಿ ನೀರು ಹರಿಯುತ್ತಿರುವುದರಿಂದ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಪರ್ಯಾಯ ಮಾರ್ಗದಲ್ಲಿ ವಾಹನ ಸವಾರರು ಸಂಚರಿಸಲು ಪರದಾಡುತ್ತಿದ್ದಾರೆ. ನೀರಿನ ಹರಿವು ಕಡಿಮೆಯಾದ ಬಳಿಕ ಹಳ್ಳಕ್ಕೆ ಮಣ್ಣು ಸುರಿದು ರಸ್ತೆ ಸರಿಪಡಿಸಬೇಕಿದೆ.

ಕೌದಳ್ಳಿ ಬಳಿಯ 40 ವರ್ಷ ಹಳೆಯದಾದ ಸೇತುವೆ ಭಾರಿ ಮಳೆಗೆ ಭಾಗಶಃ ಹಾನಿಗೀಡಾಗಿದ್ದು, ಲಾರಿ ಸಿಲುಕಿ ವಾಹನ ಸವಾರರು ಪರದಾಡಿದರು. ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುವ ರಸ್ತೆ ಇದಾಗಿದ್ದು, ಭಕ್ತರು ಕೂಡ ಪರದಾಡಿಸದರು. ಭಾರಿ ವಾಹನಗಳ ಸಂಚಾರಕ್ಕೆ ಈ ಮಾರ್ಗದಲ್ಲಿ ಅಡಚಣೆ ಉಂಟಾಗಿದೆ. ಹನೂರು ಪಟ್ಟಣದ ಪಡಿಯಚ್ಚು ಗೌಂಡರ್ ಬೀದಿಯಲ್ಲಿ ನಿರ್ಮಿಸಿದ್ದ ಸಣ್ಣ ಗಣಪತಿ ಗುಡಿ ಕೂಡ ಮಳೆಗೆ ಕೊಚ್ಚಿಹೋಗಿದೆ.

**ಮಳೆಗೆ ನೆಲಕಚ್ಚಿದ ಬಾಳೆ:** ಗುಂಡ್ಲುಪೇಟೆ ತಾಲೂಕಿನ ಬೊಮ್ಮಲಾಪುರ, ಬಾಚಹಳ್ಳಿ, ಶಿವಪುರ, ಬೇಗೂರು ಭಾಗದಲ್ಲಿ ಉತ್ತಮ ಮಳೆಯಾಗಿದ್ದು, ಬರ ಆವರಿಸಿದ್ದ ಇಳೆ ನಗು ಸೂಸಿದಂತಾಗಿದೆ. ಆದರೆ, ಬಿರುಗಾಳಿಗೆ ಗುಂಡ್ಲುಪೇಟೆ ತಾಲೂಕಿನ ಬೇಗೂರಿನಲ್ಲಿ ಶ್ರೀನಿವಾಸ ಎಂಬವರಿಗೆ ಸೇರಿದ ಒಂದೂವರೆ ಎಕರೆ ಬಾಳೆ ಸಂಪೂರ್ಣ ನೆಲಕಚ್ಚಿದೆ.

ಬಿಸಿಲಿನಿಂದ ತತ್ತರಿಸಿದ್ದ ತಾಲೂಕಿನಲ್ಲಿ ಕಳೆದ ಎರಡು ದಿನಗಳಿಂದ ವರುಣ ಆರ್ಭಟಿಸುತ್ತಿದ್ದು, ಬಹುತೇಕ ಕಡೆ ಜೋರು ಮಳೆಯಾಗಿದೆ. ಜೊತೆಗೆ, ಬಿರುಗಾಳಿಯಿಂದ ಬಾಳೆಕಟ್ಟೆ ನೆಲಕಚ್ಚಿ ರೈತರಿಗೆ ನಷ್ಟ ಉಂಟು ಮಾಡಿದೆ.

ಸಾಲ ಮಾಡಿ ಬಾಳೆ ಫಸಲು ಬೆಳೆದಿದ್ದೆವು. ಇನ್ನೇನು ಬೆಳೆ ಕೈಗೆ ಬರಬೇಕಿತ್ತು. ಅಷ್ಟರಲ್ಲೇ ಪ್ರಕೃತಿ ಮುನಿದು ಎಲ್ಲವನ್ನೂ ಮಣ್ಣುಪಾಲು ಮಾಡಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. 4 ಲಕ್ಷದಷ್ಟು ಆದಾಯ ನಿರೀಕ್ಷೆ ಮಾಡಿದ್ದೆವು ಎಂದು ರೈತ ಶ್ರೀನಿವಾಸ್ ಬೇಸರ ತೋಡಿಕೊಂಡಿದ್ದಾರೆ.

# ಬೆಂಬಲಿಗರಿಗೆ ಭೂ ಅಕ್ರಮ ಮಂಜೂರಾತಿ ಆರೋಪ

## ತನಿಖೆಗೆ ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಆಗ್ರಹ



ಮಂಡ್ಯ: ಮಾಜಿ ಶಾಸಕ ಸುರೇಶ್‌ಗೌಡ ಅವರು ತಮ್ಮ ಬೆಂಬಲಿಗರು ಮತ್ತು ಅನುಯಾಯಿಗಳಿಗೆ ಅಕ್ರಮವಾಗಿ ಸುಮಾರು 200 ರಿಂದ 300 ಎಕರೆ ಜಮೀನನ್ನು ಮಂಜೂರಾತಿ ಮಾಡಿಸಿದ್ದಾರೆ ಎಂದು ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 2018–19 ರಿಂದ 2022–23ರ ಅವಧಿಯಲ್ಲಿ ಒಟ್ಟು 694 ಅರ್ಜಿಗಳಿಗೆ ಸಂಬಂಧಿಸಿದಂತೆ ಸುಮಾರು 1000 ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದ್ದು ಅದರಲ್ಲಿ 203 ಅರ್ಜಿಗಳನ್ನು ಸಹಾಯಕ ಕಮಿಷನರ್ ಅವರು ವಜಾಗೊಳಿಸಿದ್ದಾರೆ ಎಂದು ಅವರು ತಿಳಿಸಿದರು. ಯಾವುದೇ ಸಮಿತಿ ಸಭೆ ನಡೆಸದೆ ಅಕ್ರಮವಾಗಿ ಮಂಜೂರು ಮಾಡಿದ್ದ 51 ಅರ್ಜಿಗಳನ್ನು ಸಂಪೂರ್ಣವಾಗಿ ರದ್ದುಪಡಿಸಲಾಗಿದೆ ಎಂದು ಅವರು ಹೇಳಿದರು. ಸಮಿತಿಯಿಂದ ಹಿಂಪಡೆಯಲಾದ ಪ್ರಸ್ತಾವನೆಗಳು 152 ಆಗಿದ್ದು ಮರುಪರಿಶೀಲನೆಗೆ ಇನ್ನು 231 ಅರ್ಜಿಗಳು ಬಾಕಿ ಇವೆ ಎಂದು ಅವರು ಮಾಹಿತಿ ನೀಡಿದರು. ಅರ್ಹ ಫಲಾನುಭವಿಗಳಿಗೆ ಮತ್ತು ನಿಜವಾದ ರೈತರಿಗೆ ಜಮೀನು ಮಂಜೂರಾಗದೆ ಅನ್ಯಾಯವಾಗಿದೆ ಎಂದು ಅವರು ದೂರಿದರು. ಈ ನೇರ ಅಕ್ರಮದ ಕುರಿತು ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಯಿಂದ ಸೂಕ್ತ ತನಿಖೆಯಾಗಬೇಕು ಎಂದು ಅವರು ಒತ್ತಾಯಿಸಿದರು. ತಪ್ಪಿತಸ್ಥ ಅಧಿಕಾರಿಗಳು ಹಾಗೂ ಭಾಗಿಯಾದವರ ವಿರುದ್ಧ ಪ್ರಕರಣ ದಾಖಲಿಸಿ ಜೈಲಿಗಟ್ಟಬೇಕು ಎಂದು ಸರ್ಕಾರಕ್ಕೆ ಅವರು ಆಗ್ರಹಿಸಿದರು.

ಬಗರುಕುಂ ಸಮಿತಿ ಮಾಜಿ ಸದಸ್ಯ ತಿಮ್ಮರಾಯಿಗೌಡ ಮಾತನಾಡಿ ಯಾವುದೇ ರೈತರಿಗೆ ಮಂಜೂರು ಮಾಡುವ ಜಮೀನು 4 ಎಕರೆ 38 ಗುಂಟೆಗೆ ಮೀರಬಾರದು ಎಂಬ ನಿಯಮವಿದ್ದರೂ ನಿಯಮ ಮೀರಿ ಹೆಚ್ಚಿನ ಜಮೀನು ಮಂಜೂರು ಮಾಡಲಾಗಿದೆ ಎಂದು ಅವರು ತಿಳಿಸಿದರು. ಫಾರಂ ನಂ.50ರ ಪ್ರಕಾರ 19–09–1991 ರೊಳಗೆ ಅರ್ಜಿ ಸಲ್ಲಿಸಿರಬೇಕು ಎಂಬ ನಿಯಮವನ್ನು ಉಲ್ಲಂಘಿಸಲಾಗಿದೆ ಎಂದು ಅವರು ಹೇಳಿದರು. ಟೌನ್ ಪಂಚಾಯಿತಿ ವ್ಯಾಪ್ತಿ, ಅರಣ್ಯ ಭೂಮಿ ಹಾಗೂ ಪ್ರಾಣಿ ಸಂರಕ್ಷಿತ ಪ್ರದೇಶಗಳಿಗೆ ಸೇರಿದ ಜಮೀನುಗಳನ್ನು ಸಹ ನಿಯಮಬಾಹಿರವಾಗಿ ಮಂಜೂರು ಮಾಡಲಾಗಿದೆ ಎಂದು ಅವರು ದೂರಿದರು. ಗೋಷ್ಠಿಯಲ್ಲಿ ಮುಖಂಡರಾದ ಪ್ರವೀಣ್‌ಕುಮಾರ್, ಶರತ್,ವಿಜಯ ಕುಮಾರ್, ಕೃಷ್ಣೇಗೌಡ ಹಾಜರಿದ್ದರು.

# ಅಧಿಕಾರಿಗಳ ಸನ್ಮಾನಿಸಿದ ಗ್ರಾಮಸ್ಥರು



ಎಚ್.ಡಿ.ಕೋಟೆ: ಸಮೀಪದ ಸವ್ವೆ ಗ್ರಾಮದ ಅಗಸಗಿತ್ತಿ ಕೆರೆ, ಕೆಬ್ಬೆಕಟ್ಟೆಕೆರೆ, ಸವ್ವೆಕೆರೆ ಹಾಗೂ ಗೂಳಿಕಟ್ಟೆ ಕೆರೆಗಳಿಗೆ ತಾರಕ ಜಲಾಶಯದಿಂದ ನೀರು ತುಂಬಿಸಿದ ನೀರಾವರಿ ಇಲಾಖೆ ಅಧಿಕಾರಿಗಳನ್ನು ಗ್ರಾಮಸ್ಥರು ಸನ್ಮಾನಿಸಿದರು.

ಕೆರೆಗೆ ನೀರು ಹರಿಸಿ, ವೀಕ್ಷಣೆಗೆ ಬಂದ ನೀರಾವರಿ ಇಲಾಖೆ ಅಧಿಕಾರಿಗಳಾದ ಕಾರ್ಯಪಾಲಕ ಅಭಿಯಂತರ ರಂಗಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರ ನಟಶೇಖರ್, ಸಹಾಯಕ ಅಭಿಯಂತರೆ ಗೌಸಿಯಾ ತಾಜ್, ಅಧೀಕ್ಷಕ ರಘುಪತಿ, ಸಹಾಯಕರಾದ ಸೋಮಣ್ಣ, ಮಂಜುನಾಥ್ ಅವರನ್ನು ಗೂಳಿಕಟ್ಟೆ, ಸವ್ವೆ ಹಾಗೂ ಕೊಡಸೀಗೆ ಗ್ರಾಮಸ್ಥರು ಸನ್ಮಾನಿಸಿದರು. ಈ ವೇಳೆ ಸವ್ವೆ ಕೆರೆಗೆ ಪೂಜೆ ಸಲ್ಲಿಸಿದ ಅಧಿಕಾರಿಗಳು ಬಾಗಿನ ಅರ್ಪಿಸಿದರು.

ಗೂಳಿಕಟ್ಟೆ ಗ್ರಾಮದ ಗ್ರಾ.ಪಂ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಕೃಷ್ಣನಾಯಕ ಮಾತನಾಡಿ, ಪ್ರಸಕ್ತ ವರ್ಷದಲ್ಲಿ ಎಲ್ ನಿನೋ ಪರಿಣಾಮದಿಂದ ಮುಂಗಾರು ಮುಗಿಯುವ ಮುನ್ನವೇ ರಾಜ್ಯದಲ್ಲಿ ಬರ ಆವರಿಸಿದೆ. ಮಳೆ ಕೊರತೆ ತೀವ್ರವಾಗಿ ಕಾಡಿದ್ದು, ನೀರಿಲ್ಲದೆ ಜನ, ಜಾನುವಾರುಗಳು ತತ್ತರಿಸಿದ್ದಾರೆ. ಸವ್ವೆ ಭಾಗದಲ್ಲಿ ನೀರಿಲ್ಲದೆ ತೊಂದರೆಯಾಗಿದ್ದ ಬಗ್ಗೆ ಗ್ರಾಮಸ್ಥರು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ತಿಳಿಸಿದ್ದೆವು. ಅವರ ಸೂಚನೆ ಮೇರೆಗೆ ಅಧಿಕಾರಿಗಳು ಇದೀಗ ಕೆರೆಗೆ ನೀರು ತುಂಬಿಸಿದ್ದಾರೆ ಎಂದರು. ಗೂಳಿಕಟ್ಟೆ ಗ್ರಾಮದ ಯಜಮಾನ ಸಿಂಗನಾಯಕ, ಅಣ್ಣೂರು ಸಹಕಾರ ಸಂಘದ ಸದಸ್ಯ ಸೋಮೇಗೌಡ, ಚಿಕ್ಕರಂಗ, ಸವ್ವೆ ಗ್ರಾಮದ ಯಜಮಾನ ಮಂಜನಾಯಕ, ಗ್ರಾ.ಪಂ ಮಾಜಿ ಸದಸ್ಯರಾದ ಚನ್ನನಾಯಕ, ನಾಗನಾಯಕ, ಕೊಡಸೀಗೆ ಗ್ರಾಮದ ನಂಜುಂಡಸ್ವಾಮಿ, ಕುಮಾರ, ಕೆಂಪೇಗೌಡ, ನಂಜಪ್ಪ ಗ್ರಾ.ಪಂ ಸದಸ್ಯೆ ಲೀಲಾ ಅಶೋಕ್, ಗಾಯಿತ್ರಿಮೋಟಮ್ಮ ಇದ್ದರು.

# ವಿಜೇತ ವಿದ್ಯಾರ್ಥಿಗಳ ಆಯ್ಕೆ

ಮಂಡ್ಯ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಮಂಡ್ಯ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಪ್ರೌಢಶಾಲಾ ವಿಭಾಗದಲ್ಲಿ:** ಮಳವಳ್ಳಿ ತಾಲ್ಲೂಕಿನ ಮಾರಗೌಡನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಸಿಂಚನಾ ಬಿ.ಎಸ್. ಪ್ರಥಮ, ಶ್ರೀರಂಗಪಟ್ಟಣ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪವಿತ್ರ ಎನ್. ದ್ವಿತೀಯ ಹಾಗೂ ಮದ್ದೂರು ತಾಲ್ಲೂಕಿನ ಮಾಡೇನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಲಲಿತಾ ಎಂ. ತೃತೀಯ ಬಹುಮಾನ ಪಡೆದಿರುತ್ತಾರೆ.

ಪದವಿ ಪೂರ್ವ ಶಿಕ್ಷಣ ವಿಭಾಗದಲ್ಲಿ ಮಂಡ್ಯ ತಾಲ್ಲೂಕಿನ (ಮಾಜಿ ಪುರಸಭೆ) ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೇಘನಾ ಪ್ರಥಮ, ಮಂಡ್ಯ ಕಲ್ಲುಕಟ್ಟಡ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪುಣ್ಯಶ್ರೀ ದ್ವಿತೀಯ ಹಾಗೂ ಕೆ.ಆರ್.ಪೇಟೆ ತಾಲ್ಲೂಕಿನ ಹರಿಹರಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನವ್ಯ ತೃತೀಯ ಬಹುಮಾನಕ್ಕೆ ಆಯ್ಕೆಯಾಗಿರುತ್ತಾರೆ. ಪದವಿ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಮಂಡ್ಯ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ)ದ ಹುಸ್ನಾ ಬಾನು ಪ್ರಥಮ, ಮಾಂಡವ್ಯ ಪ್ರಥಮ ದರ್ಜೆ ಕಾಲೇಜಿನ ಮಂಗಳ ಗೌರಮ್ಮ ದ್ವಿತೀಯ ಹಾಗೂ ನಾಗಮಂಗಲ ತಾಲ್ಲೂಕಿನ ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮಹಾಲಕ್ಷ್ಮಿ ಎಂ.ಬಿ. ತೃತೀಯ ಬಹುಮಾನ ಪಡೆದು ಕೊಂಡಿರುತ್ತಾರೆ.

ಬಾಪೂಜಿಯವರ ಜೀವನ, ಆದರ್ಶಗಳು ಹಾಗೂ ಸಮಾಜಮುಖಿ ಚಿಂತನೆಗಳನ್ನು ವಿದ್ಯಾರ್ಥಿಗಳಲ್ಲಿ ಪರಿಚಯಿಸುವುದು ಮತ್ತು ಅವರಲ್ಲಿ ಸೃಜನಾತ್ಮಕ ಬರವಣಿಗೆ ಹಾಗೂ ಸಾಮಾಜಿಕ ಜವಾಬ್ದಾರಿಯ ಮನೋಭಾವ ಬೆಳೆಸುವ ಉದ್ದೇಶದಿಂದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# 3ರಂದು 'ಪ್ರಜಾ ಸೇವೆ ಆಂದೋಲನ'

ಶ್ರೀರಂಗಪಟ್ಟಣ: ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 03 ರಂದು ಬೆಳಿಗ್ಗೆ 11 ಗಂಟೆಗೆ ಮಂಡ್ಯ ತಾಲ್ಲೂಕಿನ ಕೊತ್ತತ್ತಿ–2ನೇ ಹೋಬಳಿಯ ತಗ್ಗಹಳ್ಳಿ ಗ್ರಾಮದ ಶ್ರೀ ಕಾಳಿಕಾಂಭ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ 'ಪ್ರಜಾ ಸೇವೆ ಆಂದೋಲನ ಕಾರ್ಯಕ್ರಮ'ವನ್ನು ಹಮ್ಮಿಕೊಳ್ಳಲಾಗಿದೆ. ಮಂಡ್ಯ ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಅವುಗಳಿಗೆ ಸೂಕ್ತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ತಮ್ಮ ವೈಯಕ್ತಿಕ ಹಾಗೂ ಸಾರ್ವಜನಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮನವಿ ಸಲ್ಲಿಸಬಹುದಾಗಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳು ಹಾಗೂ ಪೂರಕ ದಾಖಲೆಗಳೊಂದಿಗೆ ಸಾರ್ವಜನಿಕರು ಕಾರ್ಯಕ್ರಮಕ್ಕೆ ಹಾಜರಾಗಿ ಶಾಸಕರಿಗೆ ಮನವಿ ಸಲ್ಲಿಸಬಹುದು.

# ಅ.13ರಿಂದ ದಸರಾ ಕವಿಗೋಷ್ಠಿ

## ಹಿರಿಯ ಲೇಖಕಿ ವೈದೇಹಿಯವರಿಂದ ಉದ್ಘಾಟನೆ । ಐದು ದಿನಗಳ ಸಾಹಿತ್ಯ ಹಬ್ಬ

ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಪ್ರತಿ ವರ್ಷ ಈ ಬಾರಿಯೂ ದಸರಾ ಕವಿಗೋಷ್ಠಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು ನಡೆಯುತ್ತಿರುವ. ನಾಡಹಬ್ಬ ದಸರಾಗೆ ಸಾಹಿತ್ಯದ ಮೆರುಗು ನೀಡುವ ಉದ್ದೇಶದಿಂದ ಈ ಬಾರಿಯ ಕವಿಗೋಷ್ಠಿಯು ಅಕ್ಟೋಬರ್ 13 ರಿಂದ 17 ರ ವರೆಗೆ ನಡೆಯಲಿದೆ ಎಂದು ದಸರಾ ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆಯೋಜಿಸಲಾಗಿದೆ.

ಕವಿಗೋಷ್ಠಿಯು ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ. ಈ ಬಾರಿಯ ಚುಟುಕು–ಹಾಸ್ಯ ಕವಿಗೋಷ್ಠಿ, ಚಿಗುರು ಕವಿಗೋಷ್ಠಿ, ಯುವ ಕವಿಗೋಷ್ಠಿ, ಜನಪದ ಕಾವ್ಯಗೋಷ್ಠಿ ಹಾಗೂ ಪ್ರಧಾನ ಕವಿಗೋಷ್ಠಿ ಎಂದು ಒಟ್ಟು ಐದು ಬಗೆಯ ಗೋಷ್ಠಿಗಳು ಇರಲಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

**ಎ. 15 ಮತ್ತು 16ರ ಕಾರ್ಯಕ್ರಮಗಳು: ಚಿಗುರು ಹಾಗೂ ಜನಪದ ಕಾವ್ಯಗೋಷ್ಠಿ**

ಅಕ್ಟೋಬರ್ 15 ರಂದು ಬೆಳಿಗ್ಗೆ 10.30ಕ್ಕೆ ಉದಯೋನ್ಮುಖ ಬರಹಗಾರರನ್ನು ಪರಿಚಯಿಸುವ ಚಿಗುರು ಕವಿಗೋಷ್ಠಿಯನ್ನು ಮಕ್ಕಳ ಸಾಹಿತಿ ಕೃಷ್ಣಮೂರ್ತಿ ಬಿಳಿಗೆರೆ ಉದ್ಘಾಟಿಸಲಿದ್ದಾರೆ. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ವಹಿಸಿದ್ದಾರೆ, ಲೇಖಕಿ ಡಾ.ಕವಿತಾ ಕುಸುಗಲ್ ಮುಖ್ಯ ಅತಿಥಿಗಳಾಗಿರುತ್ತಾರೆ. ಚಿಗುರು ಕವಿ ತಾನಿಷ್ ವಿಶೇಷವಾಗಿ ಚಿಗುರು ಅತಿಥಿಯಾಗಿ ಭಾಗವಹಿಸಲಿದ್ದಾರೆ. ಜನಪದ ಕಾವ್ಯಗೋಷ್ಠಿಯು ಅಕ್ಟೋಬರ್ 16ರಂದು ನಡೆಯಲಿದೆ, ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ ಉದ್ಘಾಟಿಸಲಿ ದ್ದಾರೆ. ಇದರ ಅಧ್ಯಕ್ಷತೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ. ಪುರುಷೋತ್ತಮ ಬಿಳಿಮಲೆ ವಹಿಸಲಿದ್ದಾರೆ, ಸಾಹಿತಿ ಡಾ. ರಾಜಪ್ಪ ದಳವಾಯಿ ಮುಖ್ಯ ಅತಿಥಿಗಳಾಗಿರುತ್ತಾರೆ.

ಪ್ರಧಾನ ಕವಿಗೋಷ್ಠಿಯು ಅಕ್ಟೋಬರ್ 17ರಂದು ಬೆಳಿಗ್ಗೆ 10.30 ಗಂಟೆಗೆ ನಡೆಯಲಿದೆ, ಹಿರಿಯ ಕವಯಿತ್ರಿ ಡಾ.ಪ್ರತಿಭಾ ನಂದಕುಮಾರ್ ಅವರು ಉದ್ಘಾಟಿಸಲಿದ್ದಾರೆ. ಹಿರಿಯ ಕವಿ ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆ ವಹಿಸಿದ್ದರು, ಹಿರಿಯ ಕವಿ ಸುಬ್ಬು ಹೊಳೆಯಾರ್ ಗೋಷ್ಠಿಯ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಇದೇ ಸಂದರ್ಭದಲ್ಲಿ ಕವಿಗೋಷ್ಠಿಯ ಭಿತ್ತಿಪತ್ರ ಹಾಗೂ ಆಶಯಗೀತೆಯನ್ನು ಬಿಡುಗಡೆಗೊಳಿಸಲಾಯಿತು. ಪತ್ರಿಕಾಗೋಷ್ಠಿಯಲ್ಲಿ ಕವಿಗೋಷ್ಠಿ ಉಪಸಮಿತಿಯ ಸಮನ್ವಯಾಧಿಕಾರಿಗಳಾದ ಪ್ರೊ. ತ್ರಿವೇಣಿ, ಡಾ. ಉಮೇಶ ಬೇವಿನಹಳ್ಳಿ, ಕಾರ್ಯದರ್ಶಿ ಆನಂದ್ ಹಾಗೂ ಆಶಯಗೀತೆ ಹಾಡಿದ ದಿವ್ಯಾ ಸಚ್ಚಿದಾನಂದ ಅವರು ಹಾಜರಿದ್ದರು



ದಸರಾ ಕವಿಗೋಷ್ಠಿ ಭಿತ್ತಿಪತ್ರವನ್ನು ಮೈಸೂರಿನ ಮಹಾನಗರ ಪಾಲಿಕೆಯಲ್ಲಿ ಬುಧವಾರ ಬಿಡುಗಡೆಗೊಳಿಸಲಾಯಿತು. ನಿರ್ಮಲಾ, ಡಾ.ಉಮೇಶ ಬೇವಿನಹಳ್ಳಿ, ಆನಂದ್, ಡಾ.ಎಂ.ದಾಸೇಗೌಡ, ಪ್ರೊ.ನಂಜಯ್ಯ ಹೊಂಗನೂರು, ಡಾ.ತ್ರಿವೇಣಿ ಹಾಗೂ ದಿವ್ಯಾ ಸಚ್ಚಿದಾನಂದ ಇದ್ದಾರೆ.

## ಎ.13 ಮತ್ತು 14ರ ಕಾರ್ಯಕ್ರಮಗಳು: ಹಾಸ್ಯ–ಚುಟುಕು ಹಾಗೂ ಯುವ ಕವಿಗೋಷ್ಠಿ

ಕವಿಗೋಷ್ಠಿಯನ್ನು ಅಕ್ಟೋಬರ್ 13 ರಂದು ಬೆಳಿಗ್ಗೆ 10.30 ಗಂಟೆಗೆ ಹಿರಿಯ ಲೇಖಕಿ ವೈದೇಹಿ ಅವರು ಉದ್ಘಾಟಿಸಲಿದ್ದಾರೆ. ಅಂದೇ ಮೊದಲ ಗೋಷ್ಠಿಯಾದ ಹಾಸ್ಯ ಮತ್ತು ಚುಟುಕು ಕವಿಗೋಷ್ಠಿ ನಡೆಯಲಿದೆ, ಇದರ ಅಧ್ಯಕ್ಷತೆಯನ್ನು ಚಲನಚಿತ್ರ ನಟ ಡಾ. ಮುಖ್ಯಮಂತ್ರಿ ಚಂದ್ರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲೇಖಕಿ ಡಾ. ಎಚ್.ಆರ್. ಸುಜಾತ ಭಾಗವಹಿಸುವವರು. ಅಕ್ಟೋಬರ್ 14 ರಂದು ಬೆಳಿಗ್ಗೆ 10.30 ಗಂಟೆಗೆ ಯುವ ಕವಿಗೋಷ್ಠಿ ನಡೆಯಲಿದೆ, ಕವಯಿತ್ರಿ ಡಾ.ಕೆ.ಷರೀಫಾ ಉದ್ಘಾಟಿಸಲಿದ್ದಾರೆ. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಹಿರಿಯ ಕವಿ ಎಚ್. ಗೋವಿಂದಯ್ಯ ವಹಿಸಲಿದ್ದಾರೆ, 'ಜಾಜಿ ಮಲ್ಲಿಗೆ ಕವಿ' ಎಂದೆಂದಿಗೂ ಖ್ಯಾತರಾದ ಡಾ. ಸತ್ಯಾನಂದ ಪಾತ್ರೋಟ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಜೊತೆಗೆ, ಕನ್ನಡ ಚಲನಚಿತ್ರ ಗೀತ ಸಾಹಿತಿ ಹೃದಯ ಶಿವ ವಿಶೇಷ ಅತಿಥಿಯಾಗಿ ಈ ಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ.

## ಬಹುರೂಪಿ ಕವಿಗೋಷ್ಠಿ, ಪ್ರಚಾರ ತೇರು

ಈ ಬಾರಿಯ ಕವಿಗೋಷ್ಠಿಯಲ್ಲಿ ಗಾರೆ ಕೆಲಸಗಾರರು, ಪೊಲೀಸ್ ಕಾನ್ಸ್ಟೇಬಲ್, ಸ್ವಾಮೀಜಿ, ಗೃಹಿಣಿ ಹೀಗೆ ನಾಡಿನಾದ್ಯಂತ ವಿವಿಧ ವರ್ಗದ ಹಾಗೂ ವಯೋಮಾನದ ದಸರಾ ಕವಿಗಳು ಭಾಗವಹಿಸುವವರು ಎಂದು ಕವಿಗೋಷ್ಠಿ ಉಪಸಮಿತಿಯ ಉಪವಿಶೇಷಾಧಿಕಾರಿ ಡಾ. ಎಂ ದಾಸೇಗೌಡ ನಡೆಸಿದರು. ಈ ಬಾರಿ ವಿಶೇಷವಾಗಿ 'ಕವಿಗೋಷ್ಠಿ ಪ್ರಚಾರ ತೇರು' ಸುಮಾರು ಹತ್ತು ದಿನ ಮುಂಚಿತವಾಗಿ ಮೈಸೂರಿನಲ್ಲಿ ಸಂಚರಿಸುವ ಕಾರ್ಯಕ್ರಮದ ಮಹತ್ವ ಸಾರಲಿದೆ. ಅಕ್ಟೋಬರ್ 5 ರಂದು ಬೆಳಿಗ್ಗೆ 11 ಗಂಟೆಗೆ ಕುವೆಂಪು ವಿಶ್ವವಿದ್ಯಾನಿಲಯದ ಮುಖ್ಯದ್ವಾರದ ಕುವೆಂಪು ಪ್ರತಿಮೆ ಬಳಿ ಪ್ರಚಾರ ತೇರಿಗೆ ಚಾಲನೆ ನೀಡಲಾಗುವುದು. ಕವಿಗೋಷ್ಠಿ ನಡೆಯುವ ಪುಸ್ತಕ, ಕರಕುಶಲ ಹಾಗೂ ಖಾದಿ ಬಟ್ಟೆಗಳ ವಿವಿಧ ಮಳಿಗೆಗಳಿವೆ. ಕವಿತೆಗೆ ಫೋಟೋ ತೆಗೆಯಲು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎರಡು ಕಡೆ ಸೆಲ್ಫಿ ಸ್ಪಾಟ್ ನಿರ್ಮಿಸಲಾಗಿದೆ. ವಿದೇಶದಲ್ಲಿ ನೆಲೆಸಿರುವ ಕನ್ನಡ ಕವಿಗಳು ವಿಡಿಯೊ ಮಾಡಿ ಕಳುಹಿಸಿದ್ದನ್ನು ಎಲ್‌ಇಡಿ ಪರದೆಯ ಮೂಲಕ ಪ್ರಸಾರ ಮಾಡಲಾಗುವುದು. ಐದೂ ದಿನಗಳ ಗೋಷ್ಠಿಗಳಲ್ಲಿ ಒಟ್ಟು 200ಕ್ಕೂ ಅಧಿಕ ಕವಿಗಳು ಭಾಗವಹಿಸಲಿದ್ದಾರೆ. ಯುವ ಕವಿಗೋಷ್ಠಿಯ ನಂತರ ಕುವೆಂಪು ಅವರ ಹಾಡುಗಳನ್ನು ಆಯೋಜಿಸಿದ ನೃತ್ಯ ಪ್ರದರ್ಶನ ಹಾಗೂ ಚಿಗುರು ಕವಿಗೋಷ್ಠಿಯ ನಂತರ 'ಶ್ರೀರಾಮಾಯಣ ದರ್ಶನಂ' ನಿರ್ಮಾಣದ ಒಂದು ಅಧ್ಯಾಯದ ಕುರಿತಾದ ನಾಟಕ ಪ್ರದರ್ಶನಗೊಳ್ಳಲಿದೆ. ಇದರೊಂದಿಗೆ ಉರ್ದು ಕವಿಗೋಷ್ಠಿಯು ಪ್ರತ್ಯೇಕವಾಗಿ ಆಯ್ಕೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪ್ರಾಯೋಗಿಕ ಪದ್ಧತಿ ಹಾಗೂ ನೂತನ ತಂತ್ರಜ್ಞಾನಗಳ ಅಳವಡಿಕೆಗೆ ಒತ್ತು

# ರೇಷ್ಮೆ ಬೆಳೆಗಾರರು ಕೇವಲ ಬೆಳೆಗಾರರಾಗುಳಿಯದೆ ಉದ್ಯಮಿಗಳಾಗಲಿ: ಡಾ.ಕೆ.ಸಿ.ನಾರಾಯಣಸ್ವಾಮಿ



ಮಂಡ್ಯ: ರೇಷ್ಮೆ ಕೃಷಿಯನ್ನು ಪ್ರಾಯೋಗಿಕವಾಗಿ ಕೈಗೊಂಡಿದೆ, ಉತ್ಪಾದನಾ ವೆಚ್ಚ ಮತ್ತು ಆದಾಯವನ್ನು ಸಮರ್ಪಕವಾಗಿ ನಿರ್ವಹಿಸುತ್ತದೆ ಜೊತೆಗೆ ಆಧುನಿಕ ಮತ್ತು ಆಧುನಿಕ ಆವಿಷ್ಕಾರಗಳನ್ನು ಅಳವಡಿಸಿಕೊಂಡರೆ ರೈತರು ಉತ್ತಮ ಆದಾಯ ಗಳಿಸಬಹುದು ಎಂದು ಕೃಷಿ ವಿಜ್ಞಾನಗಳು ವಿಶ್ವವಿದ್ಯಾಲಯ, ಮಂಡ್ಯದ ಕುಲಪತಿ ಡಾ. ಕೆ.ಸಿ. ನಾರಾಯಣಸ್ವಾಮಿ ಹೇಳಿದರು.

ರೇಷ್ಮೆ ಕೃಷಿಯು ಉತ್ತಮ ಆದಾಯ ನೀಡಬಲ್ಲ ಕೃಷಿ ಚಟುವಟಿಕೆ, ಕಡಿಮೆ ಪ್ರಮಾಣದ ನೀರನ್ನು ಸಮರ್ಪಕವಾಗಿ ಬಳಸುತ್ತದೆ ಮಾಡಿದರೆ ಉತ್ತಮ ಕೃಷಿ ಉತ್ಪಾದನೆ ಹಾಗೂ ಆದಾಯ ಪಡೆಯಬಹುದು. ಬೆಳೆ ವೈವಿಧ್ಯತೆ, ಅಂತರ ಬೆಳೆ ಪದ್ಧತಿ ಮತ್ತು ನೀರಿನ ಸಮರ್ಪಕ ನಿರ್ವಹಣೆಗೆ ಆದ್ಯತೆ. ರೇಷ್ಮೆ ಕೃಷಿಯಲ್ಲಿ ಪ್ರತಿ ತಿಂಗಳು ಆದಾಯ ಗಳಿಸುವ ಅವಕಾಶ, ರೈತರು ಕೇವಲ ರೇಷ್ಮೆ ಬೆಳೆಗಾರರಾಗಿ ಉಳಿಯದೆ ರೇಷ್ಮೆ ಕೃಷಿ ಉದ್ಯಮಿಗಳಾಗಿ ಬೆಳೆಯುವತ್ತ ಗಮನಹರಿಸಬೇಕು. ದೇಶೀಯ ಮತ್ತು ಅಂತರರಾಷ್ಟ್ರೀಯ ರೇಷ್ಮೆಗೆ ಉತ್ತಮ ಬೇಡಿಕೆಯ ಗುಣಮಟ್ಟದ ಉತ್ಪಾದನೆಗೆ ಆದ್ಯತೆ ಎಂದು ಅವರು ಸಲಹೆ ನೀಡಿದರು.

**ಪ್ರಶ್ನೋತ್ತರ, ಸಾಧಕರಿಗೆ ಸನ್ಮಾನ ಹಾಗೂ ಉಪಸ್ಥಿತರಿದ್ದ ಗಣ್ಯರು**

ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಸಹ ವಿಸ್ತರಣ ನಿರ್ದೇಶಕ ಡಾ. ಕೆ.ವಿ. ಶಿವಕುಮಾರ್, ಮದ್ದೂರಿನ ಕೇಂದ್ರ ರೇಷ್ಮೆ ಮಂಡಳಿಯ ಡಾ. ಶಿವಕುಮಾರ್, ರೇಷ್ಮೆ ಕೃಷಿ ಉದ್ಯಮಿ ನವೀನ್ ಸಂಗಾಪುರ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಿದ್ದರು. ರೇಷ್ಮೆ ಕೃಷಿ ತಂತ್ರಜ್ಞಾನ, ಉದ್ಯಮಶೀಲತೆ, ಉತ್ಪಾದನಾ ವಿಧಾನಗಳು ಮತ್ತು ರೈತರಿಗೆ ಇರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು ಮತ್ತು ರೈತರ ಪ್ರಶ್ನೆಗಳಿಗೆ ತಜ್ಞರು ನೇರವಾಗಿ ಉತ್ತರಿಸಿ ತಾಂತ್ರಿಕ ಪರಿಹಾರಗಳನ್ನು ನೀಡಿದರು. ಮಂಡ್ಯದ ಕೆ.ವಿ.ಕೆ. ಹಿರಿಯ ಅಧ್ಯಯನ ಹಾಗೂ ಮುಖ್ಯಸ್ಥ ಡಾ. ಕಮಲಾಬಾಯಿ ಕೂಡಗಿ ಪ್ರಾಸ್ತಾವಿಕ ನುಡಿ ಹಾಗೂ ಸ್ವಾಗತಿಸಿದರು. ಕೃಷಿ ವಿಜ್ಞಾನ ಕೇಂದ್ರದ ಸಹಾಯಕ ಮುಖ್ಯ ತಾಂತ್ರಿಕ ಅಧಿಕಾರಿ ಡಾ. ಮಹೇಶ್ ಹೆಚ್.ಎಂ. ಕಾರ್ಯಕ್ರಮ ನಿರೂಪಿಸಿದರು. ಸರ್ ಎಂ. ವಿಶ್ವೇಶ್ವರಯ್ಯ ರೇಷ್ಮೆ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ಸಿ. ಚೆನ್ನಪ್ಪ, ಕೃಷಿ ವಿಜ್ಞಾನ ಕೇಂದ್ರದ ರೋಗಗಳು ಹಾಗೂ ಸಿಬ್ಬಂದಿ. ವಿಚಾರ ಸಂಕಿರಣದಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಿಂದ ರೇಷ್ಮೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿದಂತೆ 1ಕ್ಕೂ ಅಧಿಕ ರೈತರು, ರೈತ ಮಹಿಳೆಯರು ಹಾಗೂ ಯುವ ರೈತರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯಲ್ಲಿ ವಿಶಿಷ್ಟ ಸಾಧನೆ ಮಾಡಿದ ಪ್ರಗತಿಪರ ರೈತರು ಹಾಗೂ ರೈತರನ್ನು ಸನ್ಮಾನಿಸಲಾಯಿತು, ಬಳಿಕ ಅವರು ತಮ್ಮ ಯಶೋಗಾಥೆ ಮತ್ತು ಅನುಭವಗಳನ್ನು ನೆರೆದವರೊಂದಿಗೆ ಹಂಚಿಕೊಂಡರು.

## ವಿಚಾರ ಸಂಕಿರಣ ಉದ್ಘಾಟನೆ, ಯೋಜನೆಯ ವಿವರ

ಮಂಡ್ಯದ ಕೃಷಿ ವಿಜ್ಞಾನ ಕೇಂದ್ರ, ವಿ.ಸಿ. ಫಾರಂನಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ, ಭಾರತೀಯ ಕೃಷಿ ಸಂಶೋಧನಾ ಮಂಡಳಿ?ಕೃಷಿ ವಿಜ್ಞಾನ ಕೇಂದ್ರ, ರೇಷ್ಮೆ ಕೃಷಿ ಇಲಾಖೆ, ಜಿಲ್ಲಾ ಪಂಚಾಯತ್, ಸರ್.ಎಂ. ವಿಶ್ವೇಶ್ವರಯ್ಯ ರೇಷ್ಮೆ ಬೆಳೆಗಾರರ ಸಂಘ ಹಾಗೂ ರೇಷ್ಮೆ ರೈತ ಉತ್ಪಾದಕರ ಕಂಪನಿ, ಕಟ್ಟೆದೊಡ್ಡಿ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯನಿರ್ವಹಿಸಿದ್ದಾರೆ "ರೇಷ್ಮೆ ಕೃಷಿ ಉದ್ಯಮಶೀಲತೆ?ಸ್ವಾವಲಂಬನೆಯತ್ತ ಸುವರ್ಣ ಹೆಜ್ಜೆ" ಎಂಬ ವಿಚಾರ ಸಂಕಿರಣವನ್ನು ಅವರು ಉದ್ಘಾಟಿಸಿದರು. ರೇಷ್ಮೆ ಕೃಷಿಯನ್ನು ಕೇವಲ ಬೆಳೆಯಾಗಿ ಪರಿಗಣಿಸಿ ಉದ್ಯಮವಾಗಿ ರೂಪಿಸಿಕೊಂಡು ರೈತರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಈ ಮಹತ್ವದ ವಿಚಾರ ಸಂಕಿರಣದ ಪ್ರಮುಖ ಉದ್ದೇಶವಾಗಿತ್ತು.

## ಆರ್ಥಿಕ ಸುಸ್ಥಿರತೆ, ಸರ್ಕಾರದ ಯೋಜನೆಗಳ ಸದುಪಯೋಗ

ತಮ್ಮ ಬಾಲ್ಯದ ದಿನಗಳಲ್ಲಿ ರೇಷ್ಮೆ ಕೃಷಿಗೆ ಹೊಂದಿದ್ದ ಅನುಭವವನ್ನು ಹಂಚಿಕೊಂಡ ಡಾ. ನಾರಾಯಣಸ್ವಾಮಿ, ರೇಷ್ಮೆ ಕೃಷಿಯಲ್ಲಿ ಪ್ರಗತಿ ಸಾಧಿಸಿರುವ ರೈತರು ಹಾಗೂ ಉದ್ಯಮಿಗಳ ಯಶೋಗಾಥೆಗಳು ಇತರರಿಗೆ ಪ್ರೇರಣೆಯಾಗಬೇಕು. ಉತ್ಪಾದನೆ, ಮಾರುಕಟ್ಟೆ ಪರಿಸ್ಥಿತಿ ಮತ್ತು ನಿರೀಕ್ಷಿತ ಆದಾಯವನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕವಾಗಿ ಸುಸ್ಥಿರ ರೀತಿಯಲ್ಲಿ ರೇಷ್ಮೆ ಕೃಷಿ ತೆಗೆದುಕೊಳ್ಳಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ. ಸಿ. ರಾಮಚಂದ್ರ ಮಾತನಾಡಿ, ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನ ಮತ್ತು ಸರ್ಕಾರಿ ಯೋಜನೆಗಳ ಕುರಿತು ನೇರ ಮಾಹಿತಿ ನೀಡುವ ಇಂತಹ ವಿಚಾರ ಸಂಕಿರಣಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು. ಇದರಿಂದ ಹೊಸ ತಾಂತ್ರಿಕ ಮಾಹಿತಿ ದೊರೆಯುವುದರ ಜೊತೆಗೆ ಆರ್ಥಿಕ ಸಬಲೀಕರಣಕ್ಕೂ ಸಹಕಾರಿಯಾಗಲಿದೆ ಎಂದು ಹೇಳಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಂಡ್ಯ ಜಿಲ್ಲಾ ಪಂಚಾಯತ್ನ ರೇಷ್ಮೆ ಕೃಷಿ ಉಪ ನಿರ್ದೇಶಕ ಡಾ. ಎಸ್. ಸುಂದರ್ ರಾಜ್ ಅವರು ರೇಷ್ಮೆ ವಿವಿಧ ಯೋಜನೆಗಳು ಹಾಗೂ ರೈತರಿಗೆ ಲಭ್ಯವಿರುವ ಸೌಲಭ್ಯಗಳ ಕುರಿತು ಮಾಹಿತಿ ಒದಗಿಸಲಾಗಿದೆ. ರೈತರು ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು, ವಿಶೇಷವಾಗಿ ಹನಿ ನೀರಾವರಿಗೆ ಆದ್ಯತೆ ನೀಡಿ ಪದ್ಧತಿಯಲ್ಲಿ ರೇಷ್ಮೆ ಕೃಷಿ ಕೈಗೊಳ್ಳಬೇಕು ಎಂದು ಸಲಹೆ ನೀಡಿ.

# ಹೆಚ್‌ಡಿಕೆ ಸಾಮರ್ಥ್ಯ ಇರಲಿ ಮೊದಲು ನಿಮ್ಮ ಸಾಮರ್ಥ್ಯ ಏನು ತೋರಿಸಿ

## ಶಾಸಕ ಪುಟ್ಟರಂಗಶೆಟ್ಟಿಗೆ ಆಲೂರುಮಲ್ಲು ಸವಾಲು

ಚಾಮರಾಜನಗರ: ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಸಾಮಾರ್ಥ್ಯ ಇರಲಿ ಪುಟ್ಟರಂಗಶೆಟ್ಟರೇ ಮೊದಲು ನಿಮ್ಮ ಸಾಮಾರ್ಥ್ಯ ಏನು ತೋರಿಸಿ ಎಂದು ಜೆಡಿಎಸ್ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಎ.ಎಂ.ಮಲ್ಲಿಕಾರ್ಜುನಸ್ವಾಮಿ (ಆಲೂರುಮಲ್ಲು) ಸವಾಲು ಹಾಕಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ. ಕೊಳ್ಳೇಗಾಲದಲ್ಲಿ ಇತ್ತೀಚಿಗೆ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಪಶುಸಂಗೋಪನಾ ಮತ್ತು ರೇಷ್ಮೆ ಖಾತೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಪುಟ್ಟರಂಗಶೆಟ್ಟರು ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಪ್ರಧಾನಿ ಬಳಿ ಚರ್ಚಿಸಲು ಸಾಮಾರ್ಥ್ಯ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ. ಅಲ್ಲದೆ ಬೇರೆ ಬೇರೆ ಕಡೆಯು ಟೀಕೆ ಮಾಡಿದ್ದಾರೆ. ನಿಮಗೇನು ಸಾಮಾರ್ಥ್ಯ ಇದೆ. ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿ ಸಾಮಾರ್ಥ್ಯವನ್ನು ತೋರಿಸಿದ್ದಾರೆ. ಗ್ರಾಮವಾಸವ್ಯ ಜನತಾದರ್ಶನ, ರೈತರ ಸಾಲಮನ್ನಾ ಮಾಡಿ ಅವರ ಸಾಮಾರ್ಥ್ಯವನ್ನು ತೋರಿಸಿದ್ದಾರೆ. ಅವರು ಪ್ರಧಾನಮಂತ್ರಿ ಕೇಳಿಕೊಂಡು ಸಾಲ ಮನ್ನಾ ಮಾಡುತಿನಿ ಎಂದು ಹೇಳಿಲ್ಲ. ರಾಜ್ಯ ಮುಖ್ಯಮಂತ್ರಿಯಾಗಿ 2 ಲಕ್ಷದವರೆಗೆ ರೈತರ ಸಾಲ ಮನ್ನಾ ಮಾಡಿದ್ದಾರೆ ಎಂದರು.

ಕುಮಾರಸ್ವಾಮಿ ಅವರು ದೀನದಲಿತರು, ರೈತರ ಸಮಸ್ಯೆ ಅರಿತು ಕೆಲಸ ಮಾಡಿದರು. ಪುಟ್ಟರಂಗಶೆಟ್ಟರು 20 ವರ್ಷದಿಂದ ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 4 ಬಾರಿ ಶಾಸಕರಾಗಿದ್ದಾರೆ. 2 ಬಾರಿ ಸಚಿವರು ಆಗಿದ್ದೀರಿ ಜಿಲ್ಲೆಗೆ ನಿಮ್ಮ ಕೊಡುಗೆ ಏನು? ನೀವು ಒಂದು ದಿನವಾದರೂ ಸೋನಿಯಾಗಾಂಧಿ ಅವರ ಜೊತೆ ಮಾತನಾಡಿದ್ದೀರಾ..? ಹೋಗಲಿ ಪ್ರಿಯಾಂಕಗಾಂಧಿ ಅವರೊಂದಿಗಾದರೂ ಮಾತನಾಡಿದ್ದೀರಿ. ಮಲ್ಲಿಕಾರ್ಜುನ ಖರ್ಗೆ ಅವರೊಂದಿಗಾಗದರೂ ಮಾತನಾಡಿದ್ದೀರಿ ಎಂದು ಜಿಲ್ಲೆಗೆ ನಿಮ್ಮ ಕೊಡುಗೆ ಏನು ಎಂದು ತರಾಟೆಗೆ ತೆಗೆದುಕೊಂಡರು.

ಮಾಜಿ ಸಂಸದ ದಿವಂಗತ ಧ್ರುವನಾರಾಯಣ್, ಹೆಚ್.ಎಸ್.ಮಹದೇವಪ್ರಸಾದ್ ಅವರು ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡಿದ್ದರು. ಪುಟ್ಟರಂಗಶೆಟ್ಟರು ಕಳೆದ 15 ವರ್ಷಗಳಿಂದ ಒಂದು ಬಸ್ ನಿಲ್ದಾಣ ಮಾಡಕ್ಕೆ ಆಗಲಿಲ್ಲ. ವಿ.ಸೋಮಣ್ಣ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಕೆರೆಗಳಿಗೆ ನೀರು ತುಂಬಿಸಿದ್ದರು. ಇವರ ಏನಪ್ಪ ತುಂಬಿಸಿದರು. ರೈತರೊಂದಿಗೆ ಏಕವಚನದಲ್ಲಿ ಮಾತನಾಡುತ್ತಾರೆ. ಕೊಳ್ಳೇಗಾಲದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮುಖ್ಯಮಂತ್ರಿಗಳನ್ನು ಬರಮಾಡಿಕೊಂಡು ಅಭಿವೃದ್ಧಿ ಕೆಲಸ ಮಾಡುತಿದ್ದಾರೆ. ನೀವು ಏನು ಮಾಡುತ್ತಿದ್ದೀರಿ. ಬರೀ ದುಡ್ಡ ಮಾಡೋದು, ಆಸ್ತಿ ಮಾಡೋದು ಮಾಡುತ್ತಿದ್ದಾರೆ. ಹೊರತು ಜಿಲ್ಲೆಯ ಜನತೆ, ಕ್ಷೇತ್ರದ ಜನತೆಗೆ ಏನು ಮಾಡಿಲ್ಲ ಎಂದು ಕಿಡಿ ಕಾರಿದರು. ರೈತರಿಗೆ ಬರಪರಿಹಾರ 2.500 ರೂ ಸಾಕೆ. ರೈತರ ಭಿಕ್ಷೆ ಬೇಡುವಾಂಗೆ ಆಯಿತು. ಪಂಚ ಗ್ಯಾರಂಟಿ ಯೋಜನೆಗಳು ವಿಫಲವಾಗಿವೆ. ಗೃಹಲಕ್ಷ್ಮೀ ಹಣ ಸರಿಯಾಗಿ ಬರುತ್ತಿಲ್ಲ. ಕಾಫಿ, ಟೀಗೆ 200 ಕೋಟಿ ಹೆಚ್ಚ. ಅಂಗವಿಕಲವೇತನ, ವಿಧವಾವೇತನ, ವೃದ್ಯಾಪ್ಯವೇತನ ಸ್ಥಗಿತಗೊಳಿಸಿದ್ದಾರೆ.

**ಸಿಎಂಗೆ ಕಪ್ಪು ಬಾವುಟ ಪ್ರದರ್ಶನ**

ಬರ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲರಾಗಿರುವ ಹಿನ್ನಲೆಯಲ್ಲಿ ಜಿಲ್ಲೆಯ ಕೊಳ್ಳೇಗಾಲಕ್ಕೆ ಬರುವ ಮುಖ್ಯಮಂತ್ರಿಗಳಿಗೆ ಕಪ್ಪುಭಾವುಟ ಪ್ರದರ್ಶನ ಮಾಡುವುದಾಗಿ ಆಲೂರುಮಲ್ಲು ಎಚ್ಚರಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ರಾಜ್ಯ ಕಾರ್ಯದರ್ಶಿ ಹೊಂಗನೂರು ರಾಜು, ಜಿಲ್ಲಾ ಉಪಾಧ್ಯಕ್ಷ ದೊಡ್ಡರಾಯಪೇಟೆ ಮಹೇಶ್‌ಗೌಡ, ಎಸ್‌ಟಿ ಘಟಕ ಜಿಲ್ಲಾಧ್ಯಕ್ಷ ರಾಮಚಂದ್ರ, ಮುಖಂಡರಾದ ಪಣ್ಯದಹುಂಡಿ ರಾಜಣ್ಣ, ನಾಗರಾಜು ಹಾಜರಿದ್ದರು



# ಮಾತಿಲ್ಲದ ಸಂಭಾಷಣೆ: ಹುಬ್ಬುಗಳ ಚಲನೆಯ ಹಿಂದಿರುವ ಮೆದುಳಿನ ರಹಸ್ಯ



| ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ

ಮಾನವನ ಮುಖದಲ್ಲಿ ಹುಬ್ಬುಗಳು ಕೇವಲ ಬೆವರು ಅಥವಾ ಧೂಳು ಕಣ್ಣಿಗೆ ಬೀಳದಂತೆ ತಡೆಯುವ ರಕ್ಷಣಾ ಕವಚ ಮಾತ್ರವಲ್ಲ; ಸಂವಹನ (Communication) ಮತ್ತು ಮಾನಸಿಕ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಇವುಗಳಿಗೆ ಪ್ರಮುಖ ಸ್ಥಾನವಿದೆ. ಅಶಾಬ್ದಿಕ ಸಂವಹನದಲ್ಲಿ (Non-verbal communication) ಹುಬ್ಬುಗಳು ಅತ್ಯಂತ ಶಕ್ತಿಶಾಲಿ ಮಾಧ್ಯಮವಾಗಿ ಕೆಲಸ ಮಾಡುತ್ತವೆ. ಮನುಷ್ಯನ ಸಂವಹನದಲ್ಲಿ ನಾಲಿಗೆಗಿಂತ ಕಣ್ಣುಗಳು ಮತ್ತು ಮುಖಭಾವಗಳೇ ಹೆಚ್ಚು ಸ್ಪಷ್ಟವಾಗಿ ಮಾತನಾಡುತ್ತವೆ. ಸಾವಿರ ಪದಗಳು ಹೇಳಲಾಗದ ಭಾವನೆಯನ್ನು ಮುಖದ ಒಂದು ಸಣ್ಣ ಸುಕ್ಕು ಅಥವಾ ಕಣ್ಣಿನ ನೋಟ ಕ್ಷಣಾರ್ಧದಲ್ಲಿ ತಿಳಿಸಿಬಿಡುತ್ತದೆ. ಅಂತಹ ಪ್ರಬಲ ಸಂವಹನಗಳಲ್ಲಿ ?ಹುಬ್ಬುಗಳನ್ನು ಮೇಲಕ್ಕೆತ್ತುವುದು? (Raising Eyebrows) ಅತ್ಯಂತ ಕುತೂಹಲಕಾರಿ ದೇಹಭಾಷೆ. ಮಾತೇ ಆಡದೆ ಹುಬ್ಬೇರಿಸುವ ಕ್ರಿಯೆಯ ಹಿಂದೆ ಕೇವಲ ನಾಟಕೀಯತೆ ಇರುವುದಿಲ್ಲ; ಬದಲಿಗೆ ಮೆದುಳಿನ ಸಂಕೀರ್ಣ ನರವಿಜ್ಞಾನ ಹಾಗೂ ಮನಶ್ಶಾಸ್ತ್ರೀಯ ಪ್ರತಿಕ್ರಿಯೆಗಳು ಅಡಗಿವೆ.

**ನರವಿಜ್ಞಾನದ ಲೆಕ್ಕಾಚಾರ:** ಕಣ್ಣಿನ ವಿಸ್ತರಣೆ ಮತ್ತು ಮಾಹಿತಿ ಗ್ರಹಿಕೆ

ಯಾವುದಾದರೂ ಅನಿರೀಕ್ಷಿತ ಘಟನೆ ನಡೆದಾಗ ಅಥವಾ ಆಶ್ಚರ್ಯಕರ ವಿಷಯವನ್ನು ಕೇಳಿದಾಗ ನಮ್ಮ ಹುಬ್ಬುಗಳು ತಾನಾಗಿಯೇ ಮೇಲಕ್ಕೇರುತ್ತವೆ. ನರವಿಜ್ಞಾನದ (Neuroscience) ಪ್ರಕಾರ, ನಮಗೆ ಆಶ್ಚರ್ಯವಾದಾಗ ಅಥವಾ ಪರಿಸ್ಥಿತಿಯ ಬಗ್ಗೆ ಹೆಚ್ಚಿನ ದೃಶ್ಯ ಮಾಹಿತಿ ಬೇಕಾದಾಗ ಮೆದುಳು ಮುಖದ ಸ್ನಾಯುಗಳಿಗೆ ತಕ್ಷಣವೇ ಆದೇಶ ನೀಡುತ್ತದೆ. ಇದರ ಪರಿಣಾಮವಾಗಿ ಕಣ್ಣುಗಳು ಅಗಲವಾಗುತ್ತವೆ ಹಾಗೂ ದೃಷ್ಟಿ ಕ್ಷೇತ್ರ (Field of Vision) ವಿಸ್ತಾರಗೊಳ್ಳುತ್ತದೆ. ಕಣ್ಣಿಗೆ ಹೆಚ್ಚು ಬೆಳಕು ಪ್ರವೇಶಿಸಲು ಮತ್ತು ಅಪಾಯ ಅಥವಾ ಹೊಸ ಸನ್ನಿವೇಶವನ್ನು ಸಂಪೂರ್ಣವಾಗಿ ಗ್ರಹಿಸಲು ಮೆದುಳು ನಡೆಸುವ ನೈಸರ್ಗಿಕ ತಂತ್ರವಿದು.




**ಒಂದು ಹುಬ್ಬು ಏರಿಸುವುದು:** ಸಂದೇಹ ಮತ್ತು ವಿಶ್ಲೇಷಣೆ ಎರಡೂ ಹುಬ್ಬುಗಳನ್ನು ಒಟ್ಟಿಗೆ ಮೇಲಕ್ಕೆತ್ತುವುದು ಆಶ್ಚರ್ಯ, ಭಯ ಅಥವಾ ಉತ್ಸಾಹವನ್ನು ತೋರಿಸಿದರೆ, ಕೇವಲ ?ಒಂದು ಹುಬ್ಬನ್ನು? ಮೇಲಕ್ಕೆತ್ತುವುದು ವಿಶಿಷ್ಟ ಸಂದೇಶಗಳನ್ನು ರವಾನಿಸುತ್ತದೆ:

ಸಂದೇಹ ಮತ್ತು ಪ್ರಶ್ನಾರ್ಥಕತೆ: ಎದುರಿನ ವ್ಯಕ್ತಿ ಹೇಳುತ್ತಿರುವುದು ಸುಳ್ಳು ಅಥವಾ ಅಸಂಬದ್ಧ ಎಂದೆನಿಸಿದಾಗ ಮೆದುಳು ಸ್ವಯಂಚಾಲಿತವಾಗಿ ಒಂದು ಹುಬ್ಬನ್ನು ಮೇಲಕ್ಕೆತ್ತಿ "ನಿಜವಾಗಿಯೂ ಹಾಗೇನಾ?" ಎಂಬ ಪ್ರಶ್ನಾರ್ಥಕ ಸಂಕೇತ ನೀಡುತ್ತದೆ.

ವಿಮರ್ಶಾತ್ಮಕ ಆಲೋಚನೆ: ಒಂದು ವಿಷಯವನ್ನು ಆಳವಾಗಿ ವಿಶ್ಲೇಷಿಸುವಾಗ ಅಥವಾ ಸವಾಲನ್ನು ಎದುರಿಸುವಾಗ ಮಾನಸಿಕ ಜಾಗರೂಕತೆಯ ಭಾಗವಾಗಿ ಈ ಮುಖಭಾವ ಹೊರಬರುತ್ತದೆ.

**ವ್ಯಂಗ್ಯ ಅಥವಾ ಪ್ರಾಬಲ್ಯ:** ಸಂಭಾಷಣೆಯಲ್ಲಿ ಮೇಲುಗೈ ಸಾಧಿಸಲು ಅಥವಾ ವ್ಯಂಗ್ಯವಾಡಲು ಜನರು ಉಪಪ್ರಜ್ಞಾಪೂರ್ವಕವಾಗಿ (ಣಭಿಭಿಂಟಿಭಿಂಣಾಟಥಿ) ಒಂದು ಹುಬ್ಬನ್ನು ಏರಿಸುತ್ತಾರೆ.

**ಸಂವಹನದಲ್ಲಿ ಹುಬ್ಬುಗಳ ಪ್ರಮುಖ ಪಾತ್ರಗಳು:**

**ಭಾವನೆಗಳ ತ್ವರಿತ ಪ್ರದರ್ಶನ:** ಯಾವುದೇ ಮಾತನ್ನಾಡದೆಯೇ ಕೋಪ, ಸಂತೋಷ, ಆಶ್ಚರ್ಯ, ಭಯ, ಸಂದೇಹ ಅಥವಾ ವಿಷಾದದಂತಹ ಮೂಲಭೂತ ಭಾವನೆಗಳನ್ನು ಎದುರಿನವರಿಗೆ ಸ್ಪಷ್ಟವಾಗಿ ದಾಟಿಸುವುದು ಹುಬ್ಬುಗಳ ಚಲನೆ. ಹುಬ್ಬುಗಳು ಗಂಟಿಕ್ಕಿದರೆ ಅಸಮಾಧಾನ ಅಥವಾ ಗಾಢ ಚಿಂತನೆ ಎಂದೂ, ಮೇಲಕ್ಕೇರಿದರೆ ಬೆರಗು ಅಥವಾ ಆಘಾತ ಎಂದೂ ತಕ್ಷಣವೇ ಅರ್ಥವಾಗುತ್ತದೆ.

**ಮಾತಿಗೆ ತೂಕ ಮತ್ತು ಒತ್ತು ನೀಡುವುದು** : ಮಾತನಾಡುವಾಗ ನಾವು ಮುಖ್ಯವಾದ ಪದಗಳು ಅಥವಾ ವಾಕ್ಯಗಳನ್ನು ಉಚ್ಚರಿಸುವಾಗ ಅರಿವಿಲ್ಲದೆಯೇ ಹುಬ್ಬುಗಳನ್ನು ಮೇಲಕ್ಕೆತ್ತಿ ಆಡಿಸುತ್ತೇವೆ. ಇದು ನಾವು ಹೇಳುತ್ತಿರುವ ಅಂಶದ ಗಾಂಭೀರ್ಯವನ್ನು ಅಥವಾ ಆಕರ್ಷಣೆಯನ್ನು ಹೆಚ್ಚಿಸಿ, ಕೇಳುಗರ ಗಮನವನ್ನು ಸೆಳೆಯಲು ಸಹಾಯ ಮಾಡುತ್ತದೆ.

ಸಾಮಾಜಿಕ ಸ್ವಾಗತ ಮತ್ತು ನಿಕಟತೆ (Eyebrow Flash): ಪರಿಚಿತ ವ್ಯಕ್ತಿಯನ್ನು ಕಂಡಾಗ ಅಥವಾ ಸ್ನೇಹಪರವಾಗಿ ಸಂಭಾಷಣೆ ಆರಂಭಿಸುವಾಗ ಕಣ್ಣುಗಳು ಅರಳುವುದರೊಂದಿಗೆ ಹುಬ್ಬುಗಳು ಕ್ಷಣಾರ್ಧದಲ್ಲಿ ಒಮ್ಮೆ ಮೇಲಕ್ಕೆದ್ದು ಇಳಿಯುತ್ತವೆ. ಇದು ಎದುರಿನ ವ್ಯಕ್ತಿಗೆ ಆತ್ಮೀಯತೆ ಹಾಗೂ ತೆರೆದ ಮನಸ್ಸಿನ ಸಂಕೇತವನ್ನು ರವಾನಿಸುತ್ತದೆ.

**ಆಲಿಸುವಿಕೆಯ ಪ್ರತಿಕ್ರಿಯೆ** : ಎದುರಿನ ವ್ಯಕ್ತಿಯು ಮಾತನಾಡುತ್ತಿರುವಾಗ ನಾವು ಹುಬ್ಬುಗಳನ್ನು ಸೂಕ್ಷ್ಮವಾಗಿ ಆಡಿಸುವುದು "ನಾನು ನಿಮ್ಮ ಮಾತನ್ನು ಆಸಕ್ತಿಯಿಂದ ಗಮನಿಸುತ್ತಿದ್ದೇನೆ ಮತ್ತು ಅರ್ಥಮಾಡಿಕೊಳ್ಳುತ್ತಿದ್ದೇನೆ" ಎಂಬ ಮೌನ ಸಮ್ಮತಿಯನ್ನು ನೀಡುತ್ತದೆ.

**ಮುಖದ ಗುರುತು ಮತ್ತು ಸಂವಹನ ಸ್ಪಷ್ಟತೆ:** ಮುಖದ ರಚನೆಗೆ ಚೌಕಟ್ಟು ನೀಡುವ ಹುಬ್ಬುಗಳು ಇಲ್ಲದಿದ್ದರೆ ಮುಖಭಾವಗಳನ್ನು ಗ್ರಹಿಸುವುದು ಕಷ್ಟವಾಗುತ್ತದೆ. ವ್ಯಕ್ತಿಯ ಮುಖದ ಗುರುತು ಪತ್ತೆಹಚ್ಚಲು ಮತ್ತು ಅವರ ಒಳಮನಸ್ಸಿನ ನೈಜ ಸ್ಥಿತಿಯನ್ನು ಅರಿಯಲು ಹುಬ್ಬುಗಳೇ ಮೊದಲ ಕನ್ನಡಿ.

ಹೀಗಾಗಿ, ಸಂವಹನದಲ್ಲಿ ಕಣ್ಣುಗಳಷ್ಟೇ ತೀವ್ರತೆಯಿಂದ ಮಾತನಾಡುವ ಹುಬ್ಬುಗಳು ಮನುಷ್ಯನ ಪರಸ್ಪರ ಸಂಬಂಧಗಳನ್ನು ಬೆಸೆಯುವ ಅಪ್ರತಿಮ ಸಂಕೇತಗಳಾಗಿವೆ.

ಐಬ್ರೋ ಫ್ಲ್ಯಾಶ್ ಮತ್ತು ಸಾಮಾಜಿಕ ನಿಕಟತೆ : ದೇಹಭಾಷಾ ತಜ್ಞರು ಐಬ್ರೋ ಫ್ಲ್ಯಾಶ್? (Eyebrow Flash) ಎಂಬ ಪರಿಕಲ್ಪನೆಯನ್ನು ಉಲ್ಲೇಖಿಸುತ್ತಾರೆ. ನಮಗೆ ಪರಿಚಿತರಾದ ಅಥವಾ ಇಷ್ಟವಾದ ವ್ಯಕ್ತಿಗಳು ಎದುರಾದಾಗ, ಒಂದು ಸೆಕೆಂಡಿನ ನೂರನೇ ಒಂದು ಭಾಗದಲ್ಲಿ ನಮ್ಮ ಹುಬ್ಬುಗಳು ಒಮ್ಮೆ ಮೇಲಕ್ಕೆದ್ದು ಕೆಳಗೆ ಇಳಿಯುತ್ತವೆ. ಇದು ಜಾಗತಿಕವಾಗಿ ಎಲ್ಲಾ ಸಂಸ್ಕೃತಿಗಳಲ್ಲೂ ಕಂಡುಬರುವ ಒಂದು ನೈಸರ್ಗಿಕ ಲಕ್ಷಣ. ಇದು ಎದುರಿಗಿರುವ ವ್ಯಕ್ತಿಗೆ "ನಾನು ನಿಮ್ಮನ್ನು ಗುರುತಿಸಿದ್ದೇನೆ, ನಿಮ್ಮ ಬಗ್ಗೆ ಸಕಾರಾತ್ಮಕ ಆಸಕ್ತಿಯಿದೆ ಮತ್ತು ನಾನು ನಿಮ್ಮ ಮಾತನ್ನು ಆಲಿಸುತ್ತಿದ್ದೇನೆ" ಎಂಬ ಸ್ನೇಹಪರ ಸೂಕ್ಷ್ಮ ಸಂಕೇತವನ್ನು (Micro-expression) ರವಾನಿಸುತ್ತದೆ.

**ಸುಳ್ಳು ಮುಚ್ಚಿಡಲಾಗದ ಕನ್ನಡಿ**

ಮುಖದ ಇತರ ಭಾವನೆಗಳನ್ನು ಕೃತಕವಾಗಿ ತರಿಸಿಕೊಳ್ಳುವುದು ಸುಲಭ; ಆದರೆ ಹುಬ್ಬುಗಳ ಸೂಕ್ಷ್ಮ ಚಲನೆಗಳನ್ನು ನಿಯಂತ್ರಿಸುವುದು ಕಷ್ಟಸಾಧ್ಯ. ಮೆದುಳಿನ ಲಿಂಬಿಕ್ ವ್ಯವಸ್ಥೆ? (Limbic System) ನೇರವಾಗಿ ಈ ಸ್ನಾಯುಗಳನ್ನು ನಿಯಂತ್ರಿಸುವುದರಿಂದ, ಆತಂಕ, ಕಳವಳ ಅಥವಾ ಆಶ್ಚರ್ಯ ಕ್ಷಣಮಾತ್ರದಲ್ಲಿ ಹುಬ್ಬುಗಳ ಮೂಲಕ ಹೊರಬೀಳುತ್ತದೆ.

ನಾವು ಎದುರಿಗಿರುವ ವ್ಯಕ್ತಿಯನ್ನು ಎಷ್ಟು ಗಮನವಿಟ್ಟು ಆಲಿಸುತ್ತಿದ್ದೇವೆ, ಅವರ ಮಾತುಗಳಿಗೆ ನಮ್ಮ ಪ್ರತಿಕ್ರಿಯೆ ಏನು ಎಂಬುದನ್ನು ನಮ್ಮ ಅರಿವಿಲ್ಲದೆಯೇ ನಮ್ಮ ಹುಬ್ಬುಗಳು ಜಗತ್ತಿಗೆ ಸಾರುತ್ತಿರುತ್ತವೆ. ದೇಹದ ಭಾಷೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಮಾತುಗಳ ನಡುವಿನ ಮೌನವನ್ನೂ ಸುಲಭವಾಗಿ ಓದಬಹುದು.

# ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?



| ಲಿಖಿತ್ ಹೊನ್ನಾಪುರ

> ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮೋಡ ಕಟ್ಟಿತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡೀತು ಹೇಗೆ
>
> ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ

ಕೆಲವು ಕಾವ್ಯಸಾಲುಗಳು ಕಿವಿಗೆ ಕೇಳಿ ಮರೆಯಾಗುವುದಿಲ್ಲ; ಅವು ಮನಸ್ಸಿನೊಳಗೆ ಇಳಿದು, ನಮ್ಮ ಬದುಕಿನ ಅರ್ಥವನ್ನೇ ಪ್ರಶ್ನಿಸುತ್ತವೆ. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಮೇಲಿನ ಸಾಲುಗಳು ಅಂತಹವು. ನೋಡಲು ಸರಳವಾದ ಪ್ರಶ್ನೆಗಳಂತೆ ಕಾಣುವ ಈ ಸಾಲುಗಳೊಳಗೆ ಪ್ರಕೃತಿ, ಮನುಷ್ಯ ಮತ್ತು ಬದುಕಿನ ನಡುವಿನ ಅವಿನಾಭಾವ ಸಂಬಂಧದ ಒಂದು ವಿಶಾಲವಾದ ತತ್ತ್ವ ಅಡಗಿದೆ.

ಹೂವು ಅರಳುತ್ತದೆ. ಮೋಡ ರೂಪುಗೊಳ್ಳುತ್ತದೆ. ಮಳೆ ಸುರಿಯುತ್ತದೆ. ಒಣಗಿದ ನೆಲ ಹಸಿರಾಗುತ್ತದೆ. ಇವೆಲ್ಲವೂ ಪ್ರಕೃತಿಯ ಸಹಜ ವಿದ್ಯಮಾನಗಳು. ಆದರೆ ಕವಿ ಈ ಸಹಜತೆಯ ಹಿಂದೆಯೇ ?ಪ್ರೀತಿ?ಯನ್ನು ಕಾಣುತ್ತಾರೆ. ಇಲ್ಲಿ ಪ್ರೀತಿ ಎಂದರೆ ಕೇವಲ ಇಬ್ಬರು ವ್ಯಕ್ತಿಗಳ ನಡುವಿನ ಭಾವನೆಯಲ್ಲ. ಅದು ಅಸ್ತಿತ್ವಗಳ ನಡುವಿನ ಪರಸ್ಪರ ಅವಲಂಬನೆ, ಕಾಳಜಿ, ಕೊಡುಗೆ ಮತ್ತು ಬದುಕನ್ನು ಬೆಳೆಸುವ ಶಕ್ತಿ.

ಒಂದು ಹೂವನ್ನು ಗಮನಿಸಿದರೆ ಅದರ ಸೌಂದರ್ಯದ ಹಿಂದೆ ಎಷ್ಟೋ ಕಾಣದ ಕೈಗಳಿವೆ. ಮಣ್ಣಿನ ಪೋಷಣೆ, ನೀರಿನ ತೇವ, ಸೂರ್ಯನ ಬೆಳಕು, ಗಾಳಿಯ ಸ್ಪರ್ಶ, ಋತುವಿನ ಅನುಕೂಲ ಇವೆಲ್ಲವೂ ಸೇರಿ ಮೊಗ್ಗನ್ನು ಅರಳಿಸುತ್ತವೆ. ಹೂವು ಯಾರೊಬ್ಬರ ಸ್ವತ್ತಲ್ಲ; ಅದು ಪ್ರಕೃತಿಯ ಅನೇಕ ಶಕ್ತಿಗಳ ಸಂಗಮದ ಫಲ. ಇದೇ ಸಂಗತಿಯೇ ಮನುಷ್ಯನ ಬದುಕಿಗೂ ಅನ್ವಯಿಸುತ್ತದೆ.

ಯಾವ ವ್ಯಕ್ತಿಯೂ ತನ್ನ ಬದುಕನ್ನು ಸಂಪೂರ್ಣವಾಗಿ ಒಬ್ಬನೇ ಕಟ್ಟಿಕೊಳ್ಳುವುದಿಲ್ಲ. ತಾಯಿಯ ಮಮತೆ, ತಂದೆಯ ಶ್ರಮ, ಗುರುವಿನ ಮಾರ್ಗದರ್ಶನ, ಸ್ನೇಹಿತರ ಸಹಕಾರ, ಸಮಾಜದ ಬೆಂಬಲ ಇವುಗಳೆಲ್ಲ ಸೇರಿ ವ್ಯಕ್ತಿತ್ವವನ್ನು ರೂಪಿಸುತ್ತವೆ. ನಮ್ಮ ಸಾಧನೆಯ ಹಿಂದೆ ನಮ್ಮಷ್ಟೇ ಕಾಣದ ಅನೇಕ ಜನರ ಪ್ರೀತಿ ಮತ್ತು ಸಹಕಾರವಿರುತ್ತದೆ. ಆದ್ದರಿಂದ ಬದುಕನ್ನು ಅರಿಯುವುದು ಎಂದರೆ ನಮ್ಮನ್ನು ರೂಪಿಸಿದ ಸಂಬಂಧಗಳ ಮೌಲ್ಯವನ್ನು ಅರಿಯುವುದೂ ಹೌದು.

ಕವಿಯ ?ಮೋಡ?ವೂ ಇಲ್ಲಿ ಒಂದು ಸುಂದರ ರೂಪಕ. ಸಮುದ್ರದಿಂದ ಆವಿಯಾದ ನೀರು ಮೋಡವಾಗಿ, ಮತ್ತೆ ಮಳೆಯಾಗಿ ಭೂಮಿಗೆ ಮರಳುತ್ತದೆ. ಪ್ರಕೃತಿಯಲ್ಲಿ ಯಾವುದೂ ತನ್ನಲ್ಲೇ ನಿಂತಿಲ್ಲ. ಪಡೆಯುವುದು, ಪರಿವರ್ತಿಸುವುದು ಮತ್ತು ಮರಳಿ ಕೊಡುವುದು ಈ ಚಕ್ರವೇ ಜೀವಜಗತ್ತಿನ ಚಲನೆ. ಮನುಷ್ಯನ ಸಂಬಂಧಗಳಲ್ಲಿಯೂ ಇದೇ ಕೊಡುಗೆ ಸ್ವೀಕಾರದ ಸಮತೋಲನ ಅಗತ್ಯ.

ಪ್ರೀತಿ ಎಂದರೆ ಕೇವಲ ಪಡೆಯುವ ಬಯಕೆಯಲ್ಲ; ಕೊಡುವ ಸಾಮರ್ಥ್ಯವೂ ಹೌದು. ಪ್ರತಿಫಲದ ನಿರೀಕ್ಷೆಯಿಲ್ಲದೆ ಮತ್ತೊಬ್ಬರ ಬದುಕಿಗೆ ಬೆಳಕಾಗುವ ಮನಸ್ಸು ಪ್ರೀತಿಯ ನಿಜವಾದ ರೂಪ. ತಾಯಿ ಮಗುವಿಗಾಗಿ ಮಾಡುವ ತ್ಯಾಗದಲ್ಲಿ, ರೈತ ಮಣ್ಣಿಗಾಗಿ ಸುರಿಸುವ ಬೆವರಿನಲ್ಲಿ, ಗುರು ವಿದ್ಯಾರ್ಥಿಯ ಭವಿಷ್ಯಕ್ಕಾಗಿ ನೀಡುವ ಸಮಯದಲ್ಲಿ, ಸ್ನೇಹಿತನ ಕಷ್ಟದ ಸಂದರ್ಭದಲ್ಲಿ ನೀಡುವ ಬೆಂಬಲದಲ್ಲಿ ಪ್ರೀತಿ ವಿಭಿನ್ನ ರೂಪಗಳಲ್ಲಿ ಕಾಣಿಸುತ್ತದೆ.

ಆದರೆ ಆಧುನಿಕ ಬದುಕು ಮನುಷ್ಯನನ್ನು ವೇಗದ ಓಟಕ್ಕೆ ತಳ್ಳಿದೆ. ಸಾಧನೆ, ಹಣ, ಸ್ಥಾನಮಾನ, ಸ್ಪರ್ಧೆ ಮತ್ತು ವೈಯಕ್ತಿಕ ಯಶಸ್ಸಿನ ನಡುವೆ ಸಂಬಂಧಗಳಿಗಾಗಿ ಮೀಸಲಿಡುವ ಸಮಯ ಕಡಿಮೆಯಾಗುತ್ತಿದೆ. ಕೈಯಲ್ಲಿರುವ ಸಾಧನಗಳು ನಮ್ಮನ್ನು ಜಗತ್ತಿನೊಂದಿಗೆ ಸಂಪರ್ಕಿಸಿದರೂ, ಪಕ್ಕದಲ್ಲಿರುವ ವ್ಯಕ್ತಿಯ ಮನಸ್ಸನ್ನು ಅರ್ಥಮಾಡಿಕೊಳ್ಳಲು ಬೇಕಾದ ಸಮಯವನ್ನು ಕೆಲವೊಮ್ಮೆ ಕಸಿದುಕೊಳ್ಳುತ್ತವೆ.

ಸಂದೇಶಗಳು ಹೆಚ್ಚಾಗಿವೆ; ಸಂಭಾಷಣೆ ಕಡಿಮೆಯಾಗಿದೆ. ಪರಿಚಯಗಳು ಹೆಚ್ಚಾಗಿವೆ; ಆತ್ಮೀಯತೆ ಎಲ್ಲೆಡೆ ಸಮಾನವಾಗಿ ಬೆಳೆದಿಲ್ಲ. ಇಂತಹ ಸಂದರ್ಭದಲ್ಲಿ ಕವಿಯ ಪ್ರಶ್ನೆ ಮತ್ತಷ್ಟು ಪ್ರಸ್ತುತವಾಗುತ್ತದೆ ಪ್ರೀತಿಯಿಲ್ಲದೆ ಬದುಕಿನ ನಿಜವಾದ ಹಸಿರು ಸಾಧ್ಯವೇ?

ಪ್ರೀತಿ ಇರುವುದೆಂದರೆ ಎಲ್ಲರನ್ನೂ ಮೆಚ್ಚಿಸುವುದಲ್ಲ. ಭಿನ್ನಾಭಿಪ್ರಾಯಗಳ ನಡುವೆಯೂ ಮತ್ತೊಬ್ಬರ ಅಸ್ತಿತ್ವವನ್ನು ಗೌರವಿಸುವುದು. ತಪ್ಪನ್ನು ತಿದ್ದುವಾಗ ವ್ಯಕ್ತಿಯನ್ನು ತಿರಸ್ಕರಿಸದಿರುವುದು. ಯಾರಾದರೂ ಮೌನವಾಗಿದ್ದಾಗ ಅವರ ಮೌನದ ಹಿಂದಿನ ನೋವನ್ನು ಕೇಳಲು ಪ್ರಯತ್ನಿಸುವುದು. ಒಬ್ಬರ ಯಶಸ್ಸನ್ನು ಕಂಡು ಅಸೂಯೆಪಡದೆ ಹರ್ಷಿಸುವುದು. ಇಂತಹ ಸಣ್ಣ ಮಾನವೀಯ ಗುಣಗಳೇ ಸಮಾಜವನ್ನು ಸುಂದರಗೊಳಿಸುತ್ತವೆ.

ಪ್ರಕೃತಿಯೊಂದಿಗೂ ನಮ್ಮ ಸಂಬಂಧ ಇದೇ ರೀತಿಯದ್ದು. ಮಳೆ ಬೇಕೆಂದು ಪ್ರಾರ್ಥಿಸುವ ನಾವು ಮರವನ್ನು ಉಳಿಸುವ ಜವಾಬ್ದಾರಿಯನ್ನೂ ಹೊತ್ತುಕೊಳ್ಳಬೇಕು. ಹಸಿರನ್ನು ಬಯಸುವ ನಾವು ಮಣ್ಣಿನ ಮೌಲ್ಯವನ್ನು ಅರಿಯಬೇಕು. ಅನ್ನವನ್ನು ಗೌರವಿಸುವ ನಾವು ಅನ್ನದಾತನ ಶ್ರಮವನ್ನು ಮರೆಯಬಾರದು. ಪ್ರಕೃತಿಯಿಂದ ಪಡೆಯುವುದಷ್ಟೇ ಅಲ್ಲ, ಅದಕ್ಕೆ ಮರಳಿ ನೀಡುವ ಮನೋಭಾವವೂ ನಮ್ಮೊಳಗೆ ಬೆಳೆಯಬೇಕು.



?ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡುತ್ತದೆ? ಎಂಬ ಚಿತ್ರಣದಲ್ಲಿ ಕವಿ ಬದುಕಿನ ಒಂದು ದೊಡ್ಡ ಸತ್ಯವನ್ನು ಹಿಡಿದಿಟ್ಟಿದ್ದಾರೆ. ಒಂದು ಸಣ್ಣ ಹನಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಾಗಲೇ ದೊಡ್ಡ ಹಸಿರಿನ ಭಾಗವಾಗುತ್ತದೆ. ಮನುಷ್ಯನ ಬದುಕಿನಲ್ಲಿಯೂ ಕೆಲವೊಮ್ಮೆ ಸ್ವಾರ್ಥವನ್ನು ಬದಿಗಿಟ್ಟು ಮಾಡುವ ಸಣ್ಣ ತ್ಯಾಗವೇ ಮತ್ತೊಬ್ಬರ ಬದುಕಿನಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಗುತ್ತದೆ.

ಒಂದು ಒಳ್ಳೆಯ ಮಾತು ಯಾರದೋ ಆತ್ಮವಿಶ್ವಾಸವನ್ನು ಮರಳಿ ತರಬಹುದು. ಒಂದು ಅವಕಾಶ ಯಾರದೋ ಭವಿಷ್ಯವನ್ನು ಬದಲಿಸಬಹುದು. ಒಂದು ಕ್ಷಮೆ ಮುರಿದ ಸಂಬಂಧವನ್ನು ಜೋಡಿಸಬಹುದು. ಒಂದು ಪುಸ್ತಕದ ಉಡುಗೊರೆ ಯಾರದೋ ಚಿಂತನೆಗೆ ಹೊಸ ದಿಕ್ಕು ನೀಡಬಹುದು. ಒಂದು ಗುರುತಿಸುವಿಕೆ ಒಬ್ಬ ಯುವ ಪ್ರತಿಭೆಗೆ ಮತ್ತಷ್ಟು ಬೆಳೆಯುವ ಧೈರ್ಯ ನೀಡಬಹುದು. ಇವು ದೊಡ್ಡ ಕಾರ್ಯಗಳಂತೆ ಕಾಣದಿದ್ದರೂ, ಬದುಕಿನ ಮಣ್ಣಿನಲ್ಲಿ ಇವುಗಳೇ ಹಸಿರು ಮೂಡಿಸುತ್ತವೆ.

ಪ್ರೀತಿಯ ಮತ್ತೊಂದು ಆಯಾಮವೆಂದರೆ ಸ್ವಾಭಿಮಾನ. ತನ್ನನ್ನು ಗೌರವಿಸಿಕೊಳ್ಳದ ವ್ಯಕ್ತಿಯಿಂದ ಆರೋಗ್ಯಕರ ಸಂಬಂಧಗಳನ್ನು ಕಟ್ಟುವುದು ಕಷ್ಟ. ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವ ಧೈರ್ಯ, ತನ್ನ ಮಿತಿಗಳನ್ನು ಅರಿಯುವ ವಿವೇಕ ಮತ್ತು ಮತ್ತೊಬ್ಬರ ಗಡಿಗಳನ್ನು ಗೌರವಿಸುವ ಸಂವೇದನೆ ಇವೆಲ್ಲವೂ ಪ್ರೀತಿಯ ಪರಿಪಕ್ವ ರೂಪಗಳು.

ಹೀಗಾಗಿ ಜಿ.ಎಸ್. ಶಿವರುದ್ರಪ್ಪನವರ ಈ ಸಾಲುಗಳನ್ನು ಕೇವಲ ಪ್ರೇಮಕಾವ್ಯದ ಹಿನ್ನೆಲೆಯಲ್ಲಿ ನೋಡುವುದು ಅವುಗಳ ವ್ಯಾಪ್ತಿಯನ್ನು ಸೀಮಿತಗೊಳಿಸಿದಂತಾಗುತ್ತದೆ. ಅವು ಪ್ರಕೃತಿಯ ಭಾಷೆಯಲ್ಲಿ ಮಾನವೀಯತೆಯ ಪಾಠವನ್ನು ಹೇಳುತ್ತವೆ. ಮನುಷ್ಯನ ಬದುಕು ಸಂಬಂಧಗಳಿಂದ ರೂಪುಗೊಳ್ಳುತ್ತದೆ; ಸಂಬಂಧಗಳು ಕಾಳಜಿಯಿಂದ ಉಳಿಯುತ್ತವೆ; ಕಾಳಜಿ ಪ್ರೀತಿಯಿಂದ ಹುಟ್ಟುತ್ತದೆ.

ಒಂದು ಸಮಾಜದಲ್ಲಿ ಪ್ರೀತಿ ಎಂದರೆ ಕೇವಲ ಭಾವನಾತ್ಮಕ ಪದವಲ್ಲ. ಅದು ಸಾಮಾಜಿಕ ಜವಾಬ್ದಾರಿ. ಹಿರಿಯರನ್ನು ಗೌರವಿಸುವುದರಿಂದ ಹಿಡಿದು ಮಕ್ಕಳನ್ನು ಅರ್ಥಮಾಡಿಕೊಳ್ಳುವವರೆಗೆ, ಕಾರ್ಮಿಕನ ಶ್ರಮವನ್ನು ಮೌಲ್ಯೀಕರಿಸುವುದರಿಂದ ಹಿಡಿದು ಪ್ರಕೃತಿಯ ಹಕ್ಕನ್ನು ಒಪ್ಪಿಕೊಳ್ಳುವವರೆಗೆಪ್ರೀತಿಯ ವ್ಯಾಪ್ತಿ ವಿಶಾಲ.

ಕೊನೆಗೆ ಕವಿಯ ಪ್ರಶ್ನೆ ನಮ್ಮೊಳಗೇ ಪ್ರತಿಧ್ವನಿಸುತ್ತದೆ.

ಹೂವು ಅರಳಲು ಪ್ರಕೃತಿಯ ಅನೇಕ ಅಂಶಗಳು ಒಂದಾಗಬೇಕಾದರೆ, ಮನುಷ್ಯನ ಬದುಕು ಅರಳಲು ಎಷ್ಟು ಹೃದಯಗಳು ಒಂದಾಗಬೇಕು?

ಬಹುಶಃ ಬದುಕಿನ ಸೌಂದರ್ಯ ದೊಡ್ಡ ಸಂಗತಿಗಳಲ್ಲಿಲ್ಲ. ಯಾರಾದರೂ ನಮ್ಮನ್ನು ನೆನಪಿಸಿಕೊಳ್ಳುವ ಒಂದು ಕ್ಷಣದಲ್ಲಿ, ನಮ್ಮ ನೋವನ್ನು ಅರ್ಥಮಾಡಿಕೊಳ್ಳುವ ಒಂದು ಹೃದಯದಲ್ಲಿ, ನಾವು ಕುಗ್ಗಿದಾಗ ಕೈಹಿಡಿಯುವ ಒಂದು ಸಂಬಂಧದಲ್ಲಿ ಅದು ಅಡಗಿದೆ.

ಮಳೆಯ ಹನಿ ನೆಲವನ್ನು ತೋಯಿಸಿ ಹಸಿರಾಗಿಸುವಂತೆ, ಪ್ರೀತಿಯ ಒಂದು ಹನಿ ಮನುಷ್ಯನ ಮನಸ್ಸನ್ನು ತೋಯಿಸಿದರೆ ಸಾಕು ಅಲ್ಲಿ ಭರವಸೆಯ ಮೊಗ್ಗು ಮೂಡುತ್ತದೆ, ಮಾನವೀಯತೆಯ ಹೂವು ಅರಳುತ್ತದೆ.

ಪ್ರೀತಿ ಇರುವಲ್ಲಿ ಬದುಕು ಬರಡಾಗುವುದಿಲ್ಲ.

ಕಾಳಜಿ ಇರುವಲ್ಲಿ ಸಂಬಂಧಗಳು ಒಣಗುವುದಿಲ್ಲ.

ಮಾನವೀಯತೆ ಇರುವಲ್ಲಿ ಜಗತ್ತು ಸಂಪೂರ್ಣ ಕತ್ತಲಾಗುವುದಿಲ್ಲ.

ಆದ್ದರಿಂದಲೇ ಕವಿಯ ಪ್ರಶ್ನೆಗೆ ಉತ್ತರವನ್ನು ಪ್ರಕೃತಿಯಲ್ಲಿ ಮಾತ್ರವಲ್ಲ, ನಮ್ಮ ಬದುಕಿನಲ್ಲಿಯೂ ಹುಡುಕಬೇಕು

ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ

# ಬದುಕಿನ ಸಾರ್ಥಕತೆ ಮತ್ತು ಸಾವಿನ ಸ್ವೀಕಾರ

ಬದುಕಿನ ಅರ್ಥ ಕಂಡಾಗ ಸಾವಿನ ಅಳುಕು ಮಾಯವಾಗುತ್ತದೆ. ಗುರಿ ಇರುವ ಮನಸ್ಸು ಸೆರೊಟೋನಿನ್ ಮತ್ತು ಆಕ್ಸಿಟೋಸಿನ್ ರಸಗಳನ್ನು ಸಮತೋಲನದಲ್ಲಿ ಇಡುತ್ತದೆ. ಇದರಿಂದ ಪ್ರಿಫ್ರಂಟಲ್ ಕಾರ್ಟೆಕ್ಸ್ ಚುರುಕಾಗಿ, ನಿರ್ಧಾರದ ಸಾಮರ್ಥ್ಯ ಹೆಚ್ಚುತ್ತದೆ. ಕೆನಡಾದ ಅಧ್ಯಯನ ಹೇಳುತ್ತದೆ: ಜೀವನದಲ್ಲಿ ಉದ್ದೇಶ ಕಂಡುಕೊಂಡವರಿಗೆ ರಕ್ತದೊತ್ತಡ ಸ್ಥಿರವಾಗಿ, ಆಯುಷ್ಯ ಸರಾಸರಿ 7 ವರ್ಷ ಹೆಚ್ಚುತ್ತದೆ. ಸಾರ್ಥಕತೆಯೇ ದೇಹದ ಅತ್ಯುತ್ತಮ ಔಷಧ.

ಸಾರ್ಥಕ ಬದುಕು ಸಮಾಜಕ್ಕೆ ಕೊಡುಗೆ. ಕೆರೆ ಏರಿ ಮೇಲೆ ಎಲ್ಲರೂ ಕೂರಲಿ ಎಂದು ಆಲದ ಮರ ನೆಡುವ ರೈತ, ಮುಂದಿನವರಿಗೆ ತಂಪು ನೀಡುತ್ತಾನೆ. ಪರೀಕ್ಷೆ ಸಮಯದಲ್ಲಿ ನೋಟ್‌ಬುಕ್ ಹಂಚುವ ಕಾಲೇಜು ಹುಡುಗಿ, ಸ್ನೇಹಿತರ ಆತಂಕ ಇಳಿಸುತ್ತಾಳೆ. ಸಂಜೆ ವೇಳೆ ಬೀದಿ ನಾಯಿಗೆ ಅನ್ನ ಹಾಕುವ ಅಂಗಡಿಯವ, ಕರುಣೆಯ ಸಂದೇಶ ಸಾರುತ್ತಾನೆ. ಒಬ್ಬರ ಅರ್ಥಪೂರ್ಣ ಬದುಕು ಇಡೀ ಬಡಾವಣೆಗೆ ಸ್ಫೂರ್ತಿ.

ಸಾರ್ಥಕತೆ ಗಳಿಸಲು ಹೀಗೆ ಮಾಡಿ: ಮುಂಜಾನೆ ಇಂದು ಒಂದು ಒಳ್ಳೆಯ ಕೆಲಸ ಮಾಡುವೆ ಎಂದು ಸಂಕಲ್ಪ ಮಾಡಿ.



ದಿನಕ್ಕೊಮ್ಮೆ ಯಾರಿಗಾದರೂ ಮನಸಾರೆ ಧನ್ಯವಾದ ಹೇಳಿ. ವಾರಕ್ಕೆ ಒಂದು ಗಂಟೆ ನಿಮ್ಮ ಕೌಶಲವನ್ನು ಉಚಿತವಾಗಿ ಬೇರೆಯವರಿಗೆ ಕಲಿಸಿ. ತಿಂಗಳಿಗೊಮ್ಮೆ ಹಳೆಯ ಪುಸ್ತಕಗಳನ್ನು ಸಂಗ್ರಹಿಸಿ, ಗ್ರಂಥಾಲಯಕ್ಕೆ ದಾನ ಮಾಡಿ. ವರ್ಷಕ್ಕೊಮ್ಮೆ ರಕ್ತದಾನ ಮಾಡಿ, ನನ್ನಿಂದ ಒಂದು ಜೀವ ಉಳಿಯಲಿ ಎಂದು ಹಾರೈಸಿ. ಹೀಗೆ ಮಾಡಿದರೆ ಪ್ರತಿ ಕ್ಷಣಕ್ಕೂ ಮೌಲ್ಯ ಬರುತ್ತದೆ.

ಬದುಕಿನ ಬೀಜ ಬಿತ್ತಿದವನಿಗೆ ಸಾವಿನ ಭಯವಿಲ್ಲ. ಸಾರ್ಥಕತೆಯ ಬೆಳಕು ಇರುವವನಿಗೆ ಕೊನೆಯ ದಿನವೂ ಪೂರ್ಣಿಮೆ. ಸಾವನ್ನು ನಗುಮೊಗದಿಂದ ಸ್ವೀಕರಿಸುವುದೇ ಜೀವನದ ಜಯ.



ಅಂಕಣ-34
ಸಾವು ಸಂಕಟಪಡುವ ಸಂಗತಿಗಳು..!
|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

# 'ನಾನೊಬ್ಬನೇ ಸರಿ' ಎಂಬ ಅಹಂ ಏಕೆ..?



| ಬಸವರಾಜ ಹೊನಗೌಡರ

"ನನ್ನ ಯೋಚನೆ ಸರಿಯಿದೆ. ನನ್ನ ನಂಬಿಕೆ ಸರಿಯಿದೆ" ಎಂಬ ಮಾತುಗಳಲ್ಲಿ ಆತ್ಮವಿಶ್ವಾಸ ಕಾಣುತ್ತದೆ. ಆದರೆ "ನಾನು ಯೋಚಿಸಿದ್ದಷ್ಟೇ ಸರಿ" ಎಂಬ ವಾದ ಹಟಮಾರಿ ಗುಣವನ್ನು ತೋರಿಸುತ್ತದೆ. ನಮ್ಮ ಜೊತೆ ನಾಲ್ಕಾರು ಜನರಿದ್ದರೆ ಅವರ ಅಭಿಪ್ರಾಯಗಳು ಭಿನ್ನವಾಗಿರುತ್ತವೆ. ಅವರ ಅಭಿಪ್ರಾಯಕ್ಕೆ, ಅವರ ಯೋಚನೆಗಳಿಗೆ ನಾವು ಬೆಲೆ ಕೊಡಬೇಕಾಗುತ್ತದೆ. ಅವುಗಳಲ್ಲಿ ಒಳ್ಳೆಯ ಅಂಶಗಳು ಕಂಡು ಬಂದರೆ ನಾವು ಅವುಗಳನ್ನು ಅಳವಡಿಸಿಕೊಂಡರೆ ತಪ್ಪೇನಿಲ್ಲ. ಆದರೆ ಇಂದು ನಾವು "ಬಾವಿಯೊಳಗಿನ ಕಪ್ಪೆಯಂತೆ" ನಾನೊಬ್ಬನೇ ಜ್ಞಾನಿ, ನನಗಷ್ಟೇ ಜಗತ್ತು ಗೊತ್ತು, ನಾನು ಹೇಳಿದಂತೆ ಎಲ್ಲರೂ ಕೇಳಬೇಕೆಂಬ ಮನೋಭಾವನೆಯ ಜನರನ್ನು ಪ್ರತಿದಿನ ನಾವು ನೋಡುತ್ತಿರುತ್ತೇವೆ.

ಬಡಾಯಿ ಕೊಚ್ಚಿಕೊಳ್ಳುವುದು, ಸ್ವಪ್ರಶಂಸೆ ಮಾಡಿಕೊಳ್ಳುವುದು ಕೆಲವರಿಗೆ ರಕ್ತಗತವಾಗಿ ಬಂದಿರುತ್ತದೆ. ಇವರು ಬಾಯಿ ತೆಗೆದರೆ ಸಾಕು "ನಾನೇ ಮಾಡಿದೆ, ನಾನೇ ಹೇಳಿದೆ, ನನಗೆ ಅದು ಎಲ್ಲಾ ಗೊತ್ತು, ಇದು ಗೊತ್ತು" ಇಂತಹ ಮಾತುಗಳೇ. ಇವರು ಪ್ರತಿಯೊಂದಕ್ಕೂ ವಾದ ಮಾಡುತ್ತಿರುತ್ತಾರೆ. ವಾದ ಮಾಡುವುದು ತಪ್ಪಲ್ಲ, ಅವಶ್ಯಕತೆ ಇದ್ದಾಗ ವಾದ ಮಾಡಲಿ. ಮಾತು ಮಾತಿಗೆ ವಾದ ಮಾಡುವವರನ್ನು ಯಾರು ತಾನೆ ಸಹಿಸಿಕೊಳ್ಳುತ್ತಾರೆ?? ಜಗಳಗಂಟ, ಬಡಾಯಿಕೊಚ್ಚಿಕೊಳ್ಳುವವ ಎಂಬ ಕೆಟಗರಿಗೆ ಜನ ಇಂತಹವರನ್ನು ಸೇರಿಸಿದರೆ ಮುಗಿಯಿತು. ಅವರ ಮಾತಿಗೆ ಹಾಗೂ ಅವರಿಗೆ ಯಾವುತ್ತೂ ಬೆಲೆ ಇರುವುದಿಲ್ಲ. ಎಷ್ಟೇ ಶಿಕ್ಷಣ ಪಡೆದರೂ ವ್ಯರ್ಥವಾಗುತ್ತದೆ.

ನಾನೇ ಎಂಬ ರೋಗಕ್ಕೆ ಎಷ್ಟೋ ವಿವಾಹಗಳು ಮುರಿದು ಬಿದ್ದಿವೆ. ಪ್ರೀತಿಸಿ ಮದುವೆಯಾಗಿ ಜೀವನಪೂರ್ತಿ ನಿನ್ನ ಜೊತೆ ಸಂಸಾರ ಮಾಡುತ್ತೇನೆಂದು ಸಪ್ತಪದಿ ತುಳಿದ




ಜೋಡಿಗಳು ಕೆಲವೇ ದಿನಗಳಲ್ಲಿ ಅಹಂ ಅಡ್ಡ ಬಂದು ವಿವಾಹ ಸಂಬಂಧಗಳು ಅಡ್ಡಡ್ಡಲಾಗಿ ಮಲಗಿದ್ದನು ಕಂಡಿದ್ದೇವೆ. "ನಾನೇ" ಇಂಬುದು ಇಬ್ಬರಲ್ಲೂ ಇದ್ದದ್ದೇ ಇದಕ್ಕೆ ಕಾರಣ. ಇನ್ನೂ ಕೆಲವು ಕುಟುಂಬಗಳು ನಡೆಯುತ್ತಿವೆ ಆದರೆ ಪ್ರತಿದಿನ ಜಗಳದೊಂದಿಗೆ ಮನೆಯನ್ನೆ ನರಕ ಮಾಡಿರುತ್ತಾರೆ. ಅಲ್ಲಿಯೂ "ನಾನೇ" ಎಂಬ ಅಹಂಭಾವವೇ ಕಾರಣ. ನಾನೊಬ್ಬನೇ ಸರಿಯೆಂಬ ಮನೋಭಾವ ಸಂಬಂಧಗಳಿಗೆ ಮಾರಕವಾದದ್ದು.

ಎಷ್ಟೋ ರಾಜಮನೆತನಗಳು ಹಾಳಾದದ್ದು ಇದೆ ಅಹಂಕಾರದಿಂದಲೇ. ಜಗತ್ತನ್ನೇ ಗೆಲ್ಲುತ್ತೇನೆಂಬ ಸರ್ವಾಧಿಕಾರಿಗಳು ಹಾಳಾದದ್ದು ನಾನೇ ಎಂಬ ರೋಗದಿಂದಲೇ. ಸಾಮ್ರಾಜ್ಯಗಳು ಸಹ ಇದರಿಂದಲೇ ನಶಿಸಿ ಹೋದದ್ದು ಇತಿಹಾಸದ ಪುಟಗಳಲ್ಲಿ ಓದಿರುತ್ತೇವೆ. ಅಷ್ಟೇ ಏಕೆ ಇಂದು ನಡೆಯುತ್ತಿರುವ ರಷ್ಯಾ – ಯುಕ್ರೇನ್, ಇಸ್ರೇಲ್ – ಪ್ಯಾಲಿಸ್ಟೈನ್ ಮುಂತಾದ ದೇಶಗಳು ಸಹ ನಾನೇ ಶ್ರೇಷ್ಠ ಎಂಬ ಅಹಂಕಾರದಲ್ಲಿಯೇ ಯುದ್ಧಗಳು ನಡೆಯುತ್ತಿದ್ದು ಅಲ್ಲಿನ ಸಾಮಾನ್ಯ ಜನರ ಬದುಕನ್ನು ನರಕ ಮಾಡಿವೆ.

"ಈ ಜಗತ್ತು ಸಿಂಧು, ನಾನು ಅದರೊಳಗಿನ ಬಿಂದು" ಎಂಬ ಸತ್ಯವನ್ನು ಮನುಷ್ಯ ಅರಿತು ನಡೆದರೆ ನೆಮ್ಮದಿ ಪಯಣ ನಮ್ಮದಾಗಬಹುದು.

ಮಹಾನ್ ಜಗತ್ತಿನಲ್ಲಿ ಕೋಟಿಗಳ ಲೆಕ್ಕದಲ್ಲಿ ಜನಸಂಖ್ಯೆ ಇರುವಾದ ಯಾವುದೊ ಒಂದು ಮೂಲೆಯಲ್ಲಿ ಕುಳಿತು 'ನಾನೇ' ಎಂದು ಅಹಂಕಾರ ಪಡುವುದು ಎಷ್ಟು ಸರಿ.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ||

ಎಂಬ ಡಿ.ವಿ.ಜಿಯವರ ಮಾತನ್ನು ಜೀವನದಲ್ಲಿ ಅಳವಡಿಸಿಕೊಂಡು ಎಲ್ಲರೊಳಗೊಂದಾದರೆ ಬದುಕು ಸಾರ್ಥಕವಾದೀತು.

ಮನಸ್ಸಿನಲ್ಲಿರುವ ಅಹಂಕಾರ ಕಣ್ಣಿನಲ್ಲಿ ಬಿದ್ದಿರುವ ದೂಳಿನಂತೆ, ಅದನ್ನು ಸ್ವಚ್ಛಗೊಳಿಸದಿದ್ದರೆ ನಾವು ನೋಡುವ ಪ್ರತಿಯೊಂದು ವಸ್ತು ಕೂಡ ಅಶುದ್ಧವಾಗಿ ಕಾಣಿಸುತ್ತದೆ. ಅಹಂಕಾರ ಹೊಂದಿದ ವ್ಯಕ್ತಿ ವಿವೇಚನೆ ಕಳೆದುಕೊಂಡಿರುತ್ತಾನೆ. ಅವನೊಬ್ಬನೆ ಹಾಳಾಗುವುದರೊಂದಿಗೆ ಅವನನ್ನು ನಂಬಿದ ಜನರನ್ನೂ ಹಾಳು ಮಾಡುತ್ತಾನೆ. 'ನಾನು' ಎಂಬ ಶಬ್ದದ ಬದಲಾಗಿ 'ನಾವು' ಎಂಬ ಶಬ್ದ ಉಪಯೋಗಿಸಿದರೆ ಅದರಿಂದ ಫಲಿತಾಂಶವೇ ಭಿನ್ನವಾಗಿರುತ್ತದೆ. ಹತ್ತು ಜನರ ಮಧ್ಯದಲ್ಲಿ ನಾವು ಬದುಕಬೇಕೆಂದರೆ ಹೊಂದಾಣಿಕೆ ಮುಖ್ಯ. ನಾನೊಬ್ಬನೇ ಹೇಳಿದ್ದನ್ನು ಎಲ್ಲರೂ ಕೇಳಬೇಕೆಂಬ ಮನಸ್ಥಿತಿಯಿಂದ ಮೊದಲು ಹೊರಗೆ ಬರಬೇಕು. ರಾಜ ಮಹಾರಾಜರ ಕಾಲ ಹೋಗಿದೆ. ನಾನು ನಿನಗೆ ನೀನು ನನಗೆ ಅಷ್ಟೇ.

"ನಾನೊಬ್ಬನೇ ಸರಿ" ಎಂಬುವುದು ಮನೋವಿಕಾರ. ಇದೊಂದು ರೋಗ. ಇದರಿಂದ ಏನೂ ಪ್ರಯೋಜನವಿಲ್ಲ. ನಾವು ನಾಲ್ಕು ಜನರಲ್ಲಿ ಒಂದಾಗಿ ಬದುಕೋಣ. ಇನ್ನು ಮುಂದಾದರೂ 'ನಾನು' ಬದಲಾಗಿ 'ನಾವು' ಎಂಬ ಮನೋಭಾವ ಬೆಳೆಸಿಕೊಳ್ಳೋಣ, ಖುಷಿಯಾಗಿರೋಣ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,